# GODHI BANNA SADHARANA MYKATTU

A FILM BY HEMANTH M RAO & TEAM

PUSHKAR FILMS
LOST N FOUND FILMS

# 1. EXT. DAY. CITY OUTSKIRTS

## Murder scene

Ranga picks up a BBMP govt official who recently has been kicking up a racket about the discrepancies with regard to a certain piece of land. On the way to the site inspection, another man gets into the car. This man isn't much of a talker. His mere presence makes the govt official uncomfortable but Ranga tells him not to worry. As they are driving, the silent man puts a string around the govt official's neck and strangles him. Ranga continues to drive as if nothing is happening. Title on Wide shot of empty city outskirts.

# 2. INT.DAY.SHIVA'S OFFICE

## Shiva intro

Jaswinder: Ready for the big day?
Shiva: (smiles)
Jaswinder: sab kuch tere haat main hai….we need this client….
Shiva: Don't worry it'll go well….
Jaswinder: Tu yeh client hamko dilwaadhe….Tere newyork wallah kwaish main poora karoonga.
Shiva: Jaswinder this client is already ours….We know everything about this client…uska tooth paste se favourite item girl..sub kuch.. …..bas….aap mujhe bhejneka intazzam shuru kariye. (Shiva smiles)
Jaswinder: (Delighted at Shiva's confidence) done….Mumbai Kab vapis jaa raha hai?
Shiva: Meeting ke baad…kal sham ka flight hai….
Jaswinder: I'm having dinner with Khanna saab….join us
Shiva: Small personal kaam tha..will finish and join you
Jaswinder: Theek hai….i'll call you.

# 3. INT. DAY.OLD AGE HOME
# carrom scene

**Scene description: Venkob Rao is playing carom with a 9 yrs. old boy Susheel, The board has just one white, one black and a red pawn. Rao pockets a white pawn**

ಸುಶೀಲ್ : ಲೈನ್ ಮೇಲೆ ಕರೆಕ್ಟ್ ಆಗಿ ಇಟ್ಕೊಂಬೇಕು. ನಾನು ಚಿಕ್ಕೋನಂತಾ ಮೋಸ ಮಾಡಂಗಿಲ್ಲ.

ರಾವ್ : ಸರಿ.

ಸುಶೀಲ್ : ಇವಾಗೇನೊ ಲೈನ್ ಮೇಲೆ ಇಟ್ಕೊಂಡಿದೀಯಾ, ಆಮೇಲ್ ಹೊಡಿಬೇಕಾದ್ರೆ, ಮಾತ್ರ ಮೆತ್ತಿಗ್ ಮುಂದೆ ಜರ್ಗಿಸ್ಕೊಂಡ್ ಬಂದ್‌ಬಿಡ್ತಿಯಾ.

**Rao pockets the red.**

ಸುಶೀಲ್ : ಓ! ಅಮ್ಮ ಕರೀತಾ ಇದಾರೆ.

**Susheel grabs the striker and runs out. Susheel goes to a corner and starts counting till hundred**

# 4. INT. DAY.OLD AGE HOME
# Shiva enter old age home+Shiva talks to Sahana

**Towards Scene description: Shiva at old age home.**

ಶಿವ : **Yeah Karan I just landed in Bangalore, I have some personal matter to attend to, will be in office within 2 hours. (Cuts the call)**

ಶಿವ : ಪೇಷಂಟ್ ಮೀಟ್ ಮಾಡ್ಬೇಕು.

ವೀಣಾ(**receptionist**):ಸರ್ ಎಂಟ್ರಿ ಮಾಡಿ, ಏನ್ ಹೆಸರು **Patient** ದು?

ಶಿವ : ವೆಂಕೋಬ್ ರಾವ್.

ವೀಣಾ : **Patient** ಏನಾಗ್ಬೇಕು ಸರ್ ನಿಮಗೆ?

ಶಿವ : ನಮ್ ತಂದೆ.

ವೀಣಾ : ಸರ್ ವೈಟ್ ಮಾಡಿ, ಕರೀತೀನಿ.

**A patient come and sits next to Shiva.**

**Patient: Oh ನೀನು, ಯಾವಾಗ್ ಬಂದ್ಯಪ್ಪಾ…?,**

**Shiva (Little startled and unsure)**

**Patient: ಯಾವಾಗ್ ಬಂದ್ಯಪ್ಪಾ..(Recites a sloka…)**

**(Shiva looking around to see if anybody is there… Sahana enters…and talks to the patient….)**

**Sahana: ಸುಂದರ್ ಸರ್, ಅಮ್ಮಾ ಬಂದಿದಾರೆ… ಬನ್ನಿ….**

**Patient: ಹೌದಾ ಎಲ್ಲಿ ….?**

**Sahana: ಅಲ್ಲಿದಾರೆ… ಹೊಗೋಣಾ ಬನ್ನಿ… ….**

**She takes him aside and then comes back**

ಸಹನ : ಶಿವ ರೈಟ್?

ಶಿವ : ಯ ಹಾಯ್…

ಸಹನ : **Good to see you here 3-4** ತಿಂಗಳಾಯ್ತು ಆಯ್ತು ಅಂತ ಕಾಣುತ್ತೆ ನಿಮ್ಮನ್ ನೋಡಿ ಫೋನ್ & ಇ–ಮೇಲ್‌ನಲ್ಲಿ ನಿಮ್ಮನ್ ರೀಚ್ ಮಾಡಕ್ಕೆ ಟ್ರೈ ಮಾಡ್ದೆ. ಬಟ್ ಬಿಜಿ. ಇರ್ಬಹುದೇನೋ ಅಂತ ನಾನೂ ಸುಮ್ನಾದೆ.

ಶಿವ : ಪೇಮೆಂಟ್ ವಿಷ್ಯದಲ್ಲಿ ಏನಾದ್ರೂ ಇಶ್ಯು ಇತ್ತಾ?

ಸಹನ : ಏ! ಛೇ… ದುಡ್ಡೀನ್ ವಿಷ್ಯಕ್ಕಲ್ಲ ನಾನು ಕಾಂಟ್ಯಾಕ್ಟ್ ಮಾಡಕ್ ಟ್ರೈ ಮಾಡಿದ್ದು.

**Just wanted to update you on your dad's condition...**
**(Shiva's phone rings)**

ಶಿವ : **one second I have to take this**

ಶಿವ : ಮೇಲ್ ಕಳಿಸ್ತಾ ಇದೀನಿ, ಕ್ಲೈಂಟ್‌ಗೆ ಪ್ರೆಸೆಂಟೇಷನ್ ಮಾಡೋಕಿನ್ನ ಮುಂಚೆ ನಿಮ್ ಜೊತೆ ಕೂತ್ಕೊಂಡು **I will explain everything.** ಸರಿ ನಾನು ಆಮೇಲೆ ಮಾಡ್ತೀನಿ.

**(Call ends)** ಇನ್ನೂ ಬಂದಿಲ್ವಾ? ಲೇಟ್ ಆಗ್ತಾ ಇದೆ.

ಸಹನ : ಬರ್ತಾರೆ. ಎಲ್ಲಾದ್ರೂ ಆಚೆ ಕಡೆ ಕರ್ಕೊಂಡ್ ಹೋಗ್ತಾ ಇದೀರಾ?

ಶಿವ : ಹಾ...ಸ್ವಲ್ಪ ಶಾಪಿಂಗ್ ಮಾಡೊದಿತ್ತು ಅವರಿಗೆ. ಕೆಲ್ಸದಲ್ಲಿ ೪-೫ ಮಂತ್ಸ್ US ಗೆ ಹೋಗ್ತಾ ಇದೀನಿ,ಸ್ವಲ್ಪಾ ಬಿಜಿ ಇರಬಹುದು.

ಸಹನ : ಓಹ್ ಐ ಸೀ ನಾನೇನ್ ಹೇಳ್ತಾ ಇದ್ದೆ ಅಂದ್ರೆ ಲಾಸ್ಟ್ ಫ್ಯೂ ಮಂತ್ಸ್ ಅಲ್ಲಿ ಅವರ ಕಂಡಿಷನ್ ಇನ್ನು ಸೀರಿಯಸ್ ಆಗಿದೆ. ಹೊಸಾದೇನು ಜ್ನಾಪಕಕ್ಕೆ ಇಟ್ಕೊಳ್ಳಕ್ಕಾಗಲ್ಲ. ಹಳೇ ನೆನಪುಗಳಲ್ಲೇ ಕಳೆದೋಗಿರ್ತಾರೆ. ಜಿಯಾಗ್ರಫಿಕಲ್ ಸೆನ್ಸ್ ಚೂರು ಇಲ್ಲ.

**(Shiva's phone rings again)**

ಶಿವ **:Sorry one second...Hi Jaswinder... (Picks the call)**

**The same Patient comes back again....Sahana talks to him and sends him back.**

**Shiva returns after attending the call**

**(Cuts the call) Sorry....** ಇನ್ನು ಎಷ್ಟೊತ್ತಾಗ್ಬಹುದು?

ಸಹನ : **Give me two mins,** ನಾನ್ ಕರ್ ಕೊಂಡ್ ಬರ್ತೀನಿ....

# 5. INT. DAY. OLD AGE HOME
# Susheel 10rs scene and Rao leaves with Shiva

Cut back to Susheel counting 100, he runs back to the room

ಸುಶೀಲ್ : ವೆಂಕಿ! ಏನು ಜರ್ಗಿಸಿಲ್ಲಾ ತಾನೇ?

ಸುಶೀಲ್ : ರೆಡ್ ಹೊಡ್ದಿದೀನಿ, ಜ್ಞಾಪಕ ಇದೆ ತಾನೇ?

ಸುಶೀಲ್ : ಬ್ಲಾಕ್ ಹೊಡಿದ್ರೆ ನಾನೆ ವಿನ್ನರ್ರು ದುಡ್ಡು ರೆಡಿ ಇಟ್ಕೊಳಿ.

ರಾವ್ : ನೀನು winner-ಆ?

ಸುಶೀಲ್ : ಏ! ನಾನು ಟಾಯ್ಲೆಟ್‌ಗೆ ಹೋಗೊಕಿಂತ್ ಮುಂಚೆ ಹೊಡೀಲಿಲ್ವಾ? ಘಜನಿ ತರಾ ಎಲ್ಲಾ ಮರೆತ್ ಹೋಗ್ ಬಿಡ್ತ್ಯಾಪ್ಪಾ ನೀನು.

ರಾವ್ : **Ready…..**

**Susheel pockets the black pawn and celebrates**

ಸುಶೀಲ್ : ಕೊಡು ದುಡ್ಡು

**(Rao searches for money, can't find money)**

ರಾವ್ : ಆಫೀಸಲ್ಲಿ **salary…….**

ಸುಶೀಲ್ : ಯಾವ್ ಆಫಿಸ್ಸು? ಎಂತಾ ಆಫಿಸ್ಸೂ ಇಲ್ಲ. ದುಡ್ಡು ನಿನ್ front pocket ನಲ್ಲಿ ಇದೆ,

ರಾವ್ : **confused…**

**Susheel's mom who is a facility in charge there enters**

ಸುಶೀಲ್ ಅಮ್ಮ : ಏ! ಸುಶೀಲ್ ಏನ್ ತಲೆಹರ್ಟೆ ಮಾಡ್ತಾ ಇದೀಯಾ ಇಲ್ಲಿ?

ಸುಶೀಲ್ : ವೆಂಕಿ ಜೊತೆ ಆಡ್ತಾ ಇದೀನಮ್ಮ.

ಸುಶೀಲ್ ಅಮ್ಮ : ಹಾ! ನನಿಗ್ಗೊತ್ತು.

**She takes the money & keeps it in Rao's pocket. As the boy leaves she says….**

ಸುಶೀಲ್ ಅಮ್ಮ :ಬಂದು ಹೋಮ್‌ವರ್ಕ್ ಮಾಡು. **(and they leave)**

**Sahana enters, She turns to Rao**

**Sahana:** ವೆಂಕೊಬ್ ಸರ್.. ನಿಮ್ಮನ್ನ ನೋಡೊದಕ್ಕೆ ಯಾರ್ ಬಂದಿದಾರೆ ಹೇಳಿ...

**Rao confused….**

**Sahana:** ನಿಮ್ಮ ಮಗಾ ಬಂದಿದ್ದಾರೆ..

**ರಾವ್ : ಮಗನಾ..?**

**Sahana: ಶಿವ! ಶಿವ ಬಂದಿದಾರೆ.**

**ರಾವ್ : ಶಿವಾನಾ?!**

Shown through CCTV camera… Venkob Rao enters. Shiva is barely excited upon seeing his dad. He casually walks over to him without any excitement. Both of them leave together.

## 6.INT/EXT.DAY.SHIVA'S CAB
## Shiva and Rao going to the mall

ಶಿವ : **Let's just wait till the end of the day, will take a call on this. Ok, will talk to you soon…**

ರಾವ್: ಅಮ್ಮಾ ಎಲ್ಲಿ??

**Shiva cuts the call, turns to his father**

ಶಿವ : ನಿಮಿಗೆ ಬಟ್ಟೆ ತಗೊಳಕ್ಕೆ ಅಂಗಡೀಗ್ ಹೋಗ್ತಾ ಇದೀವಿ.

ರಾವ್ : ನನಿಗೇನಿಕ್ ಬಟ್ಟೆ? ಅಮ್ಮನಿಗೆ ಸೀರೆ ತಗೊಂಡು ತುಂಬಾ ದಿನ ಆಯ್ತು, ಅವಳಿಗೆ ರೇಷ್ಮೆ ಸೀರೆ ಅಂದರೆ ತುಂಬಾ ಇಷ್ಟ.....

……ಅಮ್ಮಾ ಎಲ್ಲಿ??

ಶಿವ : ಅಣ್ಣ ... ಅಮ್ಮ ತೀರ್ಕೊಂಗಿ ಎಂಟು ವರ್ಷ ಆಗ್ತಾ ಬಂತು. ನೀವು ಮರೆತ್ಹೋಗಿದೀರಾ.

**Driver's reaction.**

**Rao is confused.**

ರಾವ್ : ಸತ್ಹೋದ್ಲಾ?! ಹೆಂಗ್ ಸತ್ಹೋದ್ಲು?

ಶಿವ : ಅಮ್ಮನಿಗೆ ಕ್ಯಾನ್ಸರ್ ಆಗಿತ್ತು.

ರಾವ್ : ಕ್ಯಾನ್ಸರ್ ಆ?! ನಾನೆಲ್ಲಿದ್ದೆ?

ಶಿವ : ನೀವು ಜೊತೆಲೆ ಇದ್ರಿ, ನೀವು ಮರೆತ್ಹೋಗಿದೀರಾ

**Rao looks outside the widow emotionally.**

ರಾವ್ : ಪುಷ್ಪ ಇನ್ನು ಇದಾಳೆ ಅನ್ಕೊಂಡೆ.

ಶಿವ : ಅಮ್ಮ ಬದ್ಕಿದ್ರೆ, ಇಲ್ಲೆ ಇರ್ತಾ ಇದ್ರಲ್ವ?

**Cut on Rao's emotion.**

**Shiva also looking outside the window.**

**(Passing shot of car, cut to Rao)**

# <u>7.INT.DAY.SHOPPING MALL</u>
# <u>Mall Scene</u>

**Venkob Rao:** ಅಮ್ಮಾ ಎಲ್ಲಿ..?

> **Car enters the mall parking lot.**
> **Some father buying clothes for his son, camera moves to Shiva buying clothes for Rao in similar fashion.**
> **Buys fruits, toiletries and a bunch of stuff, all put in the cart, the cart gets full.**

ರಾವ್: ಅಮ್ಮಾ ಎಲ್ಲಿ...?

> **Few shots of Shiva on call forgetting his father and finding him astray.**
> **One such episode Rao pockets a box of color pencils.**

**Rao:** ಅಮ್ಮಾ ಎಲ್ಲಿ..? ಕಾಯ್ತಾ ಇರ್ತಾಳೆ **.....**

# Shopping mall scene

**They come to the billing counter, the worker is taking his own sweet time to bill. Shiva is annoyed with Rao's questions.**

ರಾವ್ : ಅಮ್ಮಾ ಎಲ್ಲಿ?

ಶಿವ : ಎಕ್ಸ್‌ಕ್ಯೂಸ್‌ಮಿ ಎಷ್ಟು ಹೊತ್ತು? ಬೇಗಾ ಮಾಡಿ.

ವರ್ಕರ್: ಸರ್ ಎಷ್ಟು ಬೇಗಾ ಅಗುತ್ತೋ ಅಷ್ಟು ಬೇಗ ಮಾಡ್ತಾ ಇದೀವಿ ಸರ್, ನಿಮ್ದು ಐಟಮ್ ತುಂಬಾ ಜಾಸ್ತಿ ಇದ್ಯಲ್ಲ.

ವರ್ಕರ್: **Sir Do you want to be a member?You'll get points with every purchase.**

ಶಿವ : ಅವೆಲ್ಲಾ ಏನು ಬೇಡಾ. ಐ ಆಮ್ ಪೇಯಿಂಗ್ ಬೈ ಕಾರ್ಡ್, ಡು ಇಟ್ ಕ್ವಿಕ್ಲಿ.

ವರ್ಕರ್: ಸರ್ ಪ್ಲಾಸ್ಟಿಕ್.......

ಶಿವ : ಅಫ್ಕೋರ್ಸ್! ಬೇಕು ಇದನ್ನೆಲ್ಲಾ ಕೈಯಲ್ಲಿ ತಗೊಂಡ್ ಹೋಗಕ್ಕಾಗುತ್ತಾ?

ವರ್ಕರ್: **Sir we will be charging………**

ಶಿವ : **Oh god no problem yaar!! Make it quick**

**(Quick cuts of packing and as they exit the alarm goes off)**

ವರ್ಕರ್: ಸರ್ ಸ್ಕ್ಯಾನ್ ಮಾಡಬೇಕಾದ್ರೆ... ಏನೋ ಮಿಸ್ ಆಗಿದೆ

ಶಿವ : ಏನ್ರೀ ನಿಮ್ ತಲೆನೋವು. ಸೋ ಮಚ್ ಇನ್‌ಕನ್ವಿನಿಯೆನ್ಸ್ ಕರೆಕ್ಟ್ ಆಗಿ ಕೆಲ್ಸ ಮಾಡಕ್ಕಾಗಲ್ವಾ?

**Rao goes past the sensor, alarm goes off again, Shiva checks Rao's pocket to find a box of color pencils, and he returns it to the worker.**

ರಾವ್ : **office** ಗೆ bus ಹೊರಡ್ತಾ ಇದೆ, ಬೇಗಾ ಬಾ ಹೋಗೊಣಾ..

ಶಿವ : **Sorry**

ವರ್ಕರ್: ನಮ್ ಕೆಲ್ಸ ನಾವು ಕರೆಕ್ಟ್ ಆಗಿ ಮಾಡ್ತಾ ಇದೀವಿ ಸರ್. ಸುಮ್ನೆ ನಮ್ ಮೇಲೆ ಕೂಗಾಡ್ತಾರೆ.

**Both of them walk quietly back to the car. As soon as they sit inside the car Shiva bursts out at Rao.**

# 8. INT.Day.SHIVA’S CAB
## Shiva looses temper on Rao after the shopping mall incident

ಶಿವ : ಏನಾಗಿದೆ ನಿಮಗೆ? ಸಿಕ್ಕಿದ್ದನೆಲ್ಲಾ ಪಾಕೆಟ್‌ಗೆ ಹಾಕೊಳ್ತೀರಲ್ಲಾ. ಬೇಕಾಗಿದ್ದನೆಲ್ಲ ಕೊಡ್ಸಿದೀನಲ್ಲ. ಸಣ್ಣ ಮಗುಕಿಂತ ವರ್ಸ್ಟ್. ಎಷ್ಟು ಅವಮಾನ.........

ಡ್ರೈವರ್ : ಸರ್ ಹೋಗ್ಲಿ ಬಿಡಿ ಸರ್, ವಯಸ್ಸಾದವರು ಪಾಪಾ.

ಶಿವ : ರೀ? ನಿಮ್ ಕೆಲ್ಸ ಏನ್ರೀ? ಮುಂದೆ ನೋಡ್ಕೊಂಡ್ ಗಾಡಿ ಓಡ್ಸಿ. ಇವರನ್ನ ಪಿಕ್‌ಅಪ್ ಮಾಡಿದ್ರಲ್ಲಾ ಆ ಜಾಗಕ್ಕೆ ವಾಪಸ್ ಕರ್ಕೊಂಡ್ ಹೋಗಿ.

**Mood shots of Rao feeling very bad.**

# 9. EXT. DAY.OLD AGE HOME

# Shiva drops off Rao at old age home and Rao goes missing

**Shots of staff panicking, Mani and others making calls.**

# 10. INT.DAY.SAHANA'S HOUSE

## Sahana match making attempt

**ಸಹನ:** ಎನು..? ನಾನ್ ಬರ್ತೀನಿ (turns to boy's family) ಸಾರಿ... ವರ್ಕ್ ಕಾಲ್ ಇತ್ತು.

**ಕುಮಾರಿ:**ನಾವು ತುಂಬಾ ಮಾಡರ್ನ್ ಅಮ್ಮ ಫ್ರೆಂಡ್ಸ್ ಹತ್ರಾ ಮಾತಾಡಿದ್ರೆ ನಮಿಗೇನೂ ಬೇಜಾರಿಲ್ಲಾ..

Sahana just smiles

**ವಾಸುದೆವ್:** ಫ್ರೆಂಡ್ಸ್ ಗೆಲ್ಲಾ ಟೈಮಿಲ್ಲಾ ಅವಳಿಗೆ, she's very hardworking and dedicated. ಒಂದು Ngo ನಲ್ಲಿ ವರ್ಕ್ ಮಾಡೋದು ಅಂದ್ರೆ ಸಣ್ಣ ವಿಷ್ಯಾನಾ..?

**ಕುಮಾರಿ(MIL):**ನಮ್ ಅವಿನೂ ತುಂಬಾ hardworking, heart surgeon ಅಂದ್ರೆ ಗೊತ್ತಲ್ವ?

**ಸುಧ (Sahana Mother):** NGO ಬಿಡಿ, ಇವಳಿಗೆ ಆಕ್ಚುಲಿ ಟಾಪ್ ಹಾಸ್ಪಿಟಲ್ಸ್ ನಿಂದ ತುಂಬ ಆಫರ್ಸ್ ಬಂದಿದೆ. Appolo, Wockhardt ಎಲ್ಲಾ ಆಫರ್ಸ್ ಕೊಡ್ತಾನೆ ಇದ್ದಾರೆ.

**ಪ್ರಸಾದ್ (FIL):**ಅಯ್ಯೋ ಇವ್ನಿಗೂ! U.S ನಲ್ಲಿರಬೇಕಾದ್ರೆ ಆಫ್ಮೇಲ್ ಆಫ್ರ್‌ಗಳು. ನಾವೇ, ಇಲ್ಲೇ ಬಂದು ಸೆಟ್ಲಾಗಿ ನಮ್ಮ ಹಾಸ್ಪಿಟಲ್ ನೇ ನೊಡ್ಕೋ ಅಂತ ಹಟ ಹಿಡಿದ್ವಿ.

**ಕುಮಾರಿ(MIL):** ನಮ್ಮ ಹಾಸ್ಪಿಟಲ್ ಬಗ್ಗೆ ಗೊತ್ತಲ್ವ?

**ಸುಧ(Sahana Mom):**ಹಾ ಗೊತ್ತು ಗೊತ್ತು! ನಮ್ಮ ಸೋದರತ್ತೆ ಮಗನಿಗೆ ಡೆಂಗ್ಯೂ ಬಂದಾಗ ನಿಮ್ಮ ಹಾಸ್ಪಿಟಲ್ ನಲ್ಲೆ ಟ್ರೀಟ್‌ಮೆಂಟ ತಗೊಂಡಿದ್ದು . ನಾವು ನೋಡಕ್ಕ  ಹೋದಾಗ 5 ಸ್ಟಾರ್ ಹೋಟೆಲ್ ಗೆ ಹೋದಂಗಿತ್ತು, ಅಲ್ವೆನ್ರಿ?

Sahana's father smiles.

**ಕುಮಾರಿ(MIL):**ನಮ್ದೇನು ಎಕ್ಸ್‌ಪೆಕ್ಟೇಶನ್ಸ್ ಇಲ್ಲ. We are very humble. ಮದ್ವೆ ಆದ್ಮೇಲೆ ಅವಿಗೆ ಸಪೋರ್ಟ್ಮಾಡ್ಕೊಂಡಿದ್ರೆ ಸಾಕು. ತುಂಬಾ ಹುಡ್ಗೀರನ್ನೊಡಿದ್ವಿ, ಬಟ್ ಅವಿ ತುಂಬಾ ಚೂಝಿ. ಅವ್ನಿಗೆ ಕರಿಯರ್ ಮೇಲೆ ಫೋಕಸ್ಸು. ನಮ್ಮ ಹಾಸ್ಪಿಟಲ್ ನಲ್ಲೆ ವರ್ಕ್ ಮಾಡ್ಕೊಂಡು, ಅವಿಗೆ ಸಪೋರ್ಟ್ ಮಾಡಿದ್ರೆ ಸಾಕು. NGOಗಳೇನು, ಬರುತ್ತೆ ಹೋಗತ್ತೆ...

**ಸಹನ:**ಆಂಟಿ ಒಂದು ನಿಮಿಷ. ಈ ಸಂಬಂಧ ಸೆಟ್ಟಾಗಲ್ಲ. ಬರೀ ಸಪೋರ್ಟ್ ಅಂತ ಹುಡುಕ್ತಾ ಇದ್ರೆ, ಸ್ಟಾಫ್ ಇನ್ ಕ್ರೀಸ್ ಮಾಡ್ಕೊಳಿ, ಹೇಗೂ ಎರಿಯಾಗೊಂದ್ ಮೆಡಿಕಲ್ ಕಾಲೇಜ್ ಇದೆ, ಡಾಕ್ಟರ್ಸ್

ಗೇನು ಕಡಿಮೆ ಇಲ್ಲ. ನಿಮ್ ಟೈಮ್ ವೇಸ್ಟ್ ಮಾಡಕ್ಕ ಇಷ್ಟ ಇಲ್ಲ, ನನ್ ಟೈಮ್ ತುಂಬಾ ಪ್ರೆಷಿಯಸ್. ಒಂದ್ ಎಮರ್ಜೆನ್ಸಿ ಇದೆ, ನಾನ್ಬರ್ತಿನಿ. ಕಾಫೀ ಕುಡ್ಕೊಂಡ್ಹೋಗಿ, ನಾನೆ ಮಾಡಿದ್ದು. ಅಪ್ಪ ಹೋಗ್ ಬರ್ತೀನಿ.

**ಪ್ರಸಾದ್ (Sahana father):**ಹುಷಾರಮ್ಮ.

**ಸುಧ:**ಸಹನ...!

# 11.INT.DAY.SHIVA'S OFFICE
# Shiva takes Sahana's call

Shiva is at work socializing with his boss when his phone is seen continuously ringing, he keeps ignoring it eventually picking it up, we cut on his reaction.

# 12.INT/EXT.Night.OLD AGE HOME
# Shiva blasts Sahana after Rao goes missing

**ಶಿವ:** ಸರ್ಕಸ್ ನಡಿಸ್ತಾ ಇದ್ದೀರಾ ಇಲ್ಲಿ?!! Do you think this is a joke?

**ಡೀನ್:** Sir calm down…

**ಶಿವ:**How can you let this happen?!! ಲಕ್ಷಗಟ್ಲೆ ದುಡ್ಡು ಇಸ್ಕೊತೀರಾ? ಕೇಸ್ಫ಼ೈಲ್ ಮಾಡಿ, ಪ್ರೇಸ್ ನಾ ಕರ್ಸಿ ಈ ಇಡೀ ಸಂಸ್ಥೆನೇ ಮುಚ್ಚಿಸ್ಬಿಡ್ತೀನಿ!

**ಸಹನ:**ಶಿವ ಪ್ಲೀಸ್! There's no need for…

**ಶಿವ:**ಷಟಪ್! ನಿನಿಗಿರೊದ್ ಒಂದ್ಕೆಲ್ಸ, I pay you to take care of my father. Doctor, ಅಂತ ಹೇಳ್ಕೊಳಕ್ಕೆ ನಾಚಿಕೆ ಆಗ್ಬೇಕು ನಿಮಿಗೆ. I'll make sure this will end your career.

Shiva storms out, Sahana runs up to him.

# 12A.INT/EXT.NIGHT.OLD AGE HOME

# Sahana gives it back

**ಸಹನ:** Excuse me! Shiva! Just wait one second.

(Shiva is walking away, ignoring her, she catches him by the hand and pulls, Shiva turns)

**ಶಿವ:** ನಿಮ್ ಅಪೊಲೊಜಿನ ಪೊಲೀಸ್‌ಗೆ ಹೇಳಿ.

**ಸಹನ:** ನಾನು ಅಪೊಲೊಜೈಸ್ ಮಾಡಕ್ಕೆ ಬಂದಿಲ್ಲ ಆಂಡ್ ಪೊಲೀಸ್ ಗೀಲೀಸ್ ಗೆಲ್ಲಾ ಹೆದ್ರಲ್ಲ. ನನ್ನ career ಬೇಕಾದ್ರೆ destroy ಮಾಡಿ, ನಾನು care ಮಾಡಲ್ಲ. ನನಿಗಿರೊದು ಒಂದೇ ಕನ್ಸರ್ನ್, ನಿನ್ತಂದೆ, ನನ್ನ patient ನ ಹುಡುಕೋದು. ಈ ತರ ಕೇಸ್ ಗಳಲ್ಲಿ ಒಂದು ವ್ಯಕ್ತಿ ಕಳ್ದೋದ್ಮೇಲೆ ಇರೋ ಒಂದೊಂದು ಕ್ಷಣಾನೂ ಅವರನ್ನ ಹುಡುಕಕ್ಕೆ ತುಂಬಾ crucial ಆಗಿರುತ್ತೆ. ಅದನ್ನ ನಿನ್ನ emotions ಮೇಲೆ waste ಮಾಡಕ್ ಇಷ್ಟಾಪಡಲ್ಲ.

(She walks away, stops, turns...)

**ಸಹನ**: ಆಂಡ್ ಇನ್ನೊಂದು, ಅವರನ್ನ ಕರ್ಕೊಂಡು ಹೋಗ್ಬೇಕಾದ್ರೆ ಕ್ಲಿಯರ್ ಆಗಿ ಹೇಳ್ದೆ, ಅವರ್ಮೇಲೆ ಒಂದು ಕ್ಷಣಾನೂ ಗಮನ ತಪ್ಪಬಾರದು ಅಂತ. ಕೇರ್‌ಲೆಸ್ ಆಗಿ ಗೆಟ್ಮುಂದೆ ಬಿಟ್ ಹೋದೆ. ನಮ್ದೆಷ್ಟು ತಪ್ಪಿದಿಯೋ ನಿಂದೂ ಅಷ್ಟೇ ಇರೋದು. ಹುಡುಕಕ್ ಹೆಲ್ಪ್ ಮಾಡ್ತಿಯೋ ಕಂಪ್ಲೆಂಟ್ ಮಾಡ್ತಿಯೋ, ನಿನಿಗ್ಬಿಟ್ಟಿರೋದು.

(She walks away)

# <u>13.EXT.NIGHT.ROADS AROUND OLD AGE HOME</u>

## <u>Shiva and Sahana searching around facility</u>

Few shots of Sahana and Shiva looking around separately, Sahana driving around the facility, seen asking people.

## 13A.EXT.NIGHT.ROADS AROUND OLD AGE HOME
## Shiva & Sahana meet at a corner, Shiva apologizes

while searching Shiva and Sahana walk towards each other. (converging edge of a square or triangle with something blocking their view)

Shiva: Sorry..... ಕೋಪದಲ್ಲಿ …

Sahana: Its ok…don't worry about it.....

Shiva: ಈ ಕಡೆ ಯಾರು ನೋಡಿಲ್ಲಾ...

Sahana: ಒಂದೆ ಜಾಗದಲ್ಲಿ ಇಬ್ರೂ ಹುಡುಕೋದು ವೇಸ್ಟ್..ನಿಮ್ಮ ಮನೆ ಹತ್ರ ಚೆಕ್ ಮಾಡಿ, ಯಾವದೋ ನೆನಪಲ್ಲಿ ಅಲ್ಲಿಗೆ ಹೋಗಿದ್ರೂ ಹೋಗಿರಬಹುದು..ನಾನು ನನ್ನ ಫೆಸಿಲಿಟಿ ಸ್ಟಾಫ್, ಇಲ್ಲಿ ಸುತ್ತಾಮುತ್ತಾ ಹುಡುಕ್ತೀವಿ.. ಏನೇ ಇದ್ರು ಫೋನ್ ಮಾಡ್ತೀನಿ.

## 14.EXT.NIGHT.ROADS AROUND OLD AGE HOME

## Shiva stopping for a cigarette

Shiva looking around near his house, stopping for a cigarette.

Smooth transition to flash back.

# 15.EXT.DAY.KP Shop.

# Shiva at cigarette shop

Shiva friend: ಮಾಚಾ ನಮ್ಮ ಪಕ್ಕದ್ಮನೆ ಆಂಟಿನೂ ಸೇಮ್ ಕೇಸೋ.. ಯಾವ್ದೋ ಎಕ್ಸ್ಪರಿಮೆಂಟಲ್ ಟ್ರೀಟ್‌ಮೆಂಟ ಕೊಟ್ರು.. Fortis ಹಾಸ್ಪಿಟಲ್ ಕಾಣುತ್ತೆ.. ಇವಾಗಾ ಗಟ್ಟಿಮುಟ್ಟಾಗಿ ಇದಾರೆ.. ಚೂರು ಪ್ರೊಬ್ಲೆಮ್ ಇಲ್ವೋ.. ನಂಬರ್ ಕೊಡ್ತೀನಿ ಅವರ್ದು... ಅಪ್ಪಂಗೆ ಹೇಳು ಮಾತಾಡೋಕೆ... ಅಥವಾ ನೀನೆ ಮಾತಾಡು... ....

Shiva: ಎಲ್ಲಾ ವಿಚಾರ್ಸಿ ಆಯ್ತೊ...ನಂದು ನಿಂದು... ನಮ್ ರವಿದೂ ಕಿಡ್ನಿ ಮಾರಬೇಕಾಗುತ್ತೆ... ಅಲ್ಲೆಲ್ಲಾ ಟ್ರೀಟ್‌ಮೆಂಟ ಕೊಡ್ಸಕ್ಕಾಗಲ್ಲಾ... ನಮ್ ತಂದೆ ಬೇರೆ ಗೋಡೌನ್ ಪೂರ್ತಿ ದುಡ್ಡು ಇಟ್ಟಿದಾರೆ... ಬಿಡು.. ಏ ರವಿ ಸ್ಕೋರ್ ಏನಾಯ್ತೋ..?

Cut to cricket mactch at home....

# Flashback 1: 16.INT.NIGHT.SHIVA'S HOUSE
# Cricket match scene

**Scene description: Pushpa (Venkob Rao's wife) lying on the bed as she suffers from a terminal illness, next to her Rao is sitting and watching cricket match(march 2004 India-Pak match) Shiva still a college student , enters.**

ಶಿವ : ಊಟ ಮಾಡಿದ್ರಾ?

ರಾವ್ : ಅರ್ಧ ಇಡ್ಲಿ ತಿಂದ್ಲು. ನಾನ್ ಬಲವಂತ ಮಾಡ್ಸಿ ಸ್ವಲ್ಪ ಫ್ರೂಟ್ಸ್ ತಿನ್ನಿಸ್ದೆ. ಸುಸ್ತಾಗಿ ಮಲ್ಕೊಂಡಿದಾಳೆ.

**Awkward silence for a bit, Sachin scores a boundary**

ರಾವ್ : ನಮ್ ಸಚಿನ್ ಆಡಿದ್ರೇನೆ ಇವತ್ತು ನಮ್ಗೆ ಚಾನ್ಸ್ ಇರೋದು.

ಶಿವ : ಹೋಡಿತಾ ಇರೋದ್ ನೋಡಿದ್ರೆ ಇವತ್ತೇನೋ ಆಡ್ತಾನೆ ಅನ್ಸುತ್ತೆ..

ರಾವ್ : ನಮ್ ಕಡೆ ಬೌಲಿಂಗೇ ಸರಿ ಇಲ್ಲ. ಆ ಬಾಲಾಜಿ ಮುಂಡೇದಿಕ್ಕೆ ಯಾರ್ಕರ್ ಹಾಕಕ್ಕೆ ಬರಲ್ಲ. ಬರೀ ಫುಲ್ಟಾಸ್ ಮೇಲೆ ಫುಲ್ಟಾಸ್ ಹಾಕಿ ಹೊಡಿಸ್ಕೊಂಡ. ಆ ಶೋಯೇಬ್ ಅಖ್ತರ್ ನೋಡು ನಮ್ ಎಲ್ಲಾ ಬೌಲರ್ರೂ ಅವನ್ ಕಾಲ್ ಕೆಳಗಡೆ ಎರಡು ಸಲ ನುಗ್ಗಿದ್ರೆ ಕರೆಕ್ಟ್ ಆಗಿ ಬೌಲಿಂಗ್ ಮಾಡಕ್ ಕಲ್ತ್ಕೊಳ್ತರೆ.

**Sehewag is bowled!!**
**(Both shiva and Venkob disappointed)**

ರಾವ್ : ಥುತ್ತೇರಿಕೆ!

ಶಿವ : ಸುಮ್ನೆ ಸ್ಟ್ರೈಕ್ ರೊಟೇಟ್ ಮಾಡಿದ್ರೆ ಆಗಿರೋದು, ಎಲ್ಲಾ ಬಾಲೂ ಸಿಕ್ಸ್ ಹೊಡಿಯಕ್ಕೆ ಹೋಗ್ತಾನೆ. ಸ್ಟುಪಿಡ್ ಫೆಲೋ.

**VVS Laxman walks onto Bat**

ರಾವ್ : ಬಂದ ಕುಟ್ಕೇಶ, ಇವನಿಗೆ ಟೆಸ್ಟ್ ಮ್ಯಾಚ್‌ಗೂ ಒನ್‌ಡೇ ಮ್ಯಾಚ್‌ಗೂ ವ್ಯತ್ಯಾಸನೇ ಗೊತ್ತಿಲ್ಲ. ಆ ಲಾಸ್ಟ್ ಸೀರೀಸ್‌ಲ್ಲಿ ೧೫ ರನ್ ಹೊಡಿಯಕ್ಕೆ ೫೦ ಬಾಲ್ ತಿಂದಿದ್ದ.

ಶಿವ : ಏ! ಒನ್ ಎಂಡ್‌ಲ್ಲಿ ಸಚಿನ್‌ಗೆ ಸಪೋರ್ಟ್ ಮಾಡ್ಲಿ ಸಾಕು.

ರಾವ್ : ಈ ಕುಟ್ಕೇಶನ್ ಬದ್ಲು ನಮ್ ದ್ರಾವಿಡ್ ಬರ್ಬೇಕಾಗಿತ್ತು. ಸೆನ್ಸಿಬಲ್ ಆಗಿ ಆದ್ರೂ ಆಡ್ತಾನೆ.

ಶಿವ : ಏ! ಇಲ್ಲ ಇಲ್ಲ! ದ್ರಾವಿಡ್ಡೂ ಹೋದ್ ಮ್ಯಾಚ್ ಅಲ್ಲಿ ಮಿಡಲ್ ಆರ್ಡರ್ ಆಡಿ ತಾನೆ ಗೆಲ್ಸಿದ್ದು.

ರಾವ್ : ನಮ್ ದ್ರಾವಿಡ್ ಬಿಡು ಯಾವ್ ಪೊಸಿಷನ್ ಅಲ್ಲಿ ಆಡಿದ್ರು ಸಾಕು ಸಕತ್ತಾಗಾಡ್ತಾನೆ.

**Sachin is about to bat and power goes off,**

ರಾವ್ : ಥು! ದರಿದ್ರದ್ದು, ಸುಮ್ನೆ ಕರೆಂಟ್ ಕಟ್ ಮಾಡ್ಬಿಡ್ತಾರೆ, ಯೂಸ್‌ಲೆಸ್ ಫೆಲೋಸ್.

**A candle is lit, some more awkward silence between father and son**

ರಾವ್ : **laptop** ಬೇಕು ಅಂತಾ ಅಮ್ಮಂಗೆ ಹೇಳಿದ್ಯಂತೆ...

ಶಿವ : ಪರ್ವಾಗಿಲ್ಲ... part time ಕೆಲ್ಸದ್ದು ದುಡ್ಡು ಇತ್ತು, ನಾನು ಅದ್ರಲ್ಲೆ manage ಮಾಡ್ತಿನಿ

**Akward silence**

ರಾವ್ : ಎಕ್ಸಾಮ್ ರಿಸಲ್ಟ್ ಬಂತ?
ಶಿವ : ಎಕ್ಸಾಮ್ ಜೂನ್‌ನಲ್ಲಿ.
ರಾವ್ : ಹಾ.... ಓಕೆ.

**Some more awkward silence**

ರಾವ್ : ಅಡಿಗೆ ಅವಳು **correct** ಆಗಿ ಬರ್ತಾ ಇಲ್ಲಾ, ನಾಳೆನೂ ನಾನೆ ತಿಂಡಿ ಮಾಡ್ತೀನಿ.

ಶಿವ : ಪರ್ವಾಗಿಲ್ಲ ನಾನು ಕ್ಯಾಂಟೀನ್‌ಅಲ್ಲಿ ಊಟ ಮಾಡ್ಕೋತೀನಿ. ಅಮ್ಮನಿಗೆ ಹೋಟೆಲಿಂದ ತಂದ್ ಕೊಟ್ರೆ ಆಗುತ್ತೆ ಬಿಡಿ.

**Awkward silence**

ರಾವ್ : ಒಂದು ಎಮರ್ಜೆನ್ಸಿ ಲೈಟ್ ತಗೊಂಡ್ ಬರ್ಬೇಕು.

**After some more silence**

ಶಿವ : ಮ್ಯಾಚ್ ಏನಾಯ್ತೋನೋ, ಸಚಿನ್ ಔಟ್ ಆಗ್ದೆ ಇದ್ರೆ ಸಾಕು.

**Pushpa wakes up**

ಪುಷ್ಪ : ಆ ಸಚಿನ್ನು ಕ್ರಿಕೆಟ್ ಆಡೋದನ್ನ ನಿಲ್ಲಿಸ್ಬಿಟ್ರೆ ನೀವಿಬ್ರು ಏನ್ ಮಾತಾಡ್ತಿರೋ, ದೇವರಿಗೆ ಗೊತ್ತು.
ರಾವ್ : ಯಾವಾಗ್ ಎದ್ದಿಯೇ?

ಪುಷ್ಪ : ನೀವಿಬ್ರು ಕ್ರಿಕೆಟ್ ಮಾತ್ ನಿಲ್ಸಿ ಮಾತಾಡಕ್ ತಡವರಸ್ತಾ ಇದ್ರಲ್ಲಾ ಆವಾಗ ಎಚ್ಚರ ಆಯ್ತು. ನಾನು ಹೋದ್ಮೇಲೆ ಏನು ಮಾಡ್ತಿರೋ.

**Candle goes off and first montage begins**

# 17.INT/EXT.DAY/NIGHT.MULTIPLE LOCATIONS
## Montage-1st song

Candle light goes off and the song starts

Garland on mother’s photo.

Shoe episode + Shiva’s wardrobe changing

College bag is replaced by laptop bag

Shiva’s wardrobe changing.

Shiva celebrates his birthday with plenty of friends

Visuals showing Shiva and Venkob Rao barely talking

Rao bolts the door thrice, after Shiva does it only once and goes to his room

Shot of Shiva asking in and around his house, opening door before picking up letters, cut to past on door opening,

Conversations come down to "ಹೊಗ್ಬಿಟ್ಟತೀನಿ ", "ಊಟ ಆಯ್ತಾ?", "ನೀವು ಊಟ ಮಾಡಿದ್ರ?"

Shiva gets the house painted with his first salary

Shiva celebrates his birthday but the number of friends have decreased from the previous birthday

Shiva leaves early and comes back late, barely meets his father

Shiva’s looks changing multiple times

Shiva gets a girlfriend, and another and another.

Shiva celebrates another birthday and the number of friends keep decreasing

Venkob Rao forgetting remotes, keys, pens, glasses and misplaces stuff

Song stops and father’s memory related issue slowly surfacing

One episode where father takes same medicine multiple times leading to a diagnosis and finding out about Alzheimer’s.

Doctor diagnosis shown (Venkob Rao is asked to count numbers backwards by subtracting 5 or 6)

Song continues

Shiva’s reaction to Venkob Rao’s condition, where he’s doing research, talking to people and finds out the pain in suffering from Alzheimer’s and being mentally disturbed by it

Venkob Rao’s condition disturbs Shiva’s life at work, with his girlfriend, friends

Sequence of Shiva drinking

One episode with Shiva and his girlfriend, where he is carried away thinking about his dad while she’s talking. This leads to misunderstandings between Shiva and his girlfriend and they break up

A portion where we show Mr. Rao working at his office and camera slowly pans to reveal that Venkob Rao is in a state of mind where he believes that he’s working whereas he is actually at home, with Shiva’s presence

Shiva starts drinking more

Venkob Rao is trying to comfort Shiva in a very disconnected way and Shiva is rude

Shiva showing his personal frustration at his father or at home

Shiva is left with just one friend to celebrate his birthday with

Ending of song, one of Shiva’s friend advices him to shift his job

Shiva shifting his job and is working very hard

Shiva research: watches youtube video(20s video)

End of song

# 18. INT. DAY.SHIVA'S HOUSE
# FB-Shiva reveals Bombay plan

**Shiva is working on the laptop.**

ರಾವ್: ಶಿವಾ...

ರಾವ್ : **ಅಮ್ಮಾನು ಇಲ್ಲ ಅದರ ಮೇಲೆ ಡಾಕ್ಟರ್ ಹೇಳ್ದಂಗೆ ಈ ರೋಗ ನನ್ನ ಉಳ್ದಿರೋ ಜೀವನಾನನ ಕಿತ್ಕೊಳೋಕಿಂತ ಮುಂಚೆ....**

ಶಿವ : **ಅಣ್ಣ unnecessary ಯಾಗಿ ಎಮೋಷನಲ್ ಆಗ್ಬೇಡಿ, ಏನ್ ಹೇಳಿ ಮತ್ತೆ ಮದುವೆ ಮಾತ್ ತಾನೆ?**

ರಾವ್ :**ಮುಂದಿನ ತಿಂಗಳೇ ಮದುವೆ ಆಗೂ ಅಂತ ಹೇಳ್ತಾ ಇಲ್ಲ. ನಮ್ಮ ಜೀವನಾನ ಇನ್ನೊಬ್ರ ಜೊತೆ ಹಂಚ್ಕೊಂಡು ಸಣ್ಣದಾಗಿ ಒಂದು ಸಂಸಾರ ಮಾಡಿ ಬದುಕೊ ಖುಷಿ ಎಲ್ಲೂ ಸಿಗಲ್ಲ.**

ಶಿವ : **ಬರೀ ಸಂಸಾರದ್ ಒಂದ್ರಲ್ಲೇ ಖುಷಿ ಹುಡುಕೋದು ನಿಮ್ಮ ಜನರೇಷನ್‌ಗೆ ಆಗೋಯ್ತು. ನಿನಗೆ ಫ್ಯಾಮಿಲಿ ಈಸ್ ಜಸ್ಟ್ ಎ ಪಾರ್ಟ್ ಆಫ್ ಲೈಫ್, ನಾಟ್ ಲೈಫ್ ಇಟ್‌ಸೆಲ್ಫ್, ದಯವಿಟ್ಟು ಪದೇ ಪದೇ ಮದುವೆ ಬಗ್ಗೆ ಮಾತಾಡಿ ತಲೆ ತಿನ್ಬೇಡಿ. ನನಿಗೆ ಸಾಕಷ್ಟು ಕೆಲಸ ಇದೆ.**

ರಾವ್ :**ನಾನು ಹೇಳೊದನ್ನ ಕನ್ಸಿಡರ್ ಮಾಡು ನಿನ್ನ ಒಳ್ಳೇದಿಕ್ಕೆ ಹೇಳ್ತಾ ಇರೋದು. ನಿನ್ನ ಕೆಲಸ ಮಾಡ್ಕೋ.**

**Just as Venkob Rao is about to get up…**

# 18A.INT.DAY.SHIVA'S HOUSE

## Insert : Cut to father room

ಶಿವ : ಆಕ್ಚುವಲಿ ನಾನೂ ನಿಮ್ ಜೊತೆ ಒಂದು ವಿಷ್ಯ ಮಾತಾಡ್ಬೇಕಾಗಿತ್ತು ಆಫೀಸಲ್ಲಿ ಪ್ರಮೋಷನ್ ಸಿಕ್ಕಿದೆ. ಸೀನಿಯರ್ ಪೊಸಿಷನ್ ಆಫಿಸರ್ ಮಾಡಿದಾರೆ.

ರಾವ್ : **Oh very good. Congratulations!**

ಶಿವ : ಆದ್ರೆ ಬಾಂಬೆಗ್ ಶಿಫ್ಟ್ ಆಗ್ಬೇಕು.

ರಾವ್ : **Bombay…weather** ಒಂದೇ **problem** ಯಾವಾಗ್ಲೂ ಮಳೆ ಅಲ್ವಾ? ಒಳ್ಳೆ ಪೊಸಿಷನ್ ಯಾಕ್ ಬಿಟ್ಕೊಡ್ಬೇಕು? ಹೋಗ್ತಾ ಹೋಗ್ತಾ ಹೆಂಗೋ ಒಂದು **manage** ಮಾಡೋಣ ಬಿಡು, ನನಿಗೂ ಸ್ವಲ್ಪ ಸ್ವಲ್ಪ ಹಿಂದಿ ಬರುತ್ತೆ.

ಶಿವ : **Actually…offer** ಆಗಲೆ ಅಕ್ಸೆಪ್ಟ್ ಮಾಡಾಯ್ತು, ಮತ್ತೆ ನಿಮ್ಮ ಸ್ಥಿತೀಲ್ಲಿ ಗೊತ್ತಿಲ್ದೇ ಇರೋ ಊರಿಗ್ ಶಿಫ್ಟ್ ಆಗೋದು ಒಳ್ಳೇ **idea** ಅಲ್ಲ.

**(Shiva slides a brochure to Rao)**

**Specific** ಆಗಿ ಈ ಸಂಸ್ಥೆ **Alzheimer's** ಗೋಸ್ಕರಾ ಇರೋದು. **superb facility.** ಬರೀ ನಿಮ್ ಏಜ್ ಗ್ರೂಪ್ ಅವರೇ ಇರೋದು. ೨೪ ಅವರ್ಸ್ ಸ್ಪೆಷಲಿಸ್ಟ್ ಕೇರ್ ಇರುತ್ತೆ. ಊಟಾ, ತಿಂಡಿ, ಮೆಡಿಸಿನ್ ಎಲ್ಲಾ ಅವರೇ ನೋಡ್ಕೋತಾರೆ. ಯಾವುದೇ ತರಾ ಟೆನ್ಷನ್ ಇರಲ್ಲ. ಆರಾಮಾಗಿ ಇರಬಹುದು ನೀವು. ನಾನು ರೆಗ್ಯುಲರ್ ಆಗಿ ವಿಸಿಟ್ ಮಾಡ್ತಾ ಇರ್ತೀನಿ. ನಾನು ನಾಳೆನೆ ಅಲ್ಲಿಗೆ ಕರ್ಕೊಂಡ್ ಹೋಗ್ತೀನಿ, ನಿಮಗೆ ಗೊತ್ತಾಗುತ್ತೆ. ಆಮೇಲೆ ಇನ್ನೊಂದ್ ವಿಷ್ಯ ನಾನು ಹೇಳ್ತಾ ಇರೋದನ್ನ ಪ್ಲೀಸ್ ಇಮೋಷನಲ್ ಆಗಿ ತಗೊಂಡು ಮಿಸ್‌ಅಂಡರ್‌ಸ್ಟ್ಯಾಂಡ್ ಮಾಡ್ಕೋಬೇಡಿ, ನಿಮ್ ಒಳ್ಳೇದಿಕ್ಕೆ ಹೇಳ್ತಾ ಇರೋದು.

Stay on Venkob Rao as Shiva phone rings, Shiva leaves room to pick up, cut to present shiva picking up phone.

# 19. EXT.NIGHT.ROAD

## Sahana suggests Shiva to file a complaint on phone

Sahana: Any luck?

Shiva: **ಇಲ್ಲಾ... ಇಲ್ಲಿ ಯಾರೂ ನೋಡಿಲ್ಲಾ..ಅಲ್ಲಿ?**

Sahana: Same....**ಪೊಲೀಸ್ ಹತ್ರ** missing person report file **ಮಾಡೋದು ಒಳ್ಳೇದು ಅನ್ಸುತ್ತೇ. ಎಲ್ಲಿ ಹೋಗಿದಾರೆ ಅಂತ** idea **ಇಲ್ಲಾ..**

Venkob Rao revealed.

# 20. INT/EXT.NIGHT.SAHANA’S CAR

## Shiva with Sahana to police station

**ಸಹನ:** Alzheimer’s patients’ ಗೆ ಈ ತರಾ situation ಅಲ್ಲಿ ಅವರು ಎಲ್ಲಿದಾರೆ, ಎಲ್ಲಿಗ್ಹೋಗ್ಬೇಕು, ಏನ್ಮಾಡ್ತಾ ಇದಾರೆ, ಯಾವುದರ ಬಗ್ಗೆನೂ ಅರಿವಿರಲ್ಲ. ಹಳೇ ನೆನಪುಗಳಲ್ಲೇ ಕಳೆದು ಹೋಗಿರ್ತಾರೆ.

**ಶಿವ:** ಬಟ್ ನೆನಪುಗಳಲ್ಲಿ route ಎಲ್ಲಾ ಜ್ಞಾಪಕ ಇರಲ್ವಾ?

**ಸಹನ:** Roads, buildings, landmarks, ಅವರಿಗೆಲ್ಲಾ ಒಂದೇ ತರಾ ಅನ್ಸಕ್ ಶುರುವಾಗತ್ತೆ. ಇವಾಗ್ನೋಡ್ತಾ ಇರೋದಿಕ್ಕೂ ಅವರ ನೆನಪಲ್ಲಿರೋದಿಕ್ಕೂ ವ್ಯತ್ಯಾಸಾ ಇರಲ್ಲ. Every case is different. Main problem ಏನಂದ್ರೆ, ಯಾವುದೇ ತರ ಹೊಸ ನೆನಪು ಮಾಡ್ಕೊಳಕ್ಕಾಗ್ದೆ, ಹಳೇ ನೆನಪನ್ನೇ ನಿಜ ಅನ್ಕೊತಾರೆ.

# 21.INT/EXT.DAY/NIGHT.MULTIPLE LOCATION

## Venkob Rao wandering montages

Int/Ext. Day/Night

- Venkob Rao is seen wandering in streets. Shots where magnification is fixed, Rao walks in the frame in different locations. He goes across a frame in one direction, then comes back in opposite direction.
- Some body rig shots. POV shot of one person being rude.
- Meeting people: a) Rao comes out of a hotel onto the road and walks away, waiter (from the Shiva-Sahana hotel scene) comes out and looks for Rao after he's left.b) Rao accidently dips his hand in paint and in an attempt to get something off his slipper, places it on a compound wall and leaves, an artist notices the hand print and paints beautiful colorful art work around it. c) Rao speaks/runs into a random people, makes references to Moodigere, BEML, Razak, Pushpa, Murthy etc.
- Bus episode: Rao is seen getting into an intercity bus (red bus) on the road which has stopped to load luggage. Cut to Rao getting down from the bus in a different location. Someone next to Rao follows his lead and crosses the road. Opposite axis we see another intercity bus arriving in the opposite direction of Rao getting down. Rao boards the bus. Cut to inside the bus, different axes, different people, and different conductor.
- Close up shots of destination board of buses changing.
- Passing shots of bus at different locations
- Near a highway, bus stops, conductor holds his arm and say "ದುಡ್ಡಿಲ್ದೆ ಯಾಕ್ರಿ ಹತ್ತೀರಾ ಬಸ್ನಾ? ಇಳ್ಕೊಳಿ ಇಳ್ಕೊಳಿ "and Rao gets down from the bus.

# <u>22. EXT. DAY. Qualis.</u>

# <u>Burkha scene</u>

Day. Ext

Venkob Rao is on a highway walking. He comes across a Qualis filled with bhurka clad women.

**<u>Woman 1:</u>** Jai Nagma, tumna maalumu? Woh Latif ki beti bhageeketi

**<u>Woman 2:</u>** Kaun Latif?

**<u>Woman1:</u>** Woich, tumhare ghar kaney naariyal ka dukaan rakhohi na, un-woich

**<u>Woman 2:</u>** Hou! Bolo bolo..maalumu, woh gori chitti si chokri thina woich? Uska nikah kya ki pix hoku thana?

**<u>Woman 1:</u>** Kosa nikah baingan?! Mai bolchi suno… kaunki ek chokra hai kehte…

**<u>Woman 3:</u>** Ammi, tumhe bhi chupke kaun kaun ki boleso batan sunko… mai bolchu suno kya hua karku... Woh kya katho, us din raat ku…

(Rao climbs into the front seat of the Qualis and Woman 3 freezes)

**<u>Woman 1:</u>** Aage bolgey kya hua?

(Woman 3 slowly lifts her bhurka)

**<u>Woman 2:</u>** Bol aage bol…

(Woman 4 nudges woman 2)

**<u>Woman 4:</u>** Ammi who dekho…

(All women stare at Rao)

**<u>ರಾವ್:</u>** ನಾಜ಼ಿಯಾ ಬಾಬಿ ವೆಜ್ ಫುಡ್ ಇರುತ್ತಲ್ವ ಮದುವೇಲ್ಲಿ? ರಜ಼ಾಕ್‌ಗೆ ರಿಕ್ವೆಸ್ಟ್ ಮಾಡಿದ್ದೆ ಮುಂಚೇನೆ, ಅನ್ನ ಸಾಂಬಾರ್ ಇದ್ರೆ ಸಾಕು ನನಿಗೆ...

**<u>Woman 1:</u>** Kaunsa anna? Kaunsa sambaru? Kaun ba tu? Kosa ki diwana kahan se ki bhag ko aaga dista. Uttro ji neechey.

ರಾವ್ : ರಜ಼ಾಕ್ ಎಲ್ಲಿ? ಮದುವೇಗೆ ಲೇಟ್ ಆಗ್ತಾ ಇಲ್ವಾ?

**<u>Woman 1:</u>** Ha? Kausa maduve? Maiyat ko jaari so poorey. Ab tumhe utre nai toh tumhara janaza nikalti. Ei… bularey Arif bhai ku…

(Small kid jumps up and threatens Rao)

**<u>Kid:</u>** Ei budhey! Utar neechey! Nahi toh yaich ragad dal tu! Mera maalum na?

**<u>ರಾವ್:</u>** ನವಾಜ಼್. ಅಲ್ವಾ?

(Man of the vehicle enters)

**<u>Woman 1:</u>** Jai! Utaro ji budhey ko! Tumhe halalek chal jao chah peene kaha kaha ki, kaun kaun ki aaku tumhare seat po bait jaati.

# <u>23. INT. NIGHT. Police station.</u>
# <u>Shiva and Sahana register a police complaint</u>

Int. Night

<u>ಶಿವ:</u>ಒಂದು ಮಿಸ್ಸಿಂಗ್ ಪರ್ಸನ್ಸ್ ರೆಪೋರ್ಟ್ ಫೈಲ್ ಮಾಡಬೇಕಿತ್ತು.

<u>ವೀರೇಶ್:</u>ಹೆಸರು?

<u>ಶಿವ:</u>ವೆಂಕೊಬ್ ರಾವ್ ಅಂತ, ಅರವತ್ತಾರು ವರ್ಷ.

<u>ವೀರೇಶ್:</u> ನಿಮ್ ಹೆಸರು ಹೇಳ್ರೀ ಫಸ್ಟ್ಟು.

Shiva is getting restless, Sahana cuts in.

<u>ಸಹನ:</u> ಸರ್, ಇವರು ಶಿವ, ನಾನು ಸಹನ. ಇವರ ತಂದೆ ವೆಂಕೊಬ್ ರಾವ್ ಅಂತ, ಇವತ್ತು ಸರಸ್ವತಿ ಸರ್ಕಲ್ ಹತ್ತಿರ ಇರೋ old age home ಇಂದ ಕಾಣೆಯಾಗಿದ್ದಾರೆ.

<u>ವೀರೇಶ್:</u>ಹೆಸರೇನಂದ್ರಿ?

<u>ಶಿವ:</u>ಶಿವ.

<u>ವೀರೇಶ್:</u> ನಿಮ್ದಲ್ರೀ! ಆ ತಾತಂದು.

<u>ಶಿವ:</u>ವೆಂಕೊಬ್ರಾವ್! ಅರವತ್ತಾರು ವರ್ಷ!

Writer stares at Shiva.

<u>ವೀರೇಶ್:</u>ಕರೆಕ್ಟಾಗಿ ಮಾತಾಡ್ರೀ, ನಿಮಿಗೆಲ್ಲಾ ಹೆಲ್ಪ್ ಮಾಡಕ್ಕೆ ನಾವಿಲ್ಲಿ ಕೂತಿರೋದು.

<u>ಶಿವ:</u>ಮತ್ತೆ ಹೆಲ್ಪ್ ಮಾಡಿ, ಕೇಳಿದ್ದನ್ನೆ ಕೇಳ್ತಾ ಇದ್ದೀರ?!

<u>ಸಹನ:</u>ಶಿವ... (She stops him)

<u>ವೀರೇಶ್:</u> ನೋಡಿ ಮೆಡಮ್, ಕೂಗಾಡೋದೆಲ್ಲ ಸ್ಟೆಶನ್ನಲ್ಲಿ ನಡಿಯಲ್ಲ. ನಿಮ್ ಹಸ್ಬೆಂಡ್ ಗೆ ಕರೆಕ್ಟಾಗಿ ಮಾತಾಡಕ್ಹೇಳಿ. ಇಲ್ದೆ ಹೋದ್ರೆ ಆಚೆ ಕಡೆ ಕಳಿಸ್ತಿನಿ.

<u>ಸಹನ:</u> ಸರ್, ನನ್ ಹಸ್ಬೆಂಡ್ ಅಲ್ಲ ಇವರು, ನಾನು ಆ ಸಂಸ್ಥೆಲೀ ಕೆಲಸ ಮಾಡ್ತಾ ಇರೋ ಡಾಕ್ಟರ್. ತಂದೆ ಕಾಣೆಯಾದ್ಮೇಲೆ ಆ ಟೆನ್ಶನ್ ಇರುತ್ತಲ್ವ? ಕ್ಷಮೆಸ್ಬಿಡಿ.

**ವೀರೇಶ್:** ಮುಂಚೆ ಯಾವಾಗಾದ್ರು ಓಡೋಗಿದಾರಾ?

**ಸಹನ:** ಸರ್, ಅವರು ಓಡೋಗಿಲ್ಲ. ಅವರಿಗೆ ಅಲ್‌ಝೈಮರ್ಸ್ ಅಂತ ಒಂದು ಮೆಡಿಕಲ್ ಕಂಡೀಶನ್ ಇದೆ. ಅದು..ಅರಳು-ಮರಳು ಅಂತಾರಲ್ಲ...ಅದೆ.

**ವೀರೇಶ್:** ಆ...ಗೊತ್ತು ಗೊತ್ತು, ಕೇಳಿದ್ದೀನಿ. ಫೋಟೊ ಏನಾದ್ರು ಇದ್ಯಾ?

**ಶಿವ:**ಇಲ್ಲ

**ಸಹನ:**ಇದೆ, ಒಂದು ನಿಮಿಷ.

Sahana hands a photo to veeresh

Sahana: ಕಾಣೆ ಆದಾಗ _____ ಕಲರ್ ಶರ್ಟ್ ಹಾಕೊಂಡಿದ್ರು. ನಮ್ಮ ಸಂಸ್ಥೆ ಐಡಿ ಕಾರ್ಡ್ನಾ ಪಾಕೆಟ್ ನಲ್ಲಿ ಕ್ಯಾರಿ ಮಾಡ್ತಾ ಇದ್ರು

**ವೀರೇಶ್:** ಮಾನಸಿಕ ಸ್ಥಿತಿ ಬೇರೆ ಸರೀಗಿಲ್ಲ ಅಂತೀರಾ, ಕರೆಕ್ಟಾಗೆ ನೋಡ್ಕೊಳಕ್ಕಾಗಲ್ವ? ನಿಮ್ ಅಡ್ರೆಸ್ಸು ಕಾಂಟ್ಯಾಕ್ಟು ಬರೀರಿ.

Shivlingu hands over a form to Shiva to fill.

**ವೀರೇಶ್:** Control room ಮೆಸೆಜಸ್ ಪಾಸ್ ಮಾಡಸ್ತಿವಿ, ಸುತ್ತಮುತ್ತ ಹಾಸ್ಪಿಟಲ್ ನಲ್ಲಿ ರೋಡ್ ಆಕ್ಸಿಡೆಂಟ್ ಆಗಿ ಯಾವದಾದ್ರು ಅನ್ ಕ್ಲೇಮ್ಡ್ ಬಾಡಿಸ್ ಇದೀಯ ಅಂತ ಚೆಕ್ಮಾಡ್ತೀವಿ. ಏನೇ ಇನ್‌ಫ್ರ್ಮೇಷನ ಸಿಕ್ಕಿದ್ರು, ಕಾಲ್ಮಾಡ್ತೀವಿ. ಬಟ್ ಒಂದು ಅರ್ಥ ಮಾಡ್ಕೊಳಿ, ನಮಿಗೆ ನಮ್ದೆ ಆದ limitations ಇರುತ್ತೆ. ಇವಾಗಿರೊ man power ನಲ್ಲಿ, ಬಂದಿರೋ ಕೇಸ್‌ಗಳನ್ನ ಹ್ಯಾಂಡಲ್ಮಾಡಕ್ಕೆ ಆಗ್ತಿಲ್ಲ. ಇರೋ ಜನಸಂಖ್ಯೆಲ್ಲಿ ಒಂದು ವ್ಯಕ್ತಿನ ಹುಡುಕೊದು ತುಂಬಾ ಕಷ್ಟ ಇದೆ. ಆ ರಿಜಿಸ್ಟರ ನೋಡಿ, ಪೂರ್ತಿ ಬರೀ ಮಿಸ್ಸಿಂಗ್ ಪರ್ಸನ್ಸ್ ಕೇಸ್ ಗಳೇ ಇದೆ. ಇಲ್ಲಿ ಎಷ್ಟು ಜನ ಇದಾರೆ ಅಂದ್ರೆ, ಒಂದು ಮನುಷ್ಯನ ಜೀವಕ್ಕೆ ಬೆಲೆನೇ ಇಲ್ಲ. ನಮ್ ಪ್ರಯತ್ನ ನಾವು ಮಾಡ್ತೀವಿ. ನೀವು ಹುಡುಕೋದು ನಿಲ್ಲಸ್ ಬೇಡಿ.

# 24. EXT. NIGHT. ROAD.

## People walking past Rao

Juxtopose a shot of Venkob rao sitting while lots and lots of people are walking past him. Wipe on camera cut to

# 25.EXT.NIGHT.ROADS AROUND OLD AGE HOME

## Near miss shadow sequence

Ext. Night

Shiva and Sahana driving around, Shiva suddenly stops the car and jumps out of the car, running towards a shadowy figure as he reaches that figure, it is revealed to be somebody else..Sahana meanwhile drives to him, Shiva gets in….

**ಸಹನ:** ಶಿವ ನನ್ನ opinion ನಲ್ಲಿ ಈ ತರಾ cluless ಆಗಿ ಹುಡುಕೋದ್ರಲ್ಲಿ ಅರ್ಥ ಇಲ್ಲ. ನಮ್ಮ ಸಂಸ್ಥೆ ಸುತ್ತಮುತ್ತ, ನಿಮ್ಮ ಮನೆ, ಎಲ್ಲ ನೋಡಿದ್ವಿ. ಸ್ವಲ್ಪ ಹೊತ್ರಲ್ಲಿ ಬೆಳಕಾಗುತ್ತೆ. At least couple of hours rest ತೊಗೊಂಡು, fresh ಆಗಿ ಬೆಳಗ್ಗೆಯಿಂದಾನೇ ಹುಡ್ಕಕ್ ಶುರು ಮಾಡೋಣಾ... Alzheimer's patients' ಅವರ ಹಳೇ habits ನ follow ಮಾಡೊ chances ಇರುತ್ತೆ, ನಿಮ್ಮ ತಂದೆ ಹಳೇ routine follow ಮಾಡೋಣ. Let's hope something works out.

**ಶಿವ:** ಅವರ routine follow ಮಾಡಿದ್ರೆ, ಎರಡು ನಿಮಿಷ್ ದಲ್ಲಿ ಸಿಗ್ಬೇಕಾಗಿತ್ತು... ಅವರ ಜೀವನ ಗಡಿಯಾರದ ತರ, ಬೆಳಿಗ್ಗೆ ಐದು ಘಂಟೆಗ್ ಎದ್ದು, walking ಹೋಗಿ, office, ಮನೆ ಬಿಟ್ರೆ, ಇನ್ಯಾವುದೂ routine ಇರಲಿಲ್ಲ. Especially retire ಆದ್ಮೇಲಂತು ಬೆಳಿಗ್ಗೆ ಇಂದ ಸಾಯಂಕಾಲ ಮನೇಲಿ books ಓದ್ಕೊಂಡು ಕೂತಿರೋವ್ರು. Extremely boring and ordinary.

**ಸಹನ:** Venkob sir wasn't ordinary…. ಅದು ಬಿಡಿ …ನಿಮ್ಮ friends-family ಯಾರೇ ಇದ್ರು contact ಮಾಡಿ, ಎಷ್ಟು help ಸಿಗುತ್ತೋ ಅಷ್ಟೆ ಒಳ್ಳೆದು.

**ಶಿವ:** Friends ಅನ್ನಿಸ್ಕೊಂಡವರೆಲ್ಲಾ ಇಲ್ಲಿ ಯಾರು ಇಲ್ಲ. And family?? Huh! ಯಾರ್ ಸಪೊರ್ಟ್ ಇಲ್ದೆನೆ ಮದುವೆ ಆಗಿದ್ದು.. ರಿಲೇಟಿವ್ಸ್ ಎಲ್ಲಾ ನಮ್ಮ ತಂದೆ ತಾಯಿ ಮದ್ವೆ ಆದಾಗ್ಲೆ cut ಆದ್ರು.

# 26.EXT.NIGHT.ROAD.

## Rao walking alone on highway+ trying to cross highway

## (For Nightmare)

Car starts passing wipe, cut to same car passing and Venkob rao walking on the road. Camera tilt up to sky (moon) Camera tilt down to Shiva house.

# 27.INT/EXT. NIGHT.SHIVA's HOUSE

## Shiva's nightmare

Int/Ext. Night

Shiva has dozed off on the couch, he wakes up to the sound of loud traffic, he looks at the watch, he is little confused, he notices that the TV is upside down and Doordarshan intro is playing in loop, he notices light streaks und erneath the door, Mannequin of father and son.  he opens the door and finds himself on a highway. There he sees Venkob Rao trying to cross the road and a lorry coming from the other side. He wakes up sweating profously.

Cut to Venkob Rao on road

# 28. EXT.NIGHT.HIGHWAY.
# Ranga & Manja intro-change no.plate. Rao boards the truck

Ext. Night

A truck (like 407) stops in a secluded area, in the middle of the night, going past the old man. Ranga gets down from the vehicle and gets a call.

ರವಿ ಪ್ರಕಾಶ್: ಎಲ್ಲಾ ಓ.ಕೆನಾ? (**With a slight cough)**

ರಂಗ : ಟೆನ್ಷನ್ ತಗೋಬೇಡಿ, ಎಷ್ಟು ಸಲಾ ಮಾಡಿಲ್ಲಾ? ಆ ನಾಯಿ ಚೆಕ್‌ಪೋಷ್ಟಲ್ಲಿ ಐನೂರು ರೂಪಾಯಿ ಕಿತ್ಕೊಂಡ. ಏನು ತೊಂದ್ರೆ ಇಲ್ಲ. ಕೆಲ್ಸ ಮುಗುಸ್ಕೊಂಡು ನಾಳೆ ಬೆಳಗ್ಗೆ ಆರಾಮಾಗಿ ವಾಪಸ್ ಬರ್ತೀವಿ.

ರವಿ ಪ್ರಕಾಶ್ : ನೋಡು ರಂಗ... ಮುಂಚೆ ಮಾಡಿರೋ ಸಣ್ಣ ಪುಟ್ಟ ಕೆಲ್ಸ ತರಾ ಅಲ್ಲ, ದೊಡ್ಡ ತಲೆ, ತುಂಬಾ ಡೆಲಿಕೆಟ್ ಮ್ಯಾಟರ್ ಏನು ಹೆಚ್ಚು ಕಮ್ಮಿ ಆಗ್ಬಾರ್ದು. ನಮ್ ವ್ಯವಹಾರದಲ್ಲಿ ಮೊದಲ್ನೇ ತಪ್ಪಿಗೂ ಕೊನೆ ತಪ್ಪಿಗೂ ವ್ಯತ್ಯಾಸ ಇರಲ್ಲ.

ರಂಗ : ಆಯ್ತಣ್ಣ.

ರವಿ ಪ್ರಕಾಶ್ : ಎಷ್ಟೋತ್ತಾದ್ರು ಪರ್ವಾಗಿಲ್ಲ, ಏನಿದ್ರೂ ಫೋನ್ ಮಾಡು.

**Ranga hangs up and gives phone to manja.**

ರಂಗ : ಏಯ್! ಗಿಡಕ್ ಗೊಬ್ರ ಹಾಕೋಷ್ಟ್ರಲ್ಲಿ ನಂಬರ್ ಪ್ಲೇಟ್ ಚೇಂಜ್ ಮಾಡೋ. ಹಂಗೆ ರೇಡಿಯೇಟರ್‌ಗೂ ನೀರು ಹಾಕು.

ಮಂಜ : ಏನಣ್ಣ ಚೆಕ್‌ಪೋಸ್ಟ್‌ಗೊಂದು ಗೊಬ್ರ ಹಾಕ್ತೀರಾ, ಹೊಟ್ಟೆ ಸರೀಗಿಲ್ವಾ?!

ರಂಗ : ಏಯ್! ಮುಚ್ಕೊಂಡು ಹೇಳ್ದಷ್ಟು ಮಾಡೋ.

**Ranga leaves with a bottle of water , Manja picks up number plate from dashboard, opens the rear door, takes the water can, laves the door open and changes the front number plate. He's in call, phone is in between his ear and shoulder.**

ಮಂಜ : ಊಟ ಮಾಡಿದ್ಯಾ?

ರೇಷ್ಮ : ಆಯ್ತು

ಮಂಜ : ನಂದು ಊಟ ಆಯ್ತಾ ಅಂತ ಕೇಳ್ಳೇ ಇಲ್ಲಾ?

ರೇಷ್ಮ : ನಾನ್ ಯಾಕ್ ಕೇಳ್ಬೇಕು?

ಮಂಜ : ಸರಿ ಬೇಡಾ ಬಿಡು.

ರೇಷ್ಮ : ಹೋಗ್ಲಿ ಹೇಳು.

ಮಂಜ : ಆಯ್ತು, ಆದರೆ ಯಾಕೋ ಗೊತ್ತಿಲ್ಲ, ನಿನ್ನನ್ನ ನೋಡ್ದೆ ಇದ್ರೆ ಊಟಾನೇ ಸೇರಲ್ಲ.

ರೇಷ್ಮ : ಇಷ್ಟೆ ಆಯ್ತು ಬರೀ ಫಿಲ್ಮ್ ಡೈಲಾಗ್‌ಗಳೇ ಹೊಡಿತೀಯ.

ಮಂಜ : ನೀನು ಫಿಲ್ಮ್ ಹಾಡುಗಳ್ಗೇ ಡ್ಯಾನ್ಸ್ ಆಡ್ತಿಯಾ? ನಾನು ಡೈಲಾಗ್ ಹೊಡಿಬಾರ್ದಾ?

ರೇಷ್ಮ : ದೊಡ್ಡ ದರ್ಶನ್ನೋ ಸುದೀಪೋ ನೀನು?

ಮಂಜ : ನಾವು ಜೀವನ ಪೂರ್ತಿ ರೇಡಿಯೇಟರ್‌ಗೆ ನೀರು ಹಾಕ್ಕೊಂಡಿರಲ್ಲಾಮ್ಮ ನಾವು ಒಂದು ದಿನ ಡ್ರೈವರ್ ಆಗ್ತಿವಿ, ಗಾಡಿ ತಗೊಂಡ್ ಬರ್ತೀವಿ, ಎತ್ತಾಕ್ಕೊಂಡ್ ಹೋಯ್ತಾ ಇರ್ತೀವಿ.

ರೇಷ್ಮ : ಹೌದು ಕಾಯ್ತಾ ಇರ್ತೀನಿ.

ಮಂಜ :**Hello? Hello?**

**Manja tries to redial but gets interrupted by Ranga who whacks him on the head. Cut to the back, Venkob Rao makes his way to the truck and climbs inside.**

**Ranga comes and whacks Manja's head.**

ರಂಗ : ಆ ಕಿತ್ತೋಗಿರೋ ಐಟಮ್ ಜೊತೆ ಮಾತಾಡಬೇಡಾ ಅಂತಾ ಎಷ್ಟ್ ಸಲಾ ಹೇಳಿದಿನಿ. ಎರಡು ನಿಮಿಷದಲ್ಲಿ ಲವ್ ಸ್ಟೋರಿ ಶುರು ಮಾಡ್ಬಿಡ್ತೀಯ. ಬೇಗ್ ಹೋಗಿ ಹಿಂದೆ ನಂಬರ್ ಪ್ಲೇಟ್ ಚೇಂಜ್ ಮಾಡು.

**Rao is inside, Manja opens the door to keep the water can, a hint of Rao can be seen, Manja doesn't notice. He closes the door, locks it and changes the number plate.**

# 29. INT/EXT.NIGHT.Road
# Ranga Manja conversation, accident

Ext. Night

**Passing shots of truck through the night,**

ಮಂಜ : ಪ್ರಕಾಶಣ್ಣ ಎಷ್ಟೊಂದ್ ಡ್ಯಾನ್ಸ್ ಬಾರ್‌ಗಳು ನಡಿಸ್ತಾರಲ್ಲಣ್ಣ? ಕಿಶೋರ್ ಹೇಳ್ತಾ ಇದ್ದ, ಮಾಗಡಿ ರೋಡ್ ಪೆಟ್ರೋಲ್ ಬಂಕ್ ಹಿಂದೆ ಇರೊ ಡ್ಯಾನ್ಸ್ ಬಾರ್ ಅಣ್ಣಂದೆ ಅಂತೆ? ನಮಿಗ್ ಗೊತ್ತಿಲ್ದೇ ಇರೋದು ಇನ್ನೆಷ್ಟಿದಿಯೋ?

ರಂಗ : ದೊಡ್ಡವರ ವಿಷ್ಯ ನಿಂಗ್ ಯಾಕೋ?

ಮಂಜ : ಸುಮ್ನೆ ಕೇಳ್ದೆ. ಎಷ್ಟೇ ದೊಡ್ಡವರಾದ್ರು ತುಂಬಾ ಒಳ್ಳೆಯವರು, ಹಾರ್ಟ್ ಗೋಲ್ಡು! ಡ್ಯಾನ್ಸ್ ಬಾರಲ್ಲಿ ಎಷ್ಟೊಂದು ಹುಡ್ಗೀರು ಇದಾರಲ್ಲಣ್ಣ? ಅದ್ರಲ್ಲಿ ನಮ್ ಹುಡ್ಗೀನ ಬಿಟ್ಬಿಡಿ ಅಂದ್ರೆ ಬಿಟ್ಕೊಟ್ಬಿಡ್ತಾರಲ್ಲಣ್ಣ?

ರಂಗ : ತಲೆ ಗಿಲೆ ಕೆಟ್ಟಿದ್ಯಾ ನಿನಿಗೆ? ಆ ಹುಡುಗಿ ಸಹವಾಸ ಬಿಡು! ಇಲ್ಲಾ ಅಂದ್ರೆ.. ಹಿಂದೆ ಇದಿಯಲ್ಲಾ..ಅದೇ ತರಾ ಹೊಗೆ ಹಾಕಸ್ಕೊಂತಿಯಾ..... ನಾನೇ ಕರ್ಕೊಂಡ್ ಹೋಗಿ ಆಮೇಲೆ ಗುದ್ಲಿ ಪೂಜೆ ಮಾಡ್ಬೇಕಾಗುತ್ತೆ.

**Rao sitting inside the truck, wobbling a bit. The camera slowly pans down to a dead body, lying next to him (Same person from the first scene).**

ಮಂಜ : ಬಿಡಿ ಅಣ್ಣ, ಪ್ರೀತಿ – ಪ್ರೇಮ, ಫೀಲಿಂಗು ನಿಮಿಗೇನು ಗೊತ್ತಾಗುತ್ತೆ?

ರಂಗ : ಈ ಲವ್ ಎಲ್ಲಾ ಬರೀ ಸಿನಿಮಾಲಿ, ಅವಳ ಬಗ್ಗೆ ಫಸ್ಟ್ ಸ್ಕೆಚ್ ಹಾಕೋದು ಬಿಡು.

**Reaction shots of Manja feeling bad, followed by passing shots, Ranga notices Manja being upset.**

ರಂಗ : ನಿನ್ನ ಒಳ್ಳೇದಿಕ್ಕೆ ಹೇಳ್ತಾ ಇರೋದೋ, ಅಷ್ಟೊಂದೆಲ್ಲಾ ಫೀಲಿಂಗ್ ಮಾಡ್ಕೊಂಡು ಸೈಲೆಂಟ್ ಅಗಿ ಕುತ್ಕೋಬೇಡಾ, ಸಿಗರೇಟ್ ಹಚ್ಚು.

**One passing shot of vehicle.**

ಮಂಜ : ಒಂದು ಕೊಟ್ಟೆ ಅಣ್ಣ ಅವನಿಗೆ, ಶೇಕ್ ಆಗ್ಬಿಟ್ಟ. ಸುಮ್ನೆ ನಮ್ ಹತ್ತಿರ ಬಂದು ಕಿರಿಕ್ ಮಾಡ್ದಾ ನಾನು ನೋಡೋ ಅಷ್ಟು ನೋಡ್ದೆ. ಇನ್ನೊಂದು ಸಲಾ ಏರಿಯಾ ಕಡೆ ಬರಕ್ಕೆ ಹೆದರ್ಕೋಬೇಕು ಅವನು.

**–Cut-**

ಮಂಜ : ಪ್ಯಾಂಟ್ ಫುಲ್ ಹರ್ದೋಗಿತ್ತು.**(Manja laughing histerically).**

**Passing shot and old man has fallen asleep.**

ಮಂಜ : ಏನು ಆಕ್ಟಿಂಗ್ ಮಾಡಿದಾನಣ್ಣ? ಸಾಂಗು, ಫೈಟು ನೋಡ್ಬೇಕು! ಕ್ಲೈಮಾಕ್ಸ್ ಫೈಟ್ ಅಲ್ಲಿ ಹಾರ್ಕೊಂಡೇ ಫುಲ್ ಫೈಟಿಂಗ್ ಮಾಡ್ತಾರೆ, ನೋಡ್ಬೇಕಣ್ಣ ಥಿಯೇಟರಲ್ಲಿ ಜನರು... ರೊಚ್ಚಿಗೆದ್ಬಿಟ್ಟಿದ್ರು, ಪಿಕ್ಚರ್ ಅಂದ್ರೆ ಅದು!

**–Cut-**

**Manja:** ನಾನು ಅವನಿಗೆ ಹೇಳ್ದೆ..ನೋಡೊ.. ಹಿಂಗೇ ಎಗರ್ತಾ ಇದ್ರೆ....ಕುಯ್ದಾಕ್ತಿನಿ ಅಂತಾ... ಪೋಸ್ಟ್ ಮಾರ್ಟಮ್ ಮಾಡಬೇಕಾದ್ರೆ.... ಹೆಂಗೂ ಕುಯ್ಯಕ್ಕೇ ಜಾಗಾ ಬಿಟ್ಟಿಲ್ವಲ್ಲಾ.. ಅಂತಾ ತಲೆ ಕೆಡಸ್ಕೊಂಡ ಬಿಡಬೇಕು.

**–Cut**

ಮಂಜ : ನಮಿಗೇನ್ ಭಯಾನಾ?! ಎಂತೆಂತದ್ದೋ ನೊಡಿದೀವಂತೆ? ನಮಿಗೆ ಕಥೆ ಹೇಳಕ್ ಬರ್ತಾನೆ. ಭಯಾನೇ ನನ್ನ ಬ್ಲಡ್ಡಲಿಲ್ಲ.

ರಂಗ : ಎಷ್ಟೋ ಮಾತಾಡ್ತಿಯಾ?! ನಿನು ಮಾತಾಡೋದ್ ನೋಡಿ ನನಿಗ್ ಬಾಯಾರಿಕೆ ಆಗ್ತಾ ಇದೆ, ನೀರು ಕೊಡು.

**Hand comes out.**

# 30.EXT.NIGHT.ROAD

## Kumar's intro scene- Manja shifts everyone to Kumar's car

# 31.EXT.NIGHT.ROAD.

## Ranga wakes up, takes U turn and finds cops at the accident spot

# 32.EXT.NIGHT.OPEN SECLUDED AREA
# Ranga informs Ravi Prakash about the accident

Car has stopped in a secluded area, Ranga is sitting motionless, staring into the darkness, and Manja is next to him.

**ಮಂಜ:**ಏನ್ಯೋಚಿಸ್ತಾ ಇದೀರಣ್ಣ?

Ranga doesn't react.

**ಮಂಜ:**ಅಣ್ಣ...ಅಣ್ಣ?

Ranga angrily looks at Manja and steps out of the car, he takes his phone out, dials and paces up and down, at the sound of call being picked up, he stops.

**ರವಿ:**ಏನಾಯ್ತು?

Cut to inside of the car, Kumar has woken up, he finds Manja looking at Ranga who is on call, walking up and down and very animated. Kumar's sliding his hand slowly towards the handle of the door. Manja turns around immediately, Kumar just in time plays dead. Cut back to Ranga.

**ರಂಗ:**ಕಣ್ಮುಚ್ಚಿ ಕಣ್ ತಗ್ಯೋದ್ರಲ್ಲಿ ಈ ತರಾ ಆಗೋಯ್ತಣಾ.

**ರವ್ವಿ:**ಇವಾಗ್ ಎಲ್ಲಿದ್ಯಾ?

**ರಂಗ:**ಆ _____ ಜಾಗಾ ಹತ್ತಿರಾನೇ...ಸಿಂಗ್ನಾಯಕನಹಳ್ಳಿ.

**ರವಿ:**ದೊಡ್ಡ ತಲೆ ಅಂತ ನಿನಿಗೊತ್ತಿತ್ತು. ನೀವಿಬ್ರು ಸೇರಿ ಮಾಡಿರೋ ಘನ ಕಾರ್ಯಕ್ಕೆ ನಾನು ತಲೆ ಮರೆಸ್ಕೊಂಬೇಕು. ನಾನು ಹೇಳೊದನ್ನ ಕರೆಕ್ಟಾಗಿ ಕೇಳಿಸ್ಕೊ. ಅವ್ರಿಬ್ರನ್ನ ಮುಗ್ಸಿಬಿಡು, ಕರೆಕ್ಟ್ ಟೈಮ್ ನಿನ್ನ ಚೇಲಾನ್ನೂ ಎತ್ಬಿಡು.

Ranga who's pacing up and down stops and looks at Manja.

**ರವಿ:** ಹೇಳಿದ್ದೇಲ್ಲಾ ಅರ್ಥ ಆಗ್ತಾ ಇದ್ಯಾ?

**ರಂಗ:** ಅಣ್ಣ..... ನಾನು ಕೈಯಾರಾ ಯಾವತ್ತು……

**<u>ರವಿ:</u>** ಇಲ್ಲಿ ತನಕ ನಿನ್ ಕೈ ಗಲಿಜ್ ಮಾಡ್ಕೊ ಅಂತಾ ನಾನು ಯಾವತ್ತು ಹೇಳಿಲ್ಲಾ...ನೀನೆ ಮಾಡ್ಕೋಂಡಿರೋ ಕೆಲ್ಸ ಇದು.. ಸರಿ ಮಾಡು ...

Ranga: ಅಣ್ಣಾ

Raviprakash: ಲೇ ...ಇಷ್ಟು ವರ್ಷ ನನ್ನೊಟ್ಟಿಗೆ ಇದ್ದೆ ಅಂತಾನೂ ನೋಡಲ್ಲ, ಬದುಕ್ಬೇಕಂತ ಆಸೆ ಇದ್ರೆ ನಾನ್ಹೇಳ್ದಷ್ಟು ಮಾಡು! ನಾನ್ ಫೋನ್ಮಾಡ್ತೀನಿ...ಮುಂದೆ ಏನ್ಮಾಡ್ಬೇಕಂತ ಹೇಳ್ತೀನಿ. ಅಷ್ರಲ್ಲಿ ನಾನ್ಹೇಳಿರೋ ಕೆಲ್ಸ ಮುಗಿಸು….

Before Ranga says anything, Ravi Prakash hangs up.

# <u>33. EXT.NIGHT.OPEN SECLUDED AREA</u>
# <u>Ranga partially reveals Ravi Prakash's orders to Manja after the accident</u>

Ranga looks at the phone, charges toward the car, opens the door and pulls out Kumar. He drags Kumar, who is still playing dead.

<u>ಮಂಜ:</u>ಅಣ್ಣ ಪ್ರಕಾಶಣ್ಣ ಏನ್ಹೇಳಿದ್ರಣ್ಣ? ಹೇಳಿ ಅಣ್ಣ. ಅಣ್ಣ ಅಣ್ಣಾ?

<u>ರಂಗ:</u>ಐ!! ಇವರನ್ನ ಸಾಯಿಸಕ್ಕೆ ಹೇಳಿದ್ರೂ!

Kumar immediately springs to life.

**<u>ಕುಮಾರ್:</u>** ಸಾರ್ ಬಿಟ್ಬಿಡಿ.. ಸಾರ್ ಬಿಟ್ಬಿಡಿ , ಪ್ಲೀಸ್ ಸರ್, ನಂಗೊಂದು ಫ್ಯಾಮಿಲಿ ಇದೆ!

Ranga raise his hand to strike and bring it down.

# <u>34. INT.NIGHT.SHIVA’S HOUSE</u>
# Shiva goes through old mails and finds Rao's birthday video

Shiva prepping for the presentation, in between he ends up opening some old photos on the comp of his parents. He finds an old mail from Sahana…

# 34A.INT.DAY.OLD AGE HOME

# Birthday video of Rao

**Rao is sitting with a knife in his hand, looking serious. Slow pullback, it's his birthday. A few friends at the old-age home are present, all wearing birthday caps. One old man is on a wheelchair, his wife by his side, two more old men present. Susheel next to Rao, Sahana is behind the camera.**

ಸಹನ : ವೆಂಕೋಬ್ ಸರ್, ಬರ್ತ್‌ಡೇ ನಿಮ್ದು, ಸ್ಮೈಲ್ ಮಾಡಿ.

ಬೆಟ್ಟಿ : ಚಾಕು ಹಿಡ್ಕೊಂಡ್ ಒಳ್ಳೆ ವಿಲ್ಲನ್ ತರಾನೇ ಕಾಣ್ತಿದ್ದಿಯಾ.

ಸಹನ : ಏ ಸುಶೀಲ್, ಬಾರೋ ಇಲ್ಲಿ, ವಿಡಿಯೋ ತೆಗಿ ಬಾ.

**Susheel comes excited, Sahana hands him the camera and comes into the frame.**

ಸಹನ : ಶೇಕ್ ಮಾಡ್ಬೇಡ, ಹಂಗೇ ಹಿಡ್ಕೋ.

ಸುಶೀಲ್: ಹಾ! ಚುಚ್ಚು ಮಾಡ್ಬೇಕಾದ್ರೆ ಅಮ್ಮ ಅದೇ ಹೇಳೊದು.

ಸಹನ : ಅಯ್ಯೋ ಕರ್ಮ.

**Sahana places candles on the cake.**

ರಾವ್ : ಏನಮ್ಮ ಹೆಂಗ್ ಇಂಟರ್‌ಚೇಂಜ್ ಮಾಡಿದ್ರು ಕಮ್ಮೀನೆ ಆಗಲ್ಲ ವಯಸ್ಸು. ಒಂದು ಕೆಲಸ ಮಾಡು ಈ ೬ ನ ೧ ಮಾಡಾಕ್ಕಾಗತ್ತ ನೋಡಮ್ಮ.

ಬೆಟ್ಟಿ : ಹೋ.. ಸ್ವೀಟ್ ೧೬ ನಿನಗೆ.

ರವಿ : ನಮ್ಗಿರೋ ಕಂಡೀಷನ್‌ಗೆ ಹೋಗ್ತಾ ಹೋಗ್ತಾ ಮಗೂನೇ ಆಗೋದು ನಾವು.

ವೇಣು : ನಿನ್ನ ಗಂಡನ್ನ ನೋಡು ವ್ಹೀಲ್ ಛೇರಿಂದ ತೊಟ್ಲಲ್ಲಿ ಹಾಕ್ಬೇಕು.

ಸಹನ : ಅಂಕಲ್....

ಬೆಟ್ಟಿ : ಹೌದೋ ನಿನ್ನ ಬರ್ತ್‌ಡೇಗೆ ಕೇಕ್ ಇಡಲ್ಲ ಫೀಡಿಂಗ್ ಬಾಟಲ್ ಕೊಡ್ತೀವಿ.

ರಾವ್ : ಯಾವ ಬಾಟಲ್ ಆದ್ರೆ ಏನು? ಹಾಲು ಬದ್ಲು ಆಲ್ಕೋಹಾಲ್ ಹಾಕ್ಕೊಟ್ರೆ ಸಾಕು. ಹ್ಯಾಗೂ.. ಇನ್ನೊಂದ್ ವರ್ಷಾ ಆಗೋದ್ರಲ್ಲಿ ಈ ಹಾಳಾದ್ ರೋಗಾ..

ಸಹನ : ಅಯ್ಯೋ ವೆಂಕೊಬ್ ಸರ್.. ಒಂದ್ ವರ್ಷಕ್ಕೆ ಇನ್ನು ತುಂಬಾ ಟೈಮ್ ಇದೆ.....

**Everyone is laughing.**

ಸಹನ : ಏ ಸುಶೀಲ್, ಕ್ಯಾಮೆರ ನನಿಗೆ ಕೊಡಿಲ್ಲಿ.

College ಹುಡುಗರ್ ಕಿನ್ನ worst–ಉ ನೀವು

**Everyone: Happy birthday to you… happy birthday to you…**

**As Rao is about to blow the candles.**

ಸಹನ : ಒಂದು ನಿಮಿಷ! ಒಂದು ನಿಮಿಷ! ವೆಂಕೋಬ್ ಸರ್ ಕ್ಯಾಂಡಲ್ ಊದೋಕ್ಕಿಂತ ಮುಂಚೆ, ಮೇಕ್ ಎ ವಿಷ್.

ಬೆಟ್ಟಿ : ಏಯ್, ಏನೋ ಕೇಳ್ಕೊಂಡೆ ವೆಂಕಿ?

ರಾವ್ : ನನಿಗಿರೋದು ಒಂದೇ ಆಸೆ, ನನ್ನ ಮಗನ್ಗೆ…….

**34B.INT.DAY.SAHANA's HOUSE**

# Sahana is looking at Rao's bday video

…….ನನ್ನ ಮಗನ್ಗೆ ನಮ್ಮ ಸಹನ ಡಾಕ್ಟರ್ ತರಾ ಒಂದು ಹುಡುಗಿ ಸಿಕ್ಕಿ ಮದುವೆ ಆಗಿ, ಖುಷಿಯಾಗಿರ್ಲಿ ಅಂತ.

ರವಿ : ಸಹನ ತರಾ ಯಾಕೆ? ನಮ್ಮ ಸಹನ ಡಾಕ್ಟರ್‌ನೇ ಕೇಳ್ಬಿಡೋಣ.

ಸಹನ : ಅಯ್ಯೋ ಸುಮ್ನಿರಿ ಅಂಕಲ್.

# <u>35. INT.NIGHT.SAHANA’S HOUSE</u>
# <u>Sahana Making missing posters</u>

Int. Night

Sahana is at her house surrounded by photos of Rao. The photos and Rao’s files (case history) are spread out. She’s looking for a photo, trying to cut just a close up him. He’s smiling in all photos. She picks one and makes a missing poster.

## 36. INT/EXT.DAY.SHIVA'S HOUSE

## Shiva projection of Venkob Rao

Ext .Day

Shiva while walking out of the house sees a hologram projection of Venkob getting ready for a walk, Krishnamurthy is at the door, on his way out, he notices Venkob Rao and Krishnmurthy sitting and talking.

# 37. EXT.DAY.KP CIGARETTE SHOP

## Shiva KP Cigarratte shop

Ext.Day

Shiva is seen sitting at the same cigarrete shop from the flashback

**ಕೇಪಿ:** ಛೆ..ಲೋ! ನನಿಗೊತ್ತಿರೋರಿಗೆಲ್ಲ ಹೇಳ್ತೀನಿ, ಏನೇ ಇನ್‌ಫ಼ೊರ್ಮೇಷನ್ ಇದ್ರು ನಿನಿಗ್ ಫೋನ್ ಮಾಡ್ತೀನಿ, ಅದೇ ನಂಬರಾ..?

**ಶಿವ:** ಹಾ ಅದೇ ನಂಬರ್.

**ಕೇಪಿ:** ಸುಮಾರ್ಸಲಿ ಫೋನ್ ಮಾಡಿದ್ದೆ, ನೀನ್ ಎತ್ಲಿಲ್ವಲ್ಲ ನಂಬರ್ ಚೇಂಜ್ ಮಾಡಿದ್ಯ ಅನ್ಕೊಂಡೆ.

**ಶಿವ:** ಸರಿ ನಾನ್ಬರ್ತೀನಿ...

KP notices Shiva stubbing the cigarette and smile.

**ಶಿವ:** ಏನಾಯ್ತು?

**ಕೇಪಿ:** ಥೇಟ ನಿಮ್ತಂದೆ ತರಾನೆ!

**ಶಿವ:**ಆ? ಏನ್ ಹೇಳ್ತಾ ಇದ್ಯ?

KP points at the place he stubbed.

**ಕೇಪಿ:** ನಿನಿಗ್ಯಾವತ್ತು ಹೇಳಿರಲಿಲ್ಲ, ನಿಮ್ತಂದೆ ಆಫೀಸ್ ಬಸ್ ಹತ್ತೊಕಿನ್ಮುಂಚೆ ಮಿಸ್ ಇಲ್ದೆ ಒಂದು ಸಿಗರೇಟ್ ಹೊಡೆದು ಹೋಗೋವ್ರು.

**ಶಿವ:** ನಮ್ತಂದೆ ಸಿಗರೇಟ್ ಹೊಡಿಯೋವ್ರಾ? ಏನೋ ಹೇಳ್ತಾ ಇದ್ಯಾ?

**ಕೇಪಿ:** ಹೂ ಶಿವ, ಎಲ್ಲಿ ಯಾರಾದ್ರು ನೋಡ್ಬಿಡ್ತಾರೋ ಅಂತ ನಾಲ್ಕೇ ಪಫ಼್ ಅಲ್ಲಿ ಫಾಸ್ಟ್ ಆಗಿ ಹೊಡಿಯೊವ್ರು.

**ಶಿವ:** ಮುಂಚೆ ಯಾಕ್ ಹೇಳಿಲ್ಲ?

**ಕೇಪಿ:** ನಮ್ ಸಿಗರೇಟ್ ಮಾರೋವ್ರ ಸಿದ್ದಾಂತ, ನಿನ್ನ ಬಗ್ಗೆ ಹೆಂಗ್ ಅವರಿಗ್ಹೇಳಿಲ್ವೊ ಅವರ ಬಗ್ಗೆನೂ ನಿನಿಗ್ಹೇಳಿಲ್ಲ.

**ಶಿವ:** ಯಾವ್ ಬ್ರ್ಯಾಂಡ್ ಹೊಡಿತಾ ಇದ್ದಿದ್ದು?

**ಕೇಪಿ:** ನಿಂದು ದೊಡ್ಡ ರಾಜ, ಅವರದ್ದು ಚಿಕ್ಕ ರಾಜಾ.

While walking back he notices Krishna Murthy in the park.

# 38. EXT.DAY.PARK
# Laughter Club scene

Ext.Day

Shiva goes to the park in the morning. Sees a bunch of people about to start the laughter club and say their slogan

“ಮೈಯಿಗೆ ಮನಸಿಗೆ ತಾಕತ್ತು, ಪಡೆಯಿರಿ ಈ ಸೌಲತ್ತು

ಕಾಸಿಲ್ಲದ ಮುಪತ್ತು

ನಮ್ಮ ಈ ನಗೆಕೂಟ, ವಿವೇಕಿಗಳ ಆನಂದ ಕೂಟಾ

ಒಂದು ಎರಡು ಮೂರು, ನಕ್ಕರೆ ಆಯಸ್ಸೂರು

ಹಸನ್ಮುಖಿ ಸದಾಸುಖಿ, ಹಸನ್ಮುಖಿ ಸದಾಸುಖಿ

ಏನೇ ಬರಲಿ, ನಗು ಒಂದಿರಲಿ

ಸರ್ವೇಜನಸುಖಿನೋಭವಂತು”

Shiva is waiting and observing people, controlling his laughter. Krishna Murthy while laughing notices Shiva and gives Vajramuni laughter. Murthy takes a break and comes to meet Shiva.

<u>ಮೂರ್ತಿ:</u>ಏನಯ್ಯ? ಏನ್ವಿಷ್ಯ? ನಮ್ ವೆಂಕೊಬ್ ಹೋಗ್ಬಿಟ್ನ?

<u>ಶಿವ:</u>ಛೆ! ಇಲ್ಲ ಇಲ್ಲ

<u>ಮೂರ್ತಿ:</u>ಮತ್ತೆ ನೀನ್ಯಾಕ್ ಇಲ್ಲಿ ಬಂದಿದ್ಯಾ? ವೆಂಕೋಬ್ ರಾವ್ ನಗೆಕೂಟ ಹೆಂಗ್ ನಡಿತಿದೆ ಅಂತ ಚೆಕ್ ಮಾಡೊಕೆ ಬಂದಿದ್ಯಾ…?

Shiva: ವೆಂಕೋಬ್ ರಾವ್ ನಗೆಕೂಟ ನಾ?

Murthy: ಅವನು ಶುರು ಮಾಡಿದ್ದು ಅಂತ ನಿನಗೆಲ್ಲಿ ಗೊತ್ತಿರುತ್ತೆ ….. ಸರಿ ಎನು ವಿಷಯಾ..?

Cut to the club’s sad laughter.

Cut back to Shiva and Murthy.

__ಮೂರ್ತಿ:__ಓಹೊ! ಕಾಣೆಯಾಗಿರೊ ಲಿಸ್ಟ್‌ಲ್ಲಿ ನಮ್ ವೆಂಕೊಬು ಸೇರಕೊಂಡ. ಇನ್ನೇನಾಗುತ್ತಯ್ಯಾ? ನೋಡ್ಕೊಳಕ್ಕಾಗ್ದೆ ವೃದ್ಧಾಶ್ರಮಕ್ಕೆ ಸೇರ್ಸಿದ್ಯಲ್ಲಾ. ಅಷ್ಟು ಕಷ್ಟಪಟ್ಟಿ, ಸಾಲಾ-ಸೋಲಾ ಮಾಡಿ ಒಂದು ಮನೆ ಕಟ್ಟಿದ, ಅಲ್ಲಿದ್ದಿದ್ರೆ ಇರೋಷ್ಟು ದಿನ ನೆಮ್ಮದಿಯಾಗಿ ಇರೋನು.

__ಶಿವ:__ ನೋಡಿ ಅಂಕಲ್, ನಿಮ್ ಬೋಧನೆ ಕೇಳಕ್ಕೆ ನಾನಿಲ್ಲಿ ಬಂದಿಲ್ಲ. ನಮ್ತಂದೆ ನಿಮ್ಮನ್ನ ಕಾಂಟ್ಯಾಕ್ಟ್ ಮಾಡಿದ್ರು ಅಂತ ಕೇಳಕ್ಬಂದೆ ಅಷ್ಟೆ. ಅವ್ರು ಬಗ್ಗೆ ಏನಾದ್ರು ಇಂನ್‌ಫರ್ಮೇಷನ್ ಇದ್ರೆ ಹೇಳಿ, ಇಲ್ದೆ ಹೋದ್ರೆ ನಾನ್ ಹೊರಡ್ತೀನಿ.

Shiva gets up to leave, Murthy also gets up.

__ಮೂರ್ತಿ:__ ಈ ದುರಾಹಂಕಾರಕ್ಕೇನು ಕಮ್ಮಿ ಇಲ್ಲ ನಿಮ್ ಜನರೇಷನ್‌ಗೆ. ಏನಯ್ಯ ಗೊತ್ತು ನಿಮ್ತಂದೆ ಬಗ್ಗೆ ನಿನಿಗೆ? ಚಿಕ್ಕ ವಯಸ್ಸಲ್ಲೇ ದೇವರ ಪಾದ ಸೇರಬೇಕಾಗಿತ್ತು, ಅವಾಗಾ ನಮ್ ವೆಂಕೊಬು ಲೀಟರ್ ಗಟ್ಲೆ ನಿಂಗೆ ರಕ್ತ ಕೊಟ್ಟು ಪ್ರಾಣಾ ಉಳಿಸ್ದಾ ಕಣಯ್ಯಾ. ಹುಡುಕು ಹೋಗಿ ಹೀಗಾದ್ರು ನಿಮ್ಮಪ್ಪನ್ ಬಗ್ಗೆ ಸ್ವಲ್ಪಾ ಗೊತ್ತಾಗುತ್ತೆ.

The club people start laughing in the background and Krishna Murthy walks away. Cut on people laughing.

# <u>39. INT.DAY.OLD AGE HOME</u>
# <u>Putting up posters</u>

Ext.Day

Shiva at old age home notices posters with Rao smiling, while waiting for Sahana.

(Sahana enters)

**<u>ಸಹನ:</u>** ಎಷ್ಟು ಹುಡುಕಿದ್ರು ನಿಮ್ತುಂದೆದು ಒಂದೂ ಸೀರಿಯಸ ಫೋಟೊ ಸಿಗ್ಲಿಲ್ಲ. ಯಾವಾಗ ನೋಡಿದ್ರು ಖುಷ್‌ಖುಷಿಯಾಗಿ ಸ್ಮೈಲ್ ಮಾಡ್ಕೊಂಡೇ ಇರತಾರೆ

He picks up a poster, sees it.

**<u>ಶಿವ:</u>**ಹಹ್! ಅದೋಂದ್ ಕರೆಕ್ಟಾಗಿ ಮಾಡ್ತಾ ಇದ್ರು. ಅ... ಕ್ಯಾಶ್ ರಿವಾರ್ಡ್ ಒಂದು ಹಾಕ್ಬಿಡೋಣಾ. ದುಡ್ಡಿದ್ರೆ, ಅದಿಕ್ಕೊಂದು ಇಂಪಾರ್ಟೆನ್ಸ್ ಬರುತ್ತೆ

Cut to Xerox shop, **Cash reward being added on the poster (comp screen).**

Poster coming out of copier.

Xeroxes are handed over by the shop keeper to Shiva and Sahana.

Sequence of Posters being put up in different parts of the city by Sahana, Sahana’s staff and a bunch of other people.

# 40. EXT.DAY.ROAD
# Shiva leaves search midway

Ext.Day

Multiple shots of Shiva and Sahana sticking posters in various locations and also asking people at bus stops, auto stands, tea shops, talking to traffic cops. Shiva keeps getting work calls in between

Shiva (on Phone): ಲಾಸ್ಟ್ ವೀಕ್ ಕಳ್ಸಿದಿನಲ್ಲಾ, infographic ನಾ include ಮಾಡಿ.. ಸರಿ ಸರಿ.. ಜಸ್ವಿಂದರ್ ಗೆ on the way ಇದೀನೀ ಅಂತಾ ಹೇಳಿ.

with each work call he answers Sahana gets more irritated with him,

shots where she's moved forward, he's behind, texting, mailing etc., she comes back and looks at him as if to say "Can we move ahead?".

She's struggling to staple a poster on a tree and extends the bundle of poster for Shiva to hold, but he's walking up and down on call, further irritating Sahana.

Shiva is persistently looking at his watch throughout to suggest that he is late for work.

His cab arrives and he tells Sahana that he will meet her later.

# <u>40A.EXT.DAY.ROAD</u>
# <u>Sahana's outburst towards Shiva, Shiva leaves</u>

Ext.Day

Shiva: ನನಿಗೆ ಸ್ವಲ್ಪ ಕೆಲಸಾ ಇದೆ... ನಾನು ಆಮೇಲೆ ಸಿಕ್ತಿನಿ...

**<u>ಸಹನ:</u>** ಏನು ಮಾಡ್ತಾ ಇದೀಯ? ನಿನಿಗ್ ಸಿಚುಯೇಶನ್ ಸಿರಿಯಸ್‌ನೆಸ್ ಅರ್ಥ ಆಗ್ತಾ ಇಲ್ವಾ? ಯಾವುದೋ ಸಣ್ಣಪುಟ್ಟ ವಸ್ತು ಅಲ್ಲ! ಕಾಣೆ ಆಗಿರೋದು ನಿಮ್ತಂದೆ! ನೀನು ಎಷ್ಟೇ ಬಿಜ಼ಿ ಇರಬಹುದು, ನಿನಿಗ್ ಎಷ್ಟೇ ಕೆಲಸ ಇದ್ರು, ಬಟ್ ಇವಾಗ್ ಅದು ಯಾವುದೂ ಇದಿಕ್ಕಿಂತ ಇಂಪಾರ್ಟೆಂಟ್ ಇರಕ್ಕೆ ಸಾಧ್ಯ ಇಲ್ಲ.

Shiva takes a couple of steps more.

**<u>ಸಹನ:</u>** ನಿನಿಗೆ ನಿನ್ತಂದೆ ಮೇಲೆ ಏನ್ಕೋಪ ಇದಿಯೊ, ನಿಮ್ಮಿಬ್ರು ಮಧ್ಯದಲ್ಲಿ ಏನಾಗಿದೆ, ನನಿಗೊತ್ತಿಲ್ಲ. ಚಿಕ್ಕ ವಯಸ್ಸಲ್ಲಿ ಹೋಡ್ದಿರಹುದು ಬೈದಿರಬಹುದು, ಅಥವಾ ಮಗನ್ತರಾನೇ ನೋಡಿಲ್ದೇ ಇರಹುದು. ನಿನಿಗೆ ಅವರ್ಮೇಲ್ ಪ್ರೀತಿ ಇಲ್ದೇ ಹೋದ್ರು, ಅವರನ ಹುಡ್ಕೋದು ನಿನ್ responsibility, ಇದನ್ನ ನಾನು ಹೇಳ್ಬೇಕಾಗಿಲ್ಲ , ನಿನಿಗ್ಗಿಟ್ಟಿದ್ದು.

**<u>ಶಿವ:</u>** ಸಹನ... ನಾನ್ ಆಮೇಲ್ ಸಿಕ್ತಿನಿ.

Sahana furious... He gets into the cab and leaves.

# 41. INT.DAY.SHIVA'S OFFICE

# SHIVA AT WORK DOING PRESENTATION

Int.day

Shiva is making a presentation in a dark room, in one slide of the presenation there is a father and son clipart, he see it and sorta freezes, Jaswinder looks a little worried. Shiva regains composure and starts again. Cut to the end of the presenation and the client is super happy. Cut to some papers being signed. Jaswinder hands patting Shiva's back. Client hand shaking with Jaswinder and Shiva.

Cut to Empty room, Shiva is looking at the same slide. Jasiwnder enters.

Jaswinder: Superb job…suna hai winter mai Newyork bohut thand rehtha hai…Sweater keeter karedlena

Shiva smiles.

# 42. INT.DAY.SHIVA's HOUSE

# Flashback 2

Shiva is packing scene opens with rao cutting a sweater tag

**ರಾವ್:** ನಿನಿಗಿರೋ ಎಲ್ಲಾ friends-ಉ, ಬೇರೆ-ಬೇರೆ ದೇಶಕ್ಕೆ ಓದಕ್ ಹೋಗ್ತಾ ಇದಾರೆ. ನಿನಿಗೂ ಅವರ ತರಾನೇ ಹೋಗಕ್ ಎಷ್ಟು ಆಸೆ ಇದೆ ಅಂತ ನನಿಗ್ ಗೊತ್ತು. ನಿನಿಗೇ ಗೊತ್ತು ಅಮ್ಮನ್ treatment-ಗೆ ಎಷ್ಟು ಖರ್ಚಾಯ್ತು.... ನಮ್ಮ ವಿಶ್ವನಾಥ ಅವರ ಮಗಾ engineering-ಮುಗ್ಸಿ ಇಲ್ಲೇ ಓದಿದ್ನಂತೆ, ಈಗ ಒಳ್ಳೆ ಕೆಲ್ಸದಲ್ಲಿದ್ದಾನೆ.

**ಶಿವ:** ನಾನು ವಿಶ್ವನಾಥ ಅವರ ಮಗ ಅಲ್ಲ. ನೀವು ಬೇರೆಯವರ ಮಕ್ಕಳ್ example ತಗೋಳೊದಾದ್ರೆ ನಿಮ್ಮ ಜೊತೆ ಕೆಲಸ ಮಾಡಿದವರೆಲ್ಲಾ ಎಲ್ಲೆಲ್ಲೊ ಇದ್ದಾರೆ. ನೀವು ಕೆಲಸ ಶುರು ಮಾಡ್ದಾಗಾ ಎಲ್ಲಿದ್ರೊ, ಇವಾಗ್ಲು ಅಲ್ಲೇ ಇದೀರಾ.. ನನ್ನ USA ಗೆ ಕಳ್ಸೊದ್ ಬಿಡಿ ದುಡ್ಡು ಮಾಡ್ಕೊಳಕ್ ಗೊತ್ತಿದ್ರೆ, ಅಮ್ಮನ್ನ ಉಳಿಸ್ಕೊ ಬಹುದಾಗಿತ್ತೇನೊ! ನನಿಗ್ train-ಗೆ late-ಆಯ್ತು, ನಾನ್ ಬರ್ತೀನಿ.

-Cut to train passing, kumar wakes up

# 43. INT.DAY.KUMAR's HOUSE

# Kumar wakes up in his house

Int. Day

**Scene description: Kumar wakes up, looks to the right, sees a photo of his wife and kid without him, looks to the left, and sees a full family photo with him as well. He feels his face, slowly gets up and peeps into the mirror, puts his feet down. But doesn't notice that his kid is sleeping under the bed. Kumar runs out of the room excited to be alive.**

**As he runs out, shot opens with 2 mobile phone in aquarium tank.**

ಕುಮಾರ್: ಲಕ್ಷ್ಮೀ! ಲಕ್ಷ್ಮೀ!

**She comes out of the kitchen feeling emotional he goes and hugs her …**

ಕುಮಾರ್: ನಿನ್ ಮುದ್ದು ಮುಖಾನಾ ಇನ್ನೊಂದ್ ಸಲ ನೋಡ್ತೀನೋ ಇಲ್ವೋ ಅಂತ ಅನ್ಕೊಂಡೇ ಇರ್ಲಿಲ್ಲ ಕಣೆ…

ಲಕ್ಷ್ಮೀ : ರೀ…

ಕುಮಾರ್: ಇಲ್ಲ ಕಣೆ ಲಕ್ಷ್ಮೀ! ನಾನು ಅನುಭವಿಸಿದ್ದು, ನನ್ನ ಶತ್ರುಗೂ ಬೇಡಾ. ಅಲ್ಲಿಂದ ಹೆಂಗ್ ತಪ್ಪಿಸ್ಕೊಂಡ್ ಬಂದ್ನೋ ನನಿಗೇ ಗೊತ್ತಿಲ್ಲಾ.. ದೇವರು ದೊಡ್ಡವನು ಕಣೆ, ಏನು ಆಗ್ದೆ ಮನೇಗ್ ತಲಿಪ್ಸಿ ನಿನ್ನನ್ನ ಪುಟ್ಟನ್ನ…

ಲಕ್ಷ್ಮೀ :ರೀ!

ಕುಮಾರ್: ಏನೇ?

ಮಂಜ :ಬನ್ನಿ ಕುತ್ಕೊಳಿ ಸರ್, ತಪ್ಪಿಸ್ಕೊಂಡ್ ಹೆಂಗ್ ಬಂದ್ರಿ ಅಂತ ನಾವು ಹೇಳ್ತೀವಿ… ಅಲ್ವಾ ಅಣ್ಣ?

ರಾವ್ : ಉಪ್ಪಿಟ್ಟು ತುಂಬಾ ಚೆನ್ನಾಗಿದೆ. ನಿಮ್ ಮಗಳೇನಾ ಮಾಡಿದ್ದು? ಹುಡ್ಗಿ ನನಿಗ್ ತುಂಬಾ ಇಷ್ಟಾ ಆದ್ಲು. ನನ್ನ ಮಗ ಕೆಲಸದಲ್ಲಿ ತುಂಬಾ ಬಿಸಿ ಇರ್ತಾನೆ. ಬರೋ ಭಾನುವಾರ ಕರ್ಕೊಂಡ್ ಬರ್ತೀನಿ, ಅವನಿಗ್ ಓಕೆ ಆದ್ರೆ, ಒಳ್ಳೆ ಡೇಟ್ ಫಿಕ್ಸ್ ಮಾಡಿ ಸಂಬಂಧ ಮಾಡ್ಕೊಂಡು ಬಿಡೋಣ.

**Everyone is stunned for a few seconds, Manja's spoon is stuck in his mouth and he slides away from Rao…**

ಕುಮಾರ್: ಲಕ್ಷ್ಮೀ ನಾನು ಇನ್ನು ಕನಸ್ ಕಾಣ್ತಾ ಇದೀನಿ… ಹೆಂಗಾದ್ರು ಮಾಡಿ ಎಬ್ಸೆ..

ರಂಗ : ಕನಸು ನೀನಲ್ಲ ಆ ಮುದುಕ ಕಾಣ್ತಾ ಇರೋದು. ಬಾ ಕೂತ್ಕೋ.. ಸ್ವಲ್ಪ ನಿರು ಕೊಡಿ.

**Manja slowly pulls the spoon out of his mouth**

**ಮಂಜ : ಅಣ್ಣ.... ಆಕ್ಸಿಡೆಂಟ್‌ಅಲ್ಲಿ ತಾತನ್ ತಲೆಯಿಂದ ಎರಡು – ಮೂರು ಸ್ಕ್ರೂ ಬಿದ್ಹೋಗಿದೆ ಅನ್ಸುತ್ತೆ.**
**ಲಕ್ಷ್ಮೀ : ರೀ ಬನ್ರಿ ಇಲ್ಲಿ**
**ಕುಮಾರ್: ಸರ್.**

**Looking at Ranga for permission**

**ರಂಗ : ಜಾಸ್ತಿ ಬುದ್ದಿವಂತಿಕೆ ಉಪಯೋಗ್ಸಕ್ ಹೋಗಬೇಡ ಪರ್ಮನೆಂಟ್ ಆಗಿ ಕನಸು ಕಾಣ್ಬೇಕಾಗುತ್ತೆ.**

Ranga signals him to go.

# <u>43A.INT.DAY.KUMAR's HOUSE</u>
# <u>Kumar talking to Laxmi in the kitchen</u>

Int. Day

Laxmi is doing something in the kitchen.

**ಕುಮಾರ್:** ಏನೇ ಆಗ್ತಾ ಇದೆ? ಒಂದೂ ಅರ್ಥ ಆಗ್ತಾ ಇಲ್ಲ. ಇವರು ಇಲ್ಲಿಗ್ ಹೇಗೆ ಬಂದು ಸೇರ್ಕೊಂಡ್ರು? ಅಷ್ಟು ಗೊತ್ತಾಗಲ್ವ ನಿನಿಗೆ? ಒಳಗಡೆ ಬಿಡ್ಬಾರದಾಗಿತ್ತು.

Laxmi slams tumbler on the kitchen slab.

**ಲಕ್ಷ್ಮಿ :** ಹೌದು ರೀ! ನಾನು ಸೇರಿಸ್ಕೊಂಡೆ, ನೀವೇನ್ಮಾಡ್ತಾ ಇದ್ರಿ ಅವರ ಜೊತೆ? ನನ್ನ ಟೆನ್ ಶನ್ ನನಗ್ ಗೊತ್ತು, ಎಷ್ಟೊತ್ತಾದ್ರು ಬಂದಿಲ್ಲ ಬಂದಿಲ್ಲ ಅಂತ ನಾನು ಎಷ್ಟು ಒದ್ದಾಡ್ತಿದ್ದೆ, ಅದು ನಿಮಿಗೇನು ಅರ್ಥ ಆಗುತ್ತೆ? ಆಮೇಲೆ ಫ಼ೋನ್ ಬಂತು ಆಕ್ಸಿಡೆಂಟ್ ಆಗಿದೆ, ಕರ್ಕೊಂಡ್ ಬರ್ತಾ ಇದ್ದೀವಿ, ಅಡ್ರೆಸ್ ಹೇಳಿ ಅಂತ. ಜೀವಾನೇ ನಿಂತು ಹೋಯ್ತು ನಂದು. ನಾನೇನ್ಮಾಡ್ಲಿ ಹೇಳಿ? ಹೆಗಲ್ಮೆಲ್ಹಾಕ್ಕೊಂಡ್ಬಂದ್ರು. ಮನೆ ಒಳಗೆ ಬಂದ್ಮೇಲ್ಗೊತ್ತಾಯ್ತು ಅವರ ನಿಜವಾದ್ ರೂಪ. ಕಂತ್ರಿ ನಾಯಿಗಳು!

# 43B.INT.DAY.KUMAR’S HOUSE
# Kitchen cut away, Venkob gives tickets to Manja

Int. Day

**Scene description: Venkob Rao at the wash basin washing his hand, he turns to Ranga and Manja**

ರಾವ್ : ಎನೇ ಹೇಳಿ, ತಿಂಡಿ ಚೆನ್ನಾಗಿತ್ತು, ಹನ್ನೆರಡು ರೂಪಾಯ್ಗೆ ಒಳ್ಳೆ ದೋಸೆ. ಬಿಲ್ ಎಲ್ಲಿ ಕಟ್ಬೇಕು?

**Manja quickly reacts by putting towel on his shoulder**

ಮಂಜ : ಇಲ್ಲೇ ಕೊಡಿ!

**Rao pulls out bus tickets as cash and hands it to Manja…**
**Manja seems confused…**

ರಾವ್ : ಚಿಲ್ರೆ ಇಟ್ಕೋ ಮರಿ.

**And he walks off…**

ಮಂಜ : ಈ ತಾತಾನ ಅರ್ಥ ಮಾಡ್ಕೊಳ್ಳೋಷ್ಟ್ರಲ್ಲಿ ನಾವು ಟಿಕೇಟ್ ತಗೊಂಡ್ ಬಿಡ್ತೀವಣ್ಣ….

ರಂಗ : ಈ ಮುದುಕ ಭಲೇ ನಾಟಕ ಆಡ್ತಾನೆ, ಒಂದು ಕಣ್ಣಿಟ್ಟಿರು.

# <u>43C.INT.DAY.KUMAR'S HOUSE</u>
# <u>Ranga walks into the kitchen</u>

Int. Day

Cut back to the kitchen. Ranga enters.

**<u>ಕುಮಾರ್:</u>** ಆಯ್ತು ಅಳೊದ್ ನಿಲ್ಸು. ಪುಟ್ಟ ಎಲ್ಲಿ?

**<u>ರಂಗ:</u>** ಒಂದ್ ಗ್ಲಾಸ್ ನೀರು ಕೊಡಕ್ಕೆ ಎಷ್ಟೋತ್ತು?

**<u>ಕುಮಾರ್:</u>** ನೀರು ಬಿಸಿ ಮಾಡ್ಕೊಡೊಣಾ ಅಂತ ಅನ್ಕೊಳ್ತಾ ಇದ್ವಿ.

**<u>ರಂಗ:</u>** ಏಯ್...! ಕುಡಿಯೋದಿಕ್ಕೇಳಿದ್ದು ಸ್ನಾನಕ್ಕಲ್ಲ. ಸಾಕು ನಿಮ್ ಗುಸು-ಗುಸು, ಬನ್ನಿ ಆಚೆ ಕಡೆ.

# 44. INT.DAY.KUMAR'S HOUSE
# Hari entry scene as Kumar pleades

Int. Day

**Scene Description: Ranga is pacing up and down, Lakshmi nudges Kumar to talk…**

ಕುಮಾರ್: **Mch!** ತಾಳೆ

**Kumar looks at Manja who is constantly looking at Rao who is smiling, this freaks him out, Manja turns to Kumar who is also smiling at him. Kumar signals manja asking for permission to speak to Ranga.**

ಮಂಜ : ಅಣ್ಣ... ಏನೊ ಕೇಳ್ತಾ ಇದಾರೆ ನೋಡಿ.

ಕುಮಾರ್: ಏನಿಲ್ಲ ಸರ್ ನನ್ನ ಹೆಸರು ಕುಮಾರ್ ಅಂತ, ನಿನ್ನೆ ರಾತ್ರಿ ಇಂಟ್ರಡಕ್ಷನ್ ಮಾಡಕ್ ಟೈಮ್ ಸಿಗ್ಲಿಲ್ಲ. ನನ್ನ ಹೆಂಡ್ತಿ ಲಕ್ಷ್ಮೀ ಅಂತ.

ಮಂಜ : ಉಪ್ಪಿಟ್ ತುಂಬಾ ಚೆನ್ನಾಗಿ ಮಾಡ್ತರೆ.

ರಾವ್ : ಉಪ್ಪಿಟ್ಟಾ? ನನಿಗೊಂದ್ ಸ್ವಲ್ಪ ಕೊಡ್ತೀರಾ?

ಮಂಜ : ಅಣ್ಣ! ನೋಡಿ ಅಣ್ಣ, ಎರಡು ಪ್ಲೇಟು ಬಾರ್ಸಿ, ತಿಂದಿಲ್ದವ್ರಂಗೆ ಆಡ್ತಿದಾನೆ ನೋಡಿ.

ಕುಮಾರ್ : ಏ ಇನ್ನೊಂದು ಪ್ಲೇಟ್ ಹಾಕ್ಕೊಂಡು ಬಾರೆ ಅವರಿಗೆ, ನಿನ್ನ ಉಪ್ಪಿಟ್ಟು ತುಂಬಾ ಹಚ್ಕೊಂಡಿದಾರೆ.

**Lakshmi walks off into the Kitchen**

ಕುಮಾರ್ : ಸರ್ ನಾನು ಏನ್ ಹೇಳ್ತಾ ಇದ್ದೆ ಅಂದ್ರೆ, ನಾನಿಲ್ಲೆ ಪಕ್ಕದ್ ಊರಲ್ಲಿ ಗೆಸ್ಟ್‌ಹೌಸ್ ಅಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡ್ತಾ ಇದೀನಿ. ನಾನೊಬ್ಬ ಅಮಾಯಕ ಸರ್, ಸಣ್ಣ ಮಿಡಲ್ ಕ್ಲಾಸ್ ಫ್ಯಾಮಿಲಿ, ಲೋವರ್ ಮಿಡಲ್ ಕ್ಲಾಸ್. ನಮ್ಮನ್ನ ಬಿಟ್ಬಿಡಿ ಸರ್, ದೇವರ್ ಮೇಲ್ ಆಣೆ ಸರ್ ಆ ಬೆಳಗಿರಿ ರಂಗನಾಥ ಸ್ವಾಮಿ ಮೇಲಾಣೆ, ನಿಮ್ ಬಗ್ಗೆ ಯಾರ ಹತ್ತಿರಾನೂ ಹೇಳಲ್ಲ.

**Lakshmi serves uppit to Rao and sits next to Kumar**

ಕುಮಾರ್: ಒಂದು ವೇಳೆ ಪೋಲಿಸ್ನೇ ಬಂದ್ ಕೇಳಿದ್ರೆ, ನನಿಗೇನು ಗೊತ್ತಿಲ್ಲ ಅಂತ ಹೇಳ್ತೀನಿ ಸರ್.

**Ranga stares angrily at Kumar, Kumar places his hand on Lakshmi's head**

ಕುಮಾರ್: ಇವಳ ಮೇಲಾಣೆ

**Rao bites into a chilli**

ರಾವ್ : ಖಾರಾ! ಸ್ವಲ್ಪ ನೀರು ಕೊಡ್ತೀರಾ?

**Ranga and Manja stop and look at Rao.**

ಮಂಜ : ನೀರಾ?! ಲೇ ತಾತಾ! ನೀನು ನೀರು ಕೇಳೀನೇ ನಾವಿಲ್ಲಿ ಕಚ್ಕೊಂಡಿರೋದು. ಇಷ್ಟೋತ್ತಿಗೆ ಆ ಹೆಣಾನಾ ಹೂತಾಕಿ ವಾಪಸ್ ಬೆಂಗಳೂರಲ್ಲಿ ನಮ್ ಗೌಡ್ರು ಮಿಲಿಟರಿ ಹೋಟೆಲಲ್ಲಿ ಮುದ್ದೆ ಮಟನ್ ಚಾಪ್ಸ್ ತಿಂತಾ ಇದ್ವಿ.

**Ranga whacks Manja on his head**

ರಂಗ : ಮುಚ್ಕೊಂಡು ಕುತ್ಕೊಳೋ.

ಲಕ್ಷ್ಮೀ : ಏನ್ರಿ ಹೆಣ ಅಂತ ಮಾತಾಡ್ತಾ ಇದಾರೆ?

ಕುಮಾರ್: ಆ ತರಾ ಎಲ್ಲಾ ಏನು ಇಲ್ಲ ಕಣೆ. ನಾನೇನು ನೋಡಿಲ್ಲ ಸುಮನೆ ಕುತ್ಕೋ ನೀನು.

**He turns to Ranga**

ಸರ್ ಪ್ಲೀಸ್ ನಮ್ಮನ್ನ ಬಿಟ್ಬಿಡಿ ಸರ್ ಬೇಕಾದರೆ ನನ್ ಕಾರ್ ತಗೊಂಡು ಹೋಗಿ ನಿನ್ನೇನೆ ಫುಲ್ ಟ್ಯಾಂಕ್ ಮಾಡಿಸ್ದೆ. ಅಥವಾ ನೀವೆಲ್ಲಿ ಹೇಳ್ತಿರೋ ಅಲ್ಲಿ ಡ್ರಾಪ್ ಮಾಡ್ತೀನಿ ಸರ್ ನಿಮ್ಮನ್ನ.

ಲಕ್ಷ್ಮೀ : ನೋಡ್ರಿ ನೀವೆಲ್ಲಿ ಹೋದ್ರೂ ನಾನು ಬರ್ತೀನಿ. ಸತ್ರೆ ಒಟ್ಟಿಗೆ ಸಾಯೋಣಾ.

ಕುಮಾರ್: ಸಾಯೋದರ್ ಬಗ್ಗೆ ಯಾರೇ ಮಾತಾಡಿದ್ದು? ಸ್ವಲ್ಪ ಸುಮನೆ ಕುತ್ಕೊಳ್ತಿಯಾ? ಅವರು ತುಂಬಾ ಒಳ್ಳೆಯವರು. ಏನೊ ಕೆಟ್ಟ ಗಳಿಗೆ ಒಂದು ಚಿಕ್ಕ ಸಮಸ್ಯೇಲಿ ಸಿಕ್ಕಾಕ್ಕೊಂಡಿದಾರೆ ಅಷ್ಟೆ, ನಾವು ಒಂದು ಚೂರು ಹೆಲ್ಪ್ ಮಾಡ್ಬೇಕು.

**Ranga raises his hand to stop him, everyone's quiet, Ranga sits in front of Kumar, and Kumar leans back in fear**

ಮಂಜ : ಅಣ್ಣ, ಈ ತಾತಾ ನೋಡಿ ಅಣ್ಣ, ಹೋಗ್ಬಿಟ್ಟ ಅಂತ ಕಾಣುತ್ತೆ.

**Manja checks on Rao to find he is sleeping**

ಮಂಜ : ಹೆ ಹೆ, ಚೆನ್ನಾಗಿ ಬಿದ್ಕೊಂಡಿದಾನೆ/ಮಲ್ಗಿದಾನೆ.

ರಂಗ : ಸುಮ್ನೆ ಕುತ್ಕೋಳ್ತಿಯೋ ಇಲ್ದೆ ಹೋದ್ರೆ.....

**Turns to Kumar**

ರಂಗ : ಎಲ್ಲಾ ಫೋಟೋನಲ್ಲೂ ಒಂದು ಹುಡುಗ ಇದಾನಲ್ಲ ಎಲ್ಲಿ ಕಾಣಿಸ್ತಾ ಇಲ್ಲ ಅವನು.

ಕುಮಾರ್: ಹೇ..... ನಮ್ ಮಗ ಸರ್ ಹರಿ ಅಂತ, ಹಾಲಿಡೇಸ್ ಅಲ್ವಾ? ಹದಿನೈದು ದಿನ ಇಂದ ನಮ್ ಸೋದರ್ ಅತ್ತೆ ಮನೇಲಿ ಇದಾನೆ.

ರಂಗ : ಹದಿನೈದು ದಿನಾನ? ಬಿದ್ದಿರೋ ಆಟ ಸಾಮಾನ್ ಜೊತೆ ನೀವು ಆಟ ಆಡ್ತಾ ಇದ್ರಾ?

ಕುಮಾರ್: ಸರ್... ಬಿಳಿಗಿರಿ ರಂಗನಾಥ ಸ್ವಾಮಿ ಮೇಲಾಣೆ, ಮಗು ವಿಷ್ಯದಲ್ ಮಾತ್ರ ಹಂಗೆಲ್ಲಾ ಸುಳ್ಳು ಹೇಳಲ್ಲಾ ಸರ್.

**Hari enters the room!!**

ಹರಿ : ಅಮ್ಮ...... ಎಷ್ಟು ಹೊತ್ತಂತ ಮಂಚದ ಕೆಳಗೆ ಅವುಸ್ಕೊಂಡಿರ್ಲಮ್ಮ ? ಮೊದ್ಲೆ ಜ್ವರ, ನೆಲ ಬೇರೆ ಅಷ್ಟು ತಂಡಿ ಇದೆ.

**Laxmi heads to Hari. Awkwardness between Ranga and Kumar. Ranga stares at Kumar, as he's caught red handed. Ranga leans forward and calls Kumar closer with a hand signal. Kumar hesitantly goes close.**

ಮಂಜ : ಏನು ಆಕ್ಟಿಂಗ್ ಮಾಡ್ತಾನಣ್ಣ?

ರಂಗ : **(Points his index finger and says softly)**ನೋಡು, ಎಲ್ಲರನ್ನು ಕೊಚ್ಚಾಕ್ಬಿಡ್ತೀನಿ. ಈ ಆಟಗಳೆಲ್ಲಾ ನನ್ನ ಹತ್ತಿರ ಬೇಡಾ. ಇದೇ ಕೊನೆ ಸಲ.

# <u>45. EXT.NIGHT.BANGALORE UNIVERSITY</u>
# <u>Sahana solo search</u>

Ext. Day
Sahana is putting up the last few posters from the stack, finishes and makes a couple of calls. Sahana calls Mani from old age home who tells her that posters have been put up in all areas that they know off but haven’t received any leads. Bangalore University in the background.

**<u>ಸಹನ:</u>** ಏನಾದ್ರು ಇಂಫ಼ರ್ಮೇಷನ್ಸ ಸಿಕ್ತಾ?

**<u>Mani:</u>** ಜಯನಗರ್, ಜೆ.ಪಿನಗರ್, ಮಲ್ಲೆಶ್ವರಂ, ರಾಜಾಜಿ ನಗರ ಎಲ್ಲಾ ಕಡೆ ಪೊಸ್ಟರ್ ಹಾಕಾಯ್ತು. ವೆಂಕೊಬ್ ಅವರನ್ನ ಯಾರು ನೋಡಿಲ್ವಂತೆ... ಬಸ್ ಸ್ಟಾಂಡ್, ಆಟೋ ಸ್ಟಾಂಡ್ , ಪಬ್ಲಿಕ್ ಸ್ಪೇಸ್ ನಲ್ಲಿ ಪೊಸ್ಟರ್ಸ್ ಅಂಟ್ಸಿದ್ದೀವಿ. ಅವರ ಮಗಾ ಎಲ್ಲಿ ಹುಡುಕ್ತಾ ಇದಾನೆ ಅಂತಾ ಚೆಕ್ ಮಾಡಮ್ಮಾ
**<u>ಸಹನ:</u>** ಸರಿ ಒ.ಕೆ...

Cuts the call.

# 46. INT.NIGHT.SHIVA’S OFFICE

## Shiva putting up info in FB Group

Int. Day

Shiva at work putting up Missing person in FB group, he notices blood type and looks up his father’s blood type. He is seen immediately leaving, we reveal that he is looking at a scanned version of some document his dad’s blood type.

# 47. INT/EXT.NIGHT.MURTHY'S HOUSE

# Shiva @ Krishna Murthy House

Int/Day

Shiva comes knocking on Krishna Murthy's door.

**ಮೂರ್ತಿ (from window):**ಹಿಂದೆ ಬಾಗ್ಲಿಂದ ಬಾರಯ್ಯ, ಮುಂದೆ ಯಮ ಕಾಯ್ತಾ ಇರತಾನೆ.

Shiva enters from back door, Murthy has made drinking arrangements, Shiva is angry.

**ಮೂರ್ತಿ:**ಗುಂಡ್ ಹಾಕ್ತಿಯೇನಯ್ಯಾ?

**ಶಿವ:**ತಲೆ ಕೆಟ್ಟಿದೀಯಾ ನಿಮಗೆ?

**ಮೂರ್ತಿ:**ಕೂತ್ಕೊಳಯ್ಯ ಅಮಿತಾಬ್ ಬಚ್ಚನ್. ಬಯ್ಯುವಂತೆ ಆರಾಮಾಗಿ. ತಗೋ ಒಂದು ಗ್ಲಾಸು ಗುಂಡ್‌ಹಾಕು.

**ಶಿವ:**ಮ್ಚ್!!

**ಮೂರ್ತಿ:**ಒಹೋ ಥೆಟು ನಿಮ್ಮಪ್ಪನ್ ತರಾನೇ, ಶುರು ಮಾಡಲ್ಲ, ಮಾಡಿದ್ರೆ ಮುಗ್ಸಲ್ಲ.

**ಶಿವ:**ಯಾಕ್ ಸುಳ್ಳು ಹೇಳಿದ್ರಿ ನನಿಗೆ?

**ಮೂರ್ತಿ:** ಪಾಪಾ ವೆಂಕೊಬ್, ಕಿತ್ತೊಗಿರೊ ಟೇಪ್ ರಿಕಾರ್ಡರ ತರ ಅವನ್ ತಲೆ ರಿವೈಂಡು ಫಾರ್ವರ್ಡು ಮಧ್ಯ ಸಿಗಾಕೊಂಡಿದೆ. ಕಷ್ಟ ಇದೆ.

**ಶಿವ:** ರೀ! ಬ್ಲಡ್ ಡೊನೆಟ್ ಮಾಡಿದ್ರು ,ಜೀವಾ ಉಳಿಸಿದ್ರು ಅಂತಾ ಯಾಕ್ರಿ ಸುಳ್ಳು ಹೇಳಿದ್ರಿ ನನಿಗೆ? ತಮಾಷೆ ಮಾಡೊ ವಿಷ್ಯಾನಾ ಇದು? ನಿಮ್ಮಿಂದ ಎಷ್ಟು ತಲೆ ಕೆಡಸ್ಕೋಂಡಿದಿನಿ ಗೊತ್ತಾ?

**ಮೂರ್ತಿ:** ಅಯ್ಯೊಪಾಪ! ಅನಾಸಿನ್ ತಗೊಂಬೇಕಿತ್ತು.

Shiva stands, points his hand and holds back abuses and turns to leave.

**ಮೂರ್ತಿ:** ರಕ್ತ ದಾನ ಮಾಡಿ ಜೀವಾ ಉಳಿಸಿದ್ರೆನೆ ತಂದೆನಾ..?

Shiva stops in his stride.

**ಮೂರ್ತಿ:** ನಿನ್ನ ಚಿಕ್ಕ ವಯಸ್ಸಲ್ಲಿ ಉಚ್ಚೆ-ಕಕ್ಕ ಮಾಡ್ಕೊಂಡ್ ಓಡಾಡ್ಬೇಕಾದ್ರೆ ಹಿಂದೆ ಹೇಲ್ಬಾಚ್ಕೊಂಡು ಓಡಾಡ್ತಾ ಇದ್ನಲ್ಲ, ಅವಾಗ ತಂದೆ ಆಗಿರಲಿಲ್ವ? ನೂರೆಂಟು ಸಲಿ "ಅದೇನು",

"ಇದೇನು" ಅಂತ ಕೇಳ್ಬೇಕಾದ್ರೆ ಉತ್ತರ ಕೊಟ್ಕೊಂಡು ಇದ್ನಲ್ಲ ಅವಾಗ್ತುಂದೆ ಆಗಿರಲಿಲ್ವ? ಸಣ್ಣ ಮಕ್ಕಳು ಜೊತೆ ಯಾವಾಗಾದ್ರು ಆಟಾಡಿದ್ಯ? ಪೆದ್ದ್‌ಮುಂಡೆವು ಹಿಂಗ್ ಬಾಲ್ ಹಾಕೊದಂತೆ, ಹೊಡ್ದಾದ್ಮೇಲ್ "ಏ!" ಅನ್ನೊದಂತೆ. ಲೈಫ಼್ಲ್ಲಿರೊ ಎಲ್ಲಾ ಟೆನ್‌ಷನ್ನು ಮರೆತು ಮನೇಗ್ಬಂದು ನಿನ್ನ ಜೊತೆ ನಕ್ಕೊಂಡು ಆಟಾಡ್ತಾ ಇದ್ನಲ್ಲ ಅವನ ತಪ್ಪು. ಏನು ಬೇಡಯ್ಯಾ... ಯಾವಾನಿಗ್ಬೇಕು ಅಂತ ಗೇಟ್ ಓಪನ್ಮಾಡಿಟ್ಟಿದ್ರೆ ಯಾವುದೋ ಗಾಡಿ ಕೆಳಗೆ ಸಿಕ್  ಹಾಕೊಂಡಿರ್ತಿದ್ದೆ. ಸಣ್ಣ ವಿಷ್ಯಾ ಎಲ್ಲಿ ಜ್ಞಾಪಕ ಇರುತ್ತೆ. ದೊಡ್ಡವನಾಗಿಬಿಟ್ಟಿದ್ಯಲ್ಲಾ? ಹೋಗ್ಲಿ ಬಾ ಗುಂಡು ಹಾಕು.

Shiva walks out.

# 48. INT/EXT.DAY/NIGHT.KUMAR'S HOUSE

## Montage song at Kumar's house.

Ext. Int. Day/Night

Kumar and family in one corner of the house with Ranga Manja in another with Venkob in the center.

Handing out Shirts to Venkob and Ranga, Manja's shirt doest fit, so he is given Hari's shirt.

Venkob talking gibberish at entrance, Manja peeping and finding nobody there.

Manja looking at aquarium

Manja going to the kitchen over and over again.

Venkob and the kid bonding a bit.

Ranga looking at the train going by

Kumar comforting his wife who is worried about Hari being unwell.

Sahana's mom talking to her but she is completely lost.

All of them watching TV (news of murder)

Sleeping arrangements.

Leave letter scene treatment of Ranga being an imposing figure and the others being small in comparision to him.

Shiva opening mail from earlier and reading a letter.

Shiva promo projection.

Sahana on FB doing the same.

Vekob Rao cutting cocunuts

Manja carving Reshma's name on the sofa handle.

# 49. INT/EXT.DAY.SHIVA'S HOUSE

## Shiva talking to neighbor

Just as shiva about to enter the house neighbor calls out to shiva, she has a bowl in her hand,

ಸುಮ: ಏನಾದ್ರು ಗೊತ್ತಾಯ್ತಾ?

ಶಿವ: ಇಲ್ಲ.

(She gives him the bowl)

ಸುಮ: ಪುಳಿಯೊಗರೆ ಇದೆ, ಇನ್ನೇನಾದ್ರು ಬೇಕಿದ್ರೆ ಹೇಳಪ್ಪ.

ಶಿವ: ಬೇಡಾ aunty, ಪರ್ವಾಗಿಲ್ಲ.

ಸುಮ: ಅಯ್ಯೋ ಪರ್ವಾಗಿಲ್ಲ ತಗೊಳಪ್ಪ.

(pause)

ನಿಮ್ ತಂದೆ ಅಡಿಗೇನೆ ಜ್ಞಾಪಕ ಆಗೋದು.

ಶಿವ: ಯಾಕೆ?

ಸುಮ: ನಿಮ್ ತಾಯಿ ಹೊದ್ಮೇಲೆ ನಿಮ್ ತಂದೆಗೆ ಅಡಿಗೆ ಮಾಡಕ್ಕೆ ನಾನೆ ಹೇಳ್ಕೊಟ್ಟದ್ದು.

-cut to

# 49A.INT.DAY.SHIVA’S HOUSE

**FB3: Rao learning to cook halwa from his neighbour**

Rao calling out his neighbor from kitchen.

**ರಾವ್:** ಸುಮ ಅವರೆ…ನಮ್ಮನೇಗೊಂದ್ ಸ್ವಲ್ಪ ಬರಕ್ಕಾಗುತ್ತಾ?

She’s a little taken aback.

**ರಾವ್:** ಅದು…ಪುಷ್ಪ ಇಲ್ದೆ ನಾನೊಬ್ನೆ…

She’s more shocked.

Cut to interior of Shiva house

**ರಾವ್:** ಶಿವನ್ಗೆ ಅವರಮ್ಮ ಮಾಡ್ತಾ ಇದ್ದಿದ್ carrot ಹಲ್ವಾ ತುಂಬಾ ಇಷ್ಟ, ತುಂಬಾ ದಿನಾ ಆಯ್ತಲ್ವ, ಮಾಡೋಣಾಂತ ಹೊರಟೆ. ಹಲ್ವಾ ಬಿಟ್ಟು ಇನ್ನೆಲ್ಲಾ ಆಗಿದೆ! ಐದು carrot ತುರದಿಟ್ಟಿದ್ದೆ, ಇಷ್ಟೇ ಇಷ್ಟು ಹಲ್ವಾ ಆಗಿದೆ! ಅದೂ ಎಲ್ಲಾ ಅಂಟ್ಕೊಂಬಿಟ್ಟಿದೆ.

ಸುಮ: ಅಯ್ಯೋ ರಾಮಾ! ವೆಂಕೊಬರವರೆ… ಇಷ್ಟು carrot ಹಾಕಿದ್ರೆ, ಇಷ್ಟು ಹಲ್ವ ಆಗುತ್ತೆ (gestures). ಆ ಪಾತ್ರೆ ತೊಗೊಳಿ, ನಾನ್ತೋರಿಸ್ಕೊಡ್ತೀನಿ ಹೆಂಗೆ ಮಾಡೊದಂತ.

# 50. INT.NIGHT.KUMAR'S HOUSE

## Rao watching cartoon with Hari and sees DD SOS

Rao and Hari are in front of the TV. Rao is looking elsewhere, lost in his own world. Hari is watching BEN 10 holding the remote in his hand. Hari notices that Rao is lost.

ಹರಿ: ಹೊಡಿ ಅವನಿಗೆ! ಕೊಡು! ಕೊಡು! ನೊಡಿದ್ಯಾ BEN10 poweru? (Turns to Rao) ಅಯ್ಯೋ ಎಲ್ಲಾ ಮಿಸ್ ಮಾಡ್ಕೊಂತಾ ಇದ್ಯ. (Hari puts his hand on his forehead) ಅಲ್ಲಿ ಗೋಡೇನ್ ಏನ್ ನೋಡ್ತಾ ಇದ್ಯಾ? BEN10 ನೋಡು.

Cut to BEN10. On screen Grandpa Max is talking to Ben.

ಹರಿ: ಅಲ್ಲಿ ನೊಡು, ಅವನೇ Ben. ಅವನು ಮಾತಾಡ್ತಾ ಇದ್ದಾನ್ ನೋಡು, ಆ ತಾತಾ, ಅವನು Grandpa Max.

Hari pauses for a second.

ಹರಿ: ನಂಗೊಂದ್ idea ಬಂತು, ನಾನ್ ಇವತ್ತಿಂದ ನಿನ್ನನ್ನ Max ತಾತಾ ಅಂತ ಕರಿತೀನಿ. ನಾನ್ Ben, ನೀನು Max. OK ನ?

Rao simply nods with a smile.

ಹರಿ: Max ಅಂತ ಕರೆದಾಗ್ಲೆಲ್ಲ ನೀನು ತಿರಿಗ್ಬೇಕು.

Laxmi enters.

ಲಕ್ಷ್ಮಿ: ಜ್ವರ ಇನ್ನು ಬಿಟ್ಟಿಲ್ಲಾ, ರೆಸ್ಟ್ ತಗೊಳೊದ್ ಬಿಟ್ಟು ಬಂದು TV ಮುಂದೆ ವಕ್ಕರ್ಸ್ಕೊಂಡಿದ್ಯ. ನಡಿ ಒಳಗಡೆ!

She tries snatching the remote from him, but he doesn't let go. Channels on the TV keep changing. She snatches him and drags him to the room.

ಹರಿ: Max ತಾತಾ ನೋಡಿ! Max ತಾತಾ! Save me! Save me!

They go inside. Slow tracking of camera as missing person's report starts coming on DD as Rao is sitting motionless, watching his own missing announcement.

# <u>51. INT.NIGHT.SHIVA'S HOUSE</u>

# <u>Shiva's emotional Outburst</u>

Sahana tried knocking on the door, it opens slightly, and she slowly walks in, calling out his name. hall is empty, she goes little further in, Shiva is sitting on the floor, legs stretched, glass in hand, bottle next to him. He pours himself a drink.

<u>**ಸಹನ:**</u> ಶಿವ...

<u>**ಶಿವ:**</u> ಓ ನೀವಾ? ಬನ್ನಿ ಡಾಕ್ಟ್ರೆ ಬನ್ನಿ, ನಾನೇನೋ ನಮ್ತಂದೆ ಬಂದ್ರೇನೊ ಅಂತ ಅನ್ಕೊಂಡೆ

<u>**ಸಹನ:**</u> ಶಿವ...I'm very sorry....ಸುಮ್ನೆ ನಿಮ್ಮೇಲ್ ಕೂಗಾಡಿ ಇನ್‌ಸೆನ್ಸಿಟಿವಾಗಿ ಏನೇನೊ ಹೇಳ್ಬಿಟ್ಟೆ. ನಿಮ್ಮ life-ಲ್ಲಿ ಎನ್ ನಡಿತಾ ಇದೆ, ಎಲ್ಲಿಗ್ ಹೋದ್ರಿ ಅಂತ ತಿಳ್ಕೋಳ್ದೆ ಸುಮ್ನೆ

<u>**ಶಿವ:**</u> ನಿಮ್ ಕೆಲಸದಲ್ಲಿ ತಂದೆ ತಾಯಿ ಬೇಡಾ ಅಂತ ಬಿಟ್ಟೊಗೋವ್ರನ್ನ ತುಂಬ ನೋಡಿರ್ತೀರ. ನಮ್ಮಂತವ್ರ ಬಗ್ಗೆ ನಿಮಿಗ್ ಎಷ್ಟು ಕೆಟ್ಟ್ ಇಂಪ್ರೆಷನ್ ಇರಬೆಕಲ್ಲ?

<u>**ಸಹನ:**</u> ಶಿವ ಪ್ಲೀಸ್... ಆ ತರ ಏನಿಲ್ಲ. ಎಲ್ಲರಿಗೂ ಅವರದೇ ಆದಂತಹ ಕಾರಣಗಳಿರುತ್ತೆ.

<u>**ಶಿವ:**</u> ನಾನು ಕನ್ನಡಿ ಮುಂದೆ ನಿನ್‌ತ್ಕೊಂಡು ಎಷ್ಟೊಂದು ಕಾರಣಗಳನ್ನ ಕೊಟ್ಕೊಂಡಿದ್ದೀನಿ. ಅಮ್ಮಂಗ್ ಕ್ಯಾನ್ಸರ್ ಬಂದಿದ್ದು, ಈ ಗೋಡೆಗಳ ಹಿಂದೆ ಅವಳು ಒದ್ದಾಡಿದ್ ನೆನಪುಗಳು, ನಮ್ತಂದೆ ಕಣ್ಣಲ್ಲಿ ಅದರ್ ನೋವು, ಅವರ ಅಲಯ್ಖ್ಯೆಮರ್ಸ್. ನನ್ನ ಲೈಫು? ಎಷ್ಟೇ ಕಾರಣಗಳು ಕೊಟ್ಕೊಂಡ್ರು ನೆಮ್ಮದಿ ಅಂತು ಸಿಗಲಿಲ್ಲ. ಅಣ್ಣಂಗೆ alzheimer's ಇದೆ ಅಂತ ಗೊತ್ತಾದಾಗ ಅದ್ರು ಬಗ್ಗೆ ತುಂಬ ಒದಿದೆ. ಪ್ರೀತಿ ತೋರಿಸಕ್ಕು ಟೈಮ್ ಬೇಕು ಅಂತ ಆವಾಗ್ಲೆ ರಿಯಲೈಜ್ ಆಗಿದ್ದು.

ನಿಜ ಏನ್ಗೊತ್ತ?

Shiva takes another sip and gives a long pause.

<u>**ಶಿವ:**</u> ನಮ್ಮಪ್ಪನಿಗೆ ಸುಳ್ಳು ಹೇಳಿದೆ, ಇಡೀ ಪ್ರಪಂಚಕ್ಕೆ ಸುಳ್ಳು ಹೇಳಿದೆ, ಅಷ್ಟಲ್ಲದೆ ನನಿಗ್ ನಾನೇ ಸುಳ್ಳು ಹೇಳ್ಕೊಂಡೆ.

<u>**ಸಹನ:**</u> ಏನ್ ಹೇಳ್ತಾ ಇದ್ದೀಯ ಶಿವ?

Shiva: ಎನು ಇಲ್ಲ... ಬಿಡಿ...late-ಅಗ್ತಾ ಇದೆ.. ನೀವು.. ನಾನು...ನಿಮ್ಗೆ ನಾಳೆ ಸಿಕ್ತಿನಿ, ನಿವು ಹೋಗಿ.. I'm Ok steady-ಆಗಿದಿನಿ

(Sahana leaves reluctantly)

# Shiva Sahana Search

Shiva and Sahana are in the car, music can be heard in the car…after a long pause, Shiva speaks.

**ಶಿವ:** ಸಹನ...ಅದು... ಕುಡ್ದಿದ್ದೆ, ಏನೇನೋ ಮಾತಾಡ್ದೆ. I made you very uncomfortable. ಏನೇನೋ ಮಾತಾಡ್ದೆ, I'm really sorry. ನಾನು ಯೂಶ್ಯಲಿ ಆ ತರ ಅಲ್ಲ.

**ಸಹನ:** ಅಯ್ಯೋ ರಿಲ್ಯಾಕ್ಸ್ ಶಿವ. It's OK. ನನಿಗ್ ಅರ್ಥಾಗತ್ತೆ. ನಿಮಗಿರೊ ಯೊಚ್ನೆಗಳ್ ಮಧ್ಯ ಇದನ್ನ ಸೇರಿಸ್ಕೊಂಬೇಡ. ಇವತ್ತು ನಮ್ ಫೋಕಸ್‌ನ ವೆಂಕೊಬ್ ಸರ್ ಹುಡುಕಕ್ಕೆ ಹಾಕೊಣ...ಏನೊ ಇಂಫರ್ಮೇಶನ್  ಸಿಗತ್ತೆ ಅಂತ ಒಂದು ಫೀಲಿಂಗ್.

After a pause.

**ಶಿವ:** ನಾನಿರೊ ಸಿಚುಯೇಶನ್ನಲ್ಲಿ, ನಿಮ್ ಹೆಲ್ಪ್ ಇಲ್ದೆ ಹೊಗಿದ್ರೆ ನಾನ್ ಏನ್ಮಾಡ್ತಾ ಇದ್ನೊ ನಿಜ್ವಾಗ್ಲು ಗೊತ್ತಿಲ್ಲ. Thanks so much...

**ಸಹನ:** ದಿನ ಪೂರ್ತಿ ಇಷ್ಟೊಂದ್ ಫಾರ್ಮಲಾಗಿದ್ರೆ ಇಲ್ಲೆ ಮುಂದೆ ಬಾರ್ ನಲ್ಲಿ ನಿಲ್ಲಿಸ್ತೀನಿ, ಒಂದೆರಡು ಪೆಗ್ ಹಾಕೊಳಿ ಆಮೇಲ್ ಶುರು ಮಾಡೊಣ. OKನ?

Shiva smiles.

**ಸಹನ:** ಶಿವ, ನೀವು ಕೆಲವೇ ದಿನದಿಂದ ಗೊತ್ತಿದ್ರು ನಿಮ್ತಂದೆ ನಿಮ್ಮ್ ಬಗ್ಗೆ ನಿಮ್ಮ್ ತಾಯಿ ಬಗ್ಗೆನೇ ಮಾತಾಡ್ತಾ ಇದ್ರು...ನಿಮ್ಮನ್ನ ತುಂಬಾ ವರ್ಷಗಳಿಂದ ಗೊತ್ತು ಅನ್ಸುತ್ತೆ. ವೆಂಕೊಬ್ ಸರ್ ಹುಡುಕೋದ್ರಲ್ಲಿ ನಂದು ಸ್ವಾರ್ಥ ಇದೆ, ನನಿಗೆ ಅವರು ಬರಿ ಪೇಷ್ಯಂಟಲ್ಲ, ವೆಂಕೊಬ್ ಸರ್ ನಮ್ಮ ಸಂಸ್ಥೆ ಜೊಇನ್ ಆದಾಗ, ಯಾವದೊ ಪರ್ಸನಲ್ ವಿಷ್ಯದಲ್ಲಿ....i was completely lost… ಎಲ್ಲದರ ಬಗ್ಗೆ ನಂಬಿಕೆ ಕಳಕೊಂಡಿದ್ದೆ ... ಅವರ ಜೊತೆ time spend ಮಾಡಿದ್ದು gave me hope..... ಆ ಮೇಲೆ, ನೀವು ನನ್ನ ಕರಿಯರನ ಎಲ್ಲಿ ಡೆಸ್ಟ್ರಾಯ್ ಮಾಡ್ತೀರೋ ಅಂತ ಹೆದ್ರಿಕೆ ತುಂಬಾ ಇದೆ.

Shiva smiles.

Search song begins.

# 53. EXT.DAY/NIGHT.ROAD.

## Search song

Shiva and Sahana are driving in the car, they are talking to a lot of people, asking and enquiring, at one point Sahana gets a call.

**ಸಹನ:** Hello?

**Caller1:** Madam Poster ಹಾಕಿದ್ರಲ್ಲ.

**ಸಹನ:** ಹಾ ಹಾ! ಹೇಳಿ ಸಾರ್ ಹೇಳಿ.

**Caller1:** ಅವರನ್ನ ನೋಡ್ದೆ madam

**ಸಹನ:** ಎಲ್ಲಿ ನೋಡಿದ್ರಿ? ಎಷ್ಟು ಘಂಟೆಗೆ?

She taps Shiva's shoulder and gestures about the call. Shiva pulls his phone out to take down details.

**Caller1:** ನಾನ್ ಕೆಲಸದಿಂದ ವಾಪಸ್ ಬರೋವಾಗಾ, road ಮಧ್ಯ ನಿಂತ್ಕೊಂಡು ಒಬ್ರೆ ಏನೋ ಮಾತಾಡ್ಕೊಂತಾ ಇದ್ರು.

**ಸಹನ:** ಯಾವ್ area ಇದು? Exact time ಗೊತ್ತ ಸಾರ್?

**Caller1:** ಗುರುವಾರ Netkallappa circle ಹತ್ರ

**ಸಹನ:** ಅವರು ಯಾವ ಕಡೆ ಹೋದ್ರು ಅಂತ ಗೊತ್ತ?

**Caller1:** ಯಾರೋ side ಗೆ ಕರ್ಕೊಂಡು ಹೊಗ್ಬಿಟ್ರು, signal ಬಿದ್ತು, ನಾನ್ಹೊರಟ್ಬಿಟ್ಟೆ.

Cut to Netkallappa circle, shots of Shiva and Sahana searching and asking around the place. While searching Shiva gets a call.

**Caller2:** Hello ಸಾರ್, ನಾವಿಲ್ಲಿ ಜಯನಗರಿಂದ ಫ಼ೊನ್ಮಾಡ್ತಾ ಇರೋದು, ಇಲ್ಲೊಂದ್ missing poster ಅಂಟ್ಸಿದೀರಲ್ಲ. ಅವರನ್ನ ಇಲ್ಲೆ ಗಣೇಶನ್ ದೇವಸ್ಥಾನ್ ಹತ್ರ ನೋಡ್ದೆ.

**ಶಿವ:** ಯಾವಾಗಾ?

**Caller2:** Just ಇವಾಗಾ, ಒಂದು half an hour-45 minutes ಇರಬಹುದು ಸಾರ್...

Shiva who's little excited runs to Sahana who's also on call looking excited. He eagerly waits for her to finish.

**<u>ಸಹನ (on call):</u>** ಹೌದಾ? OK sir! Thank you! Thank you! ನಾವು immediate ಆಗಿ ಬರ್ತೀವಿ (she cuts the call).

**<u>ಶಿವ:</u>** ಏನಾಯ್ತು?

**<u>ಸಹನ (excited):</u>** Just half an hour ಹಿಂದೆ ಮತ್ತಿಕೆರೆ ಹತ್ರ ಕಾಣಿಸ್ಕೊಂಡ್ರಂತೆ, ಬಾ ಹೋಗೋಣ!

Shiva's excitement disappears.

**<u>ಸಹನ:</u>** ನಾನ್ ಹೇಳಿಲ್ವಾ? ಇವತ್ತೇನೊ information ಸಿಗುತ್ತೆ ಅಂತ? ಮತ್ತಿಕೆರೆಗ್ shortest route ಗೊತ್ತಾ?

Shiva is just standing there.

**<u>ಸಹನ:</u>** ಏನಾಯ್ತು?

**<u>ಶಿವ:</u>** ನನಿಗ್ just phone ಬಂತು, ಜಯನಗರಲ್ಲಿ half an hour hindhe ಕಾಣುಸ್ಕೊಂಡ್ರು ಅಂತ. ಒಂದೇ ವ್ಯಕ್ತಿ ಎರಡು ಜಾಗದಲ್ಲಂತು ಇರಕ್ಕಾಗಲ್ವಲ್ಲಾ.

**<u>ಸಹನ:</u>** Don't lose hope. ನೀನು ಜಯನಗರಕ್ ಹೋಗು, ನಾನು ಮತ್ತಿಕೆರೆಗ ಹೊಗ್ತೀನಿ.

Cut to mosaic sequence of multiple people calling. Frustration of Shiva, continuously answering calls. Shots of phone ringing from unknown numbers. POV shots of multiple people, shots of people talking on phone, shots of Shiva and Sahana talking on call to multiple people. Shiva Sahana frustration. Travel shots. Going back and forth on same roads. People showing directions, explaining, some saying they don't know.

Cut to Shiva getting a call when they are in the car.

**<u>ಶಿವ:</u>** Hello?

**<u>Caller3:</u>** Poster ಅಲ್ಲಿರೊ ವ್ಯಕ್ತಿ ಬಗ್ಗೆ information ಇದೆ.

**<u>ಶಿವ (unemotional):</u>** ಹಾ ಹೇಳಿ.

**<u>Caller3:</u>** Cash reward ಎಷ್ಟು?

ಶಿವ: First ಎಲ್ಲಿ ನೋಡಿದ್ರಿ ಅಂತ ಹೇಳಿ, cash ಬಗ್ಗೆ ಆಮೇಲ್ ಮಾತಾಡೋಣಾ.

Caller3: ನೀವು ಎಷ್ಟು ಕೊಡ್ತೀರ್ರಿ? ಅದನ್ನ ಹೇಳಿ.

ಶಿವ: ನಿಮಿಗೆಷ್ಟು ಬೇಕೋ ಅಷ್ಟು ಕೊಡ್ತೀನಿ, ನನಿಗ್ ಬೇಕಾಗಿರೋದು ನಮ್ಮ್ ತಂದೆ. ಮನೇಲ್ಲಿ ನಾನು, ನಮ್ ತಾಯಿ, ನನ್ನ ತಮ್ಮ, ಎಲ್ಲರೂ ಎರಡು ವಾರದಿಂದ ನಮ್ ತಂದೆಗ್ ಏನಾಗಿರಬಹುದೇನೊ ಅಂತ ಒದ್ದಾಡ್ತಾ ಇದೀವಿ. ದಯವಿಟ್ಟು information ಕೊಡಿ ಸಾರ್. ನಮ್ ಕೈಯಲ್ಲಾದಷ್ಟು ಕೊಡ್ತೀವಿ.

Caller3: ಹತ್ತು ದಿನ ಹಿಂದೆ, city market ಅಲ್ಲಿ, ಸಿಕ್ಕಿದ್ರು, ನಮ್ ಜೊತೇನೇ ಇದಾರೆ. ನಾನು ಫೋನ್ ಮಾಡಿ ದುಡ್ಡು ಎಲ್ಲಿ ತರೋದು ಅಂತ ಹೇಳ್ತೀನಿ, ಆಮೇಲ್ ಮುಂದೆ ಮಾತಾಡೋಣಾ.

ಶಿವ: ಏ ಲೋಫರ್! ಹತ್ತು ದಿನದಿಂದ ನನ್ ತಂದೆ ಕಾಣೇನೆ ಆಗಿರ್ಲಿಲ್ಲ ನಿನಿಗ್ಹೆಂಗೋ ಸಿಕ್ಕಿದ್ರು?! ಕನಸಲ್ಲಿ ನೋಡಿದ್ಯೇನೋ? (Caller hangs up, Shiva goes on) ಈ ತರಾ ವಿಷ್ಯದಲ್ಲಿ ದುಡ್ಡುಗೊಸ್ಕರಾ ಸುಳ್ಳು ಹೇಳಕ್ ನಾಚ್ಕೆ ಆಗಲ್ವಾ?! ಎಲ್ಲಿದ್ಯ ಹೇಳೊ! ದುಡ್ಡು ಬಂದು ನಿನ್ನ ಮುಖಕ್ ಎಸ್ದ ಹೊಗ್ತೀನಿ. Hello? Hello? (Shiva abuses him)

Sahana has pulled over to the side

ಸಹನ: ಶಿವ calm down... ದುಡ್ಡಿಗೋಸ್ಕರಾ ಫೋನ್ಮಾಡೋವ್ರು ಇದ್ದೆ ಇರತಾರೆ. But majority people just want to help. Poster ನೋಡಿ ಎಲ್ಲೋ ನೋಡಿದಾರೆ ಅನ್ಕೊಂಡ್ ಫೋನ್ಮಾಡೋದು human psychology. ಸಧ್ಯಕ್ಕೆ ನಮಿಗೇನ್ sure ಅನ್ಸುತ್ತೊ ಆ information follow ಮಾಡೋಣಾ. Hopefully ಸ್ವಲ್ಪ clarity ಸಿಗ್ಬಹುದು. OKನ?

# 54. INT.DAY.KUMAR'S HOUSE.

## Kumar asks to go to pharmacy Scene

Kumar is passing by the room door and Laxmi calls him.

ಲಕ್ಷ್ಮಿ: ಬನ್ರಿ ಇಲ್ಲಿ. ಪುಟ್ಟನ್ ಜ್ವರ ತುಂಬಾ ಜಾಸ್ತಿ ಆಗ್ತಿದೆ, ಮಾತ್ರೆ ಖಾಲಿ ಆಗಿದೆ, ಏನಾದ್ರು ಮಾಡ್ರಿ. ಅವನಿಗ್ ಏನಾದ್ರು ಹೆಚ್ಚು-ಕಮ್ಮಿ ಆದ್ರೆ ಎಲ್ಲಾರ್ ಕಾಫಿಲ್ಲು ವಿಷಾ ಹಾಕಿ ನಾನು ಸತ್ತೊಗ್ಬಿಡ್ತೀನಿ.

ಕುಮಾರ್: ಯಾಕೆ ಯಾವಾಗ್ನೋಡಿದ್ರೂನು ಸಾಯೋದರ್ ಬಗ್ಗೆನೆ ಮಾತಾಡ್ತಿಯಾ? ನಾನು ಹೋಗಿ ಮಾತಾಡ್ತೀನಿ ನೀನು ಸ್ವಲ್ಪ ಸುಮ್ನೆ ಇರು.

Kumar to Ranga.

ಕುಮಾರ್: ಸಾರ್...ಅದು...

ರಂಗ: ಏಯ್! ಹೋಗೋ ಒಳಗಡೆ.

Cut to Kumar in the room with Laxmi.

ಲಕ್ಷ್ಮಿ: ಬಿಟ್ರಾ?

ಕುಮಾರ್: ಮಾತಾಡಕ್ಕೆ ಬಿಡ್ತಾ ಇಲ್ಲಾ ಕಣೆ.

ಲಕ್ಷ್ಮಿ: ಅದೆಲ್ಲ ಗೊತ್ತಿಲ್ಲ... ಹೊಗ್ ಕೇಳಿ...

Kumar goes and just stands in front of Ranga. Ranga just looks at him, Kumar turns back and goes to the room.

Inside the room Kumar nods saying no.

ಲಕ್ಷ್ಮಿ: ಕಾರ್ ಡ್ರೈವ್ ಮಾಡ್ಬೇಕಾದ್ರೆಲ್ಲ ಹೋಗೋರು-ಬರೋರು ಮೇಲೆಲ್ಲ ಕೂಗಾಡ್ತೀರಾ? ಇವಾಗೇನ್ ನಿಮ್ ನಾಲ್ಗೆ ಒಣಗಿ ಹೊಯ್ತಾ?

ಕುಮಾರ್: ಮ್ಚ್! ನಾನ್ಮಾತಾಡ್ತೀನಿ ಒಂದು ನಿಮಿಷ.

Kumar goes out of the room, a slap is heard, and he comes back holding his cheek.

ಲಕ್ಷ್ಮಿ: ಉತ್ತರನ್ ಪೌರುಷ ಒಲೆ ಮುಂದೆ ಅಂದಗಾಯ್ತು ನಿಮ್ ಕಥೆ.

Laxmi storms out of the room, pulls Ranga by his hand to the room.

ಲಕ್ಷ್ಮಿ: ಹಣೆ ಮೆಲ್ ಕೈ ಇಟ್ನೋಡಿ, ಕೆಂಡ ತರ ಸುಡ್ತಾ ಇದೆ. ನೀವು ಬಂದಾಗಿಂದ ನಾನೇನು ಕೇಳಿಲ್ಲ, ನೀವು ಹೇಳ್ದಂಗೆಲ್ಲ ನಡ್ಕೊಂಡಿದ್ದೀವಿ. ನೀವಿಲ್ಲಿ ಹತ್ತು ದಿನನಾದ್ರು ಇರಿ, ನೂರ್ ದಿನನಾದ್ರು ಇರಿ, ಆದ್ರೆ ನನ್ನ ಮಗೂಗೆ ಏನಾದ್ರು ಆದ್ರೆ ನಾನು ಸುಮ್ನೆ ಇರಲ್ಲ. ನನ್ನ ಮಗೂಗೆ ಮಾತ್ರೆ ಬೇಕು. ನೀವೇ ಹೋಗ್ತೀರೋ ಇಲ್ಲ ನಾನು ತರಲೋ?

Ranga raises his hand to stop her, turns to Kumar.

ರಂಗ: ಒಂದು ಘಂಟೆ time ಕೊಡ್ತೀನಿ, ಅದೇನು ಮಾತ್ರೆ ಬೇಕೊ ತೊಗೊಂಡ್ಬಾ ಹೋಗಿ, ಬೇರೆ ಏನಾದ್ರು ಕಿತಾಪತಿ ಮಾಡಕ್ ಹೊದ್ರ್ಯೊ, ಹೆಂಗ್ಸು ಮಗು ಅಂತ ಏನೂ ನೋಡಲ್ಲ.

Cut to Kumar about to leave, Ranga is at the door to lock it, Laxmi is also present.

ಲಕ್ಷ್ಮಿ: ಹಂಗೆ ಸ್ವಲ್ಪ ಬ್ಯಾನ್‌ಡೇಜ್, ಡೆಟಾಲ್ ಎಲ್ಲಾ ತಗೋಂಡ್ಬನ್ನಿ, ಹಣೆ ಮೇಲಾಗಿರೋ ಗಾಯ ಇನಫ಼ೆಕ್‌ಷನ್ ಆಗುತ್ತೆ.

# 55. EXT.DAY.ROAD

## Kumar’s dilemma

Kumar has picked up medicines from pharmacy. He pauses in front of the police station and looks at the police station. Cut on his look.

# 56. INT/EXT.DAY.ROAD

# Shiva Sahana drive back to Bangalore

Shiva is driving, Sahana is in the passenger seat. They seem lost…. they make a couple of wrong turns

ಶಿವ: ನಿಮ್ಮನ್ನಾ ಒಂದ್ ವಿಷ್ಯ್ ಕೇಳೊಕೆ ಮರತೋಗಿತ್ತು….

Sahana: ಒಂದ್ ನಿಮಿಷ….ನೀವು ನಾವು ಅಂತ ಮಾತಾಡ್ತಾ ಇದೀವೀ… senior citizens ತರಾ ಫ಼ೀಲ್ ಆಗ್ತಾ ಇದೆ. ….

Shiva: ಸರಿ… ಅಣ್ಣಾ ಬರ್ತ್ ಡೇದು ಒಂದು ವಿಡಿಯೋ ಕಳ್ಸಿದ್ಯಲ್ಲಾ… ಅದು.. ಅಣ್ಣ ಅವರ wish ಹೇಳೋಷ್ಟ್ರಲ್ಲಿ video abruptagi end ಆಗೋಯ್ತು. ಏನ್ wish ಮಾಡಿದ್ರು ಅಂತ ಜ್ಞಾಪಕ ಇದ್ಯಾ ನಿಂಗೆ?

ಸಹನ: (smiles) ಅವರ condition deteriorate ಆಗೋಕಿಂತ್ಮುಂಚೆ, ದಿನಕ್ಕೆ ಏರಡು ಸತಿ ನಾದ್ರು ಅದೇ ವಿಷ್ ಮಾಡವ್ರು

ಸಹನ: Are you sure you want to know?

ಶಿವ: ಹೇಳೆ…

ಸಹನ: Oh my god…. ನಾವು senior citizens ತರಾನೇ ಮಾತಾಡೋಣಾ….

Shiva: ಪ್ಲೀಸ್ ಹೇಳು

Sahana: ಒಳ್ಳೆ ಹುಡ್ಗಿನ ನೋಡ್ಕೊಂಡು, ಒಂದು ಸಣ್ಣ ಸಂಸಾರಾ ಮಾಡ್ಕೊಂಡು ಖುಷಿಯಾಗಿ ಇರಬೇಕಂತ ಯಾವಾಗ್ಲು ಹೇಳೋವ್ರು.

ಶಿವ: ಅಯ್ಯೋ! "ವಯಸ್ಸಾಗ್ತಾ ಇದೆ, ಮದುವೆ ಆಗು-ಮದುವೆ ಆಗು" ಅಂತ ಹುಡ್ಗೀರ್ ಫೋಟೊ ಇಟ್ಕೊಂಡು ಒಂದ್ಕಾಲಲ್ಲಿ ನಿಂತಿದ್ರು. ಬಿಟ್ಟಿದ್ರೆ, ನಿದ್ದೇಲೇ ಮದುವೆ ಮಾಡಬಿಟ್ಟಿರೋರು… ನಿಮ್ಗ ಸಾಕಷ್ಟು ತಲೆ ತಿಂದಿರಬಹುದಲ್ಲ ಮನೇಲಿ? ನನ್ನ life ನ ಎಷ್ಟು complicate ಮಾಡ್ಕೊಂಡಿದೀನಂದ್ರೆ… ನನ್ನ ಜೀವನಾ ಇನ್ನೊಬ್ರ ಜೊತೆ ಹೆಂಗೆ ಹಂಚ್ಕೊಳೋದು ಅಂತ ಮರೆತು ಹೋಗಿದ್ದೀನಿ.

**ಸಹನ:** At least ಹಂಚ್ಕೋಬಾರದು ಅಂತ decide ಮಾಡ್ಲಿಲ್ವಲ್ಲ, that's good. ಮರ್ತಿರೋದನ್ನ ಜ್ಞಾಪಕ ಮಾಡೋವ್ರು ಸಿಕ್ಕಿದ್ರೆ ಸಾಕಲ್ವಾ?

**ಶಿವ:** ಒಂದು photo ನೋಡಿ ಹೆಂಗ್ಗೊತ್ತಾಗುತ್ತೆ?

Sahana smiles. Phone rings, she picks up to answer.

Shiva slows down…rolls down window and asks a passerby for directions to Bangalore. The passer by is Kumar.

# ---------------------INTERVAL--------------------

# 57. INT.DAY.KUMAR’S HOUSE

## SI Thimmappa visit Kumar’s house

Kumar is back in the house, Hari is given tablets, as Kumar is cutting a piece of bandage to dress Ranga’s wound, a knock is heard on the door, everyone goes quite, Ranga gestures Manja to check, he peeps through the window, SI Thimmappa is revealed.

**ಮಂಜ:**ಅಣ್ಣ, ಈವಯ್ಯ ಪೋಲೀಸ್‌ಗೆ ಹಾಕ್ಕೊಟ್ಬಿಟ್ಟವ್ನಣ್ಣಾ.

**ಕುಮಾರ್:**ಪೋಲೀಸಾ? ದೇವರಾಣೆಗು ನಂಗೊತ್ತಿಲ್ಲ ಸಾರ್!

Ranga grabs the scissors from Kumar’s hand, holds him against the wall and points it at him.

ರಂಗ:ಪೋಲೀಸ್ ಕರ್ಕೊಂಡ್ ಬರ್ತಿಯಾ?!

Laxmi enters as he’s almost about to stab Kumar.

**ಕುಮಾರ್:**ಸಾರ್ ನಾನ್ ನಿಜ್ವಾಗ್ಲು ಪೋಲೀಸ್‌ನ ಕರ್ಕೊಂಡ್ಬಂದಿಲ್ಲಾ ಸಾರ್! ದೇವರಾಣೆಗು ನಂಗೊತ್ತಿಲ್ಲ ಸಾರ್.

Laxmi becomes melodramatic.

ಲಕ್ಷ್ಮಿ:ಅಯ್ಯೋ-ಅಯ್ಯೋ! ಬೇಡಾ ಸಾರ್, ಬಿಟ್ಬಿಡಿ ಸಾರ್ ಅವರ್ದೇನು ತಪ್ಪಿಲ್ಲಾ ಸಾರ್!

ರಂಗ:ಮಗನ್ ಹೆಸರು ಹೇಳ್ಕೊಂಡ್ ಗಂಡ-ಹೆಂಡ್ತಿ ಇಬ್ರು ಆಟಗಳು ಆಡ್ತೀರಾ?

ಲಕ್ಷ್ಮಿ: ಸಾರ್ ನಂಬಿ ಸಾರ್, ನಿಜ್ವಾಗ್ಲು ಹೇಳ್ತಾ ಇದೀನಿ ಸಾರ್...

Cut to SI Thimmappa knocking outside.

**ಮಂಜ:**ಅಣ್ಣ...ಎಲ್ಲಾ ನಿಜ ಹೇಳ್ಬಿಡೋಣಾ ಅಣ್ಣ. ಥು! ಆ ತಾತಾ ಇಲ್ದಿದ್ರೆ ನಾವ್ ಈ ತರಾ ಸಿಕ್ಹಾಕ್ಕೋಳ್ತಾನೇ ಇರಲಿಲ್ಲ...

ರಂಗ:ಏ! ಆ ಮುದುಕ ಎಲ್ಲೋ?!

Manja looking around idiotically.

**ಕುಮಾರ್:**ಸಾರ್! ನಾನ್ಹೆಂಗೋ ಮಾತಾಡಿ ಮ್ಯಾನೇಜ್ಮಾಡ್ತೀನಿ ಬಿಡಿ ಸಾರ್.

Cut to Kumar opening the door.

ತಿಮ್ಮಪ್ಪ:ಎಷ್ಟು ಹೊತ್ರಿ ಬಾಗಿಲು ತೆಗ್ಯಕ್ಕೆ?

ಕುಮಾರ್:ಬಾತ್‌ರೂಮ್ ಅಲ್ಲಿದ್ದೆ ಸಾರ್. ಏನ್ವಿಷ್ಯ ಸಾರ್?

ತಿಮ್ಮಪ್ಪ:ಬನ್ನಿ ಒಳಗಡೆ ಮಾತಾಡೋಣಾ.

SI enters the house.

ಕುಮಾರ್:ಕೂತ್ಕೊಳಿ ಸಾರ್.

ತಿಮ್ಮಪ್ಪ:ಏನ್ ನಿಮ್ ಹೆಸರು?

ಕುಮಾರ್: ಕುಮಾರಂತ ಸಾರ್, ಈ ಮನೆ ಯಜಮಾನ  ನಾನೆ... ವಿಷ್ಯ ಏನು ಅಂತ ಹೇಳ್ಳೇ ಇಲ್ಲ?

ತಿಮಪ್ಪ:ನಿಮ್ ಹೆಂಡತಿ ಎಲ್ಲಿ?

ಕುಮಾರ್:ತರಕಾರಿ ತರಕ್  ಹೋಗಿದಾಳ್ ಸಾರ್.

ತಿಮಪ್ಪ:ರಾತ್ರಿ ನೀವು ಎಷ್ಟೊತ್ತಾದ್ರು ಮನೇಗ್  ಬಂದಿಲ್ಲ ಅಂತ ನಿಮ್ಹೆಂಡ್ತಿ ಅತ್ಕೊಂಡ್ station ಗೆ ಫೋನ್ಮಾಡಿದ್ರಲ್ರಿ?

ಕುಮಾರ್:ಅಯ್ಯೋ... ನಮ್ಹೆಂಡ್ತಿ ತುಂಬಾ ಡ್ರಾಮ ಸಾರ್/ ಈ ಹೆಂಗಸ್ರು ಗೊತ್ತಲ್ಲ ಸಾರ್, ಸಣ್ಣ ವಿಷ್ಯನ್ ಹೆಂಗ್ ದೊಡ್ಡದ್ಮಾಡ್ತಾರೆ ಅಂತ. ಆಫೀಸ್ ಇಂದ ಹೊರಡೊದ್ ಆವತ್ತು  ಸ್ವಲ್ಪಾ ಲೇಟ್ ಆಯ್ತು.

ತಿಮ್ಮಪ್ಪ:ಯಾವ್ ರೂಟಲ್ಲಿ ಬಂದಿದ್ಕೊನ್ನೆ?

ಕುಮಾರ್:ಅದೇ ಆ sidappa ಮೇನ್ ರೋಡ್ ಸಾರ್.

ತಿಮ್ಮಪ್ಪ:ಅಲ್ಲೊಂದ್  accident ಆಗಿತ್ತು, ನೀವೇನಾದ್ರು ನೋಡಿದ್ರಾ?

Cut to Ranga close up.

ಕುಮಾರ್:  ಆಕ್ಸಿಡೆಂಟಾ? ಏನೂ ಗೊತ್ತಿಲ್ಲ ಸಾರ್, ನಾನ್ಬಂದಿದ್ದು ತುಂಬಾ ಲೇಟ್ ಆಯ್ತು, ರೋಡ್ ಖಾಲಿ ಹೊಡಿತ್ತಿತ್ತು ಸಾರ್.

ತಿಮ್ಮಪ್ಪ:ಹ್ಮ್...ಸರಿ... ನಿಮ್ಹೆಂಡ್ತೀಗ್ಹೇಳಿ, ನೀವು ಚಕ್ಕಂದ ಆಡ್ಕೊಂಡ್ ಮನೇಗ್  ಲೇಟಾಗ್ಬಂದಾಗ ನಮಿಗ್  ಫೋನ್  ಮಾಡಿ ತಲೆ ತಿನ್ಬೇಡಿ ಅಂತ. ನಿಮ್  ಕೋಳಿ ಜಗಳಕ್ಕಲ್ಲ ನಾವಿರೋದು.

As SI gets up to leave, a couple of knocks are heard from the bathroom door, build up through tense shots of everyone. SI turns toward the knocking.

**ತಿಮ್ಮಪ್ಪ:**ಹೆಂಡ್ತಿ ಮನೇಲಿಲ್ಲಾ ಅಂದ್ರಿ? ಯಾರು ಬಾಗ್ಲು ತಟ್ತಾ ಇರೋದು?

**ಕುಮಾರ್:**ಬಾಗ್ಲಾ? ಏನು ಇಲ್ವಲ್ಲ ಸಾರ್...

Knocking heard again.

**ತಿಮ್ಮಪ್ಪ:**ಇವಾಗ್ಕೇಳಿಸ್ತೇನ್ರಿ? ಬನ್ರಿ ಈ ಕಡೆ...

**ಕುಮಾರ್:**ಅದೂ... ನನ್ನ ಮಗ ಇರ್ಬೇಕು...

SI opens the bathroom door, Rao is standing.

**ತಿಮ್ಮಪ್ಪ:** ಏನ್ರಿ? ನಿಮ್ಮಗ ಇಷ್ಟು ದೊಡ್ಡವನ್ ಆಗ್ಬಿಟ್ಟಿದ್ದಾನೆ? ಏನ್ನಡಿತಾ ಇದೆ ಇಲ್ಲಿ? ಬಾತ್‌ರೂಮ್ ಅಲ್ಲಿದ್ದೆ ಅಂದ್ರಿ, ಮಗ ಅಂದ್ರಿ...ಯಾರ್ರಿ ನೀವು?

Rao enters the hall.

**ರಾವ್:** ನಾನು...ಶಿವಾ... ಪುಷ್ಪಂಗೆ ತುಂಬಾ ಹುಷಾರಿಲ್ಲಾ.

**ತಿಮ್ಮಪ್ಪ:**ಏನ್ರಿ ಮಾತಾಡ್ತಾ ಇದಾರಿವರು..?

Rao is completely flustered

**ಕುಮಾರ್: Sir...** ನನಿಗೂ ಗೊತ್ತಿಲ್ಲ sir, ನಮ್ಮಾವನೋವ್ರು, ಸ್ವಲ್ಪ ಅರಳು ಮರಳು...ನನ್ನ ಮಗ ಇವರನ್ನ ಕೂಡ್ಹಾಕ್ಬಿಟ್ ಎಲ್ಲೊ ಓಡ್ಹೋಗ್ಬಿಟ್ಟಿದಾನೆ.

**ತಿಮ್ಮಪ್ಪ:**ಏನ್ರಿ ಫ಼್ಯಾಮಿಲಿ ನಿಮ್ದು? ಸರಿ...ನಾನು ಹೊರಡ್ತೀನಿ.

Police jeep leaves. Cut to interior.

ಮಂಜಾ: ನಾನು ನೋಡ್ತಾನೇ ಇದೀನಿ, ಈ ತಾತನ್ game-ಏ ಅರ್ಥ ಆಗ್ತಾ ಇಲ್ಲಾಣ್ಣ.

ರಂಗ: ಅವನೇನು game ಆಡ್ತಾ ಇಲ್ಲಾ. ಯಾವುದೋ ಹುಚ್ಚ, ಎಲ್ಲಿಂದಾನೋ ತಪ್ಪಿಸ್ಕೊಂಡ್ ಬಂದಿದಾನೆ. ಆಡ್ತಾ ಇದ್ರೆ, police -ಗೆ ಹಾಕ್ಕೊಡ್ಬಹುದಾಗಿತ್ತು.

# 58.INT.DAY.SHIVA'S HOUSE

## Shiva finds letter

Day.Int

Shiva at home opens the letters that he discarded at the beginning while entering. He finds a letter that's addressed to his father. He opens it. And reads it. Cut to

# 59. INT/EXT.DAY.GOVT SCHOOL

## Shiva @ School

At the end of the Scene, Shiva gets a call from Sahana who tells him that she got a call from some waiter who has seen the poster and that his father was mumbling about Razak.

## ತಂದೆಗೆ ಬರೆದಿರುವ ಪತ್ರವನ್ನು ಓದುವ ಶಿವು,

## ವಿಜಯ್ ಮತ್ತು ಶಿವು ನಡುವಿನ ಮಾತುಕತೆ

ವಿಜಯ್: ತಿಂಗಳಿಗೆ ಒಂದ್ ಸರಿ ಬರ್ತಾ ಇದ್ದೋರ್ದು ದಿಢೀರ್ ಅಂತಾ ಎನು ಸುದ್ದಿ ಇರಲಿಲ್ಲಾ. ಎನಾಯ್ತೋ ಅಂತ ಮನೆ ಕಡೆನೂ ಬಂದೆ, ಬೀಗ ಹಾಕಿತ್ತು. Travel ಮಾಡ್ತಾ ಇದಾರೇನೋ ಅನ್ಕೊಂಡು ಈ letter ಹಾಕಿದ್ದೆ.
ಈ ಥರಾ ಆಗಿದೆ ಅಂತಾ ಗೊತ್ತಿರಲಿಲ್ಲಾ. I am very sorry.

Cut to Corridor shot when Shiva exits

ವಿಜಯ್ : Actually ನಾನು ನಿಮಗೆ thanks ಹೇಳಬೇಕು.

ಶಿವು : ಯಾಕೆ?

ವಿಜಯ್ : ನಿಮ್ ಚಿಕ್ಕ ವಯಸ್ಸಿನ ಪುಸ್ತಕಗಳನ್ನೇ ಈ ಮಕ್ಕಳು ಓದ್ತಾ ಇರೋದು. ಇಲ್ಲಿಗ್ ಬಂದಾಗ್ಲೆಲ್ಲಾ ನಿಮ್ದೊಂದಿಷ್ಟು ಹಳೇ ಪುಸ್ತಕಗಳನ್ನ ತಗೊಂಡ್ ಬಂದು ಮಕ್ಕಳ್ನ ಗುಡ್ಡೆ ಹಾಕೊಂಡು ಕಥೆ ಹೇಳೊವ್ರು.ಮಕ್ಕಳು drawing ಮಾಡಬೇಕಾದ್ರೆ ಅವರ ಜೊತೆ ಗಂಟೆಗಟ್ಟಲೆ ಕುತ್ಕೋಳೊವ್ರು. ಅವರ ಜೊತೆ ಇದ್ದಾಗ ಮಕ್ಕಳು ಬಿಡಿಸಿರೋ ಚಿತ್ರ ನಮಗೆಲ್ಲಾ ಅದ್ಭುತವಾಗಿ ಕಾಣಿಸೋದು. ಅವ್ರು ಮಕ್ಕಳಿಗೆ ಯಾವಾಗ್ಲು ಹೇಳೊವ್ರು,

ಚಿತ್ರ ಬಿಡಿಸಬೇಕಾದ್ರೆ ನಿಮ್ಮ ಕಲ್ಪನೆ..

(Shivu smiles)

ಶಿವು : ಕಲ್ಪನೆ, ಹಾಳೆ ಅಷ್ಟೇ ಚಿಕ್ಕದಾಗಿ ಇರಬೇಕು ಅಂತೆನಿಲ್ಲಾ.

**<u>ಸಹನ (ಶಿವಗೆ):</u>** ಯಾರೋ ವೆಂಕೋಬ್ ಸರ್-ನ confirm ಆಗಿ meet ಮಾಡಿ... ಅವರು ರಜಾಕ್ ಅನ್ನೊವ್ರ ಬಗ್ಗೆ ಏನೋ ಮಾತಾಡ್ತಾ ಇದ್ರು ಅಂತ  ಮಾಡಿದ್ರು...... Friend's ಆಗ್ಲಿ colleagues' ಆಗ್ಲಿ ನಿಮ್ಮ ತಂದೆ ಸರ್ಕಲ್ಲಲ್ಲಿ ಯಾರಾದ್ರು ಮುಸ್ಲಿಮ್ ಇದ್ರಾ?

**<u>ಶಿವ:</u>**ಇಮ್ಮೀಡಿಯೆಟಾಗಿ ಹೆಸ್ರು ಏನು ಜ್ಞಾಪಕಕ್ಕೆ ಬರ್ತಾಯಿಲ್ಲ. ಅವರ ಆಫೀಸ್ನಲ್ಲಿ ಯಾರೊ ಒಬ್ರು ಮುಸ್ಲಿಮ್ ಇದ್ರು ಅನ್ಸುತ್ತೆ....

**<u>ಸಹನ:</u>**ಅವ್ರುದ್ದು ಹಳೇ ಫೋನ್‌ಬುಕ್ ಅಥವ ಡೈರಿ ಏನಾದ್ರು ಇದ್ರೆ ಅದ್ರಲ್ಲಿ ಸಿಗ್‌ಬಹುದ  ಅಲ್ವ contact details…..

# 60. INT.NIGHT.SHIVA'S HOUSE

# Phonebook Scene

Scene opens in Rao's room with the opening of a door.

**ಶಿವ:** ಡೈರಿ, ಫ಼ೋನ್‌ಬುಕ್ ಅಂತೇನಾದ್ರು ಇದ್ರೆ ಇಲ್ಲೆ ಇರಬೇಕು. ನಮ್ತಂದೆದು ಎಲ್ಲಾ ವಸ್ತುಗಳು ಇಲ್ಲೇ ಇರೋದು.

**ಸಹನ:**ನಾನು ಅಲ್ಲಿ ಹುಡುಕ್ತೀನಿ.

Cuts of both of them searching on either side, Shiva is focused on finding the phonebook. Sahana finds some stuff and wanders a bit. She finds Shiva's childhood paintings/sketches in a trunk. She goes through it, calls Shiva and shows it to him.

**ಸಹನ:**ಇದೆಲ್ಲ ನೀವು ಮಾಡಿದ್ದ? ತುಂಬಾ ಚೆನ್ನಾಗಿದೆ!

**ಶಿವ:**ಚಿಕ್ಕ ವಯ್ಯಸಲ್ಲಿ sketching was my favorite hobby. ಅವಾಗ ಚಿತ್ರ ಬಿಡಿಸೊದ್ರಲ್ಲಿ ಅದ್ಯೇನೊ ಖುಷಿ. ಒಂದು ಖಾಲಿ sheet, crayons ಕೊಟ್ರೆ ಸಾಕು, ಘಂಟೆ ಗಟ್ಲೆ ಕೂತ್ಕೊಂಡು ಏನೋ ಮಾಡ್ತಾ ಇದ್ದೆ. ಅಮ್ಮ ಅಣ್ಣಂಗೆ ಯಾವಾಗ್ಲೂ ಬಯ್ಯೋಳು, "ಅವನಿಗೆ crayons, paintbox ತಂದ್ಕೊಟ್ಟು ತಂದ್ಕೊಟ್ಟು ಹಾಳ್ಮಾಡ್ತಾ ಇದೀರಾ" ಅಂತ.

**ಸಹನ:**ಇವಾಗ sketching ಮಾಡಲ್ವ?

**ಶಿವ:**ಪೆನ್ನೆ ಉಪಯೋಗಿಸ್ತಾ ಇಲ್ಲ, ಇನ್ನು ಪೆನ್ಸಿಲ್, ಬ್ರಷ್ಶು ಉಪಯೋಗ್ಸಕ್ಕೆಲ್ಲಿ ಟೈಮಿದೆ?

**ಸಹನ:**ಬಟ್ ವೆರೀ ನೈಸ್, ಎಲ್ಲಾ ಕಲೆಕ್ಟ್ ಮಾಡಿ ಇಟ್ಕೊಂಡಿದೀರಾ.

**ಶಿವ:**ನಾನ್ಯಾವುದೂ ಕಲೆಕ್ಟ್ ಮಾಡಿಲ್ಲ. ಎಲ್ಲಾ ನಮ್ತಂದೆ ಕೆಲ್ಸ. ಅವರು ಕಾಣೆಯಾಗಿದ್ದಿನಾನು crayons ತೊಗೊಂಡು ಜೇಬಿಗ್ ಹಾಕೊಂಡಿದ್ರು.

He resumes the search, Sahana sees a box on top of an almairah and a few tied books on the box. She tries to pull the box, the books fall behind the almairah. They move the almairah to get the books and the hand print is revealed on the wall. She brings his attention to it Shiva looks at it and instantly has a smile on his face. The print is worn out a bit and except for that everything is painted.

ಶಿವ:ಇದನ್ನ ಮಾಡ್ದಾಗಾ ನಾನು 2nd std-ನಲ್ಲಿದ್ದೆ. ಚೆನ್ನಾಗಿ ಜ್ಞಾಪಕ ಇದೆ.school ಗೆ ಯಾವುದೋ ರಜಾ ಇತ್ತು ಅನ್ಸುತ್ತೆ. Paper ಮೇಲೆ ಚಿತ್ರ ಬಿಡ್ಸಿ ಬಿಡ್ಸಿ, ಗೋಡೆ ಮೇಲೆ ಬಿಡಿಸಿದ್ರೆ ಹೆಂಗ್ ಇರುತ್ತೆ ಅಂತ, ಅಮ್ಮ ಮಲಗಿರಬೇಕಾದ್ರೆ ಅವ್ರು ಅವ್ರುಸ್ ಇಟ್ಟಿದ್ದ್ Paint-ತಗೊಂಡು ಗೋಡೆ ಮೇಲೆ ಚೆನ್ನಾಗ್ ಗೀಚಿದೆ. ಅಮ್ಮ ಎದ್ದಾದ ಮೇಲೆ, ನಾ ಮಾಡಿದ್ದನ್ನ ನೋಡಿ ಸರಿಯಾಗಿ ಹೊಡದ್ರು, ಅಣ್ಣಾ ಬಂದಾದ ಮೇಲೆ ಇನ್ನು ಬೀಳುತ್ತೆ ಅಂತ ಚೆನ್ನಾಗ್ ಹೆದರಿಸಬಿಟ್ಟಿದ್ರು. ಆದ್ರೆ ಅಣ್ಣಾ ಬಂದು, ನಾ ಮಾಡಿದ್ದನ್ನು ನೋಡಿ, ಎನ್ ಇಷ್ಟ್ ಜಾಗಾ ಬಿಟ್-ಬಿಟ್ಟಿದಿಯಲ್ಲಾ ಅಂತ ಹೇಳದ್ರು.

(Pause)

ಆಮೇಲೆ ನಾವ್ ಇಬ್ರೂ ಸೇರಕೊಂಡು ಇದನ್ನ್ ಮಾಡಿದ್ವಿ.

ಅಮ್ಮಾ ಅಣ್ಣನ್ ಮೇಲೆ ಎಷ್ಟ್ ಕೂಗಾಡಿದ್ರು ಅಂದ್ರೆ..(Chuckles) World war 3-ನೆ ಆಯ್ತು.

ಮರವಿನ್ ರೋಗ ಅಣ್ಣಂಗಿದ್ರು, ಎಲ್ಲಾ ಮರತೋಗಿರೋದು ನಾನೆ.

(Sahana smiles)

ಸಹನಾ: ಸಣ್ಣ ಸಣ್ಣ ನೆನಪುಗಳು ಇದೇ ತರಾ ಎಲ್ಲೋ ಮುಚ್ ಹೋಗಿರುತ್ತೆ. ನಮ್ ತಲೆ ಒಳಗಿರೋ ಅಲ್ಮೇರಾಗಳನ್ನೆಲ್ಲಾ ತಳ್ಳಿ side-ಗಿಟ್ರೆ, I'm sure ಇನ್ನು ಈ ತರಾ ತುಂಬಾ ಇರುತ್ತೆ.

(Sahana's phone rings she picks up)

ಸಹನಾ: ಬರ್ತಾ ಇದೀನಮ್ಮ!... ಆಯ್ತು ಆಯ್ತು....ಸರಿ...

ಮನೇಲ್ಲಿ ಒಂದ್ಸಲ್ಪ ಕೆಲ್ಸ ಇದೆ.... ನಾನ್ ನಾಳೆ ಸಿಗ್ತೀನಿ.

(Pause)

-I'm glad I got to see this

(Then she leaves)

Shiva by himself in the room notices small piece of book, picks it up, see's Razak's name number and address. He calls the number,number is not in use.

CUT

# 61. INT.NIGHT.KUMAR'S HOUSE

# Ravi Prakash calls Ranga and then tells Santosh to finish him

Ranga's phone starts ringing, he steps near the window and takes the call. His body language changes and he becomes serious.

**ರವಿಪ್ರಕಾಶ್:**ಹೇಳಿದ್ ಕೆಲಸ ಆಗಿದ್ಯಾ?

**ರಂಗ:** ಹೂ ಅಣ್ಣ ಆಯ್ತು. ನೀವು ಹೇಳ್ದಂಗೆ ಮಾಡಿದೀನಿ.

Body-ಗಳು ಎನ್ ಮಾಡ್ದೆ?

ಕೊಲೆನ accident-ಮಾಡೋದೆ ನನ್ನ ಕಸಬು ಅಲ್ವಾಣ್ಣ?

**ರವಿಪ್ರಕಾಶ್:** ಹಾ..ಸರಿ,ಇವಾಗ ಎಲ್ಲಿದ್ಯ?

**ರಂಗ:** siddappa main road ಹತ್ರ lodging ಅಲ್ಲಿದ್ದೀನಿ.

**ರವಿಪ್ರಕಾಶ್: Police** full alert ಅಲ್ಲಿದಾರೆ.

ಯಾರಿಗೂ ಕಾಣಿಸ್ಕೊಳ್ದೆ ಅಲ್ಲೆ ಇರು, ನಾಳೆ ರಾತ್ರಿ ಹತ್ತುವರೆ ಹನ್ನೊಂದು ಘಂಟೆ ಅಷ್ಟೊತ್ತಿಗೆ ಒಂದು ಗಾಡಿ ಬರುತ್ತೆ, ಎಲ್ಲಾ ವ್ಯವಸ್ತೆ ಮಾಡಿದೀನಿ, ಒಂದು 6 ತಿಂಗಳು ಬಾಂಬೆಲ್ಲಿರು, ಟೈಮ್ ನೋಡ್ಕೊಂಡು ನಿನ್ನನ್ನ ವಾಪಸ್ಕರಿಸ್ತೀನಿ.

**ರಂಗ:**ಆಯ್ತಣ್ಣ.

(cuts the call, train passing in the background).

# <u>62. INT.DAY.RAZAK's WORKSHOP</u>

## <u>Shivaa meets Razak</u>

<u>ರಜ್ಝಾಕ್:</u> ಚೆ! ತುಂಬಾ ಬೇಜಾರಾಯ್ತು ಕೇಳಿ. ನಾನು ಮನೇಲ್ಲೇ ಇದ್ದೀನಿ, ಇಲ್ಲಿಗಂತು ಬಂದಿಲ್ಲ. ನಿಮ್ ತಂದೇನಾ ಕೊನೇ ಸಲಿ ನೋಡಿದ್ದು ಸುಮಾರು ಹತ್ತು ವರ್ಷ ಆಯ್ತು...ನಿನ್ನ ಸಲುವಾಗೆ ಬಂದಿದ್ರು...

<u>ಶಿವ:</u>ಏನು? ಗೊತ್ತಾಗ್ಲಿಲ್ಲ...ನನ್ನ ಸಲುವಾಗ?

<u>ರಜ್ಝಾಕ್:</u> ಹೂ ಪಾ... ನೀನು higher education ಗೆ ಫಾರಿನ್‌ಗೆ ಹೋಗ್ಬೇಕಂತ ತುಂಬಾ ಆಸೆ ಇಟ್ಕೊಂಡಿದ್ದೆ ಅಲ್ವಾ? ಆ ಟೈಮಲ್ಲಿ ನಿಮ್ ತಂದೇನ್ meet ಮಾಡಿದ್ದೆ.

<u>ಶಿವ:</u>ಸಾರೀ ಬಟ್...ನಿಮ್ಮನ್ಯಾಕ್ meet ಮಾಡಿದ್ರು? ಸ್ವಲ್ಪ clear ಆಗ್ ಹೇಳ್ತೀರಾ?

<u>ರಜ್ಝಾಕ್:</u>ದುಡ್ಡು ಶಾರ್ಟೇಜ್ ಇದೆ ಅಂತ ಬಂದಿದ್ರು, ಆದ್ರೆ ಅವಾಗ್ತಾನೆ ನನ್ನ ಮಗಳಿಗ್ ಮದುವೆ ಮಾಡಿದ್ದೆ, ನನ್ನ ಕೈಯಲ್ಲೂ ಏನೂ ಸಹಾಯ ಮಾಡಕ್ಕಾಗ್ಲಿಲ್ಲ. ನಂಗೊತ್ತಿರೊ ಹಾಗೆ ನಿನ್ನಾಸೆ ಪೂರೈಸಕ್ಕೆ  ತುಂಬಾನೇ ಓಡಾಡಿದ್ರು. (Silence for a while) ಅಂಥ ಒಳ್ಳೆಯವರಿಗೆ ಈ ತರಾ ಆಗೋಯ್ತಲ್ಲಾ...ಚೆ!

<u>ಶಿವ:</u> ಸರಿ ಅಂಕಲ್... ನಾನ್ ಬರ್ತೀನಿ, ನಿಮ್ಗೇನಾದ್ರು Information ಸಿಕ್ಕಿದ್ರೆ, ಈ ನಂಬರ್‌ಗೆ ಫೋನ್ಮಾಡಿ.

Shiva hands Razak a visiting card

______________________

**<u>Razak talking about Rao</u>**

<u>ರಜ್ಝಾಕ್:</u> ನಾನ್ BEMLನಲ್ಲಿ ನಿಮ್ ತಂದೆ ಜೊತೆ ಬರೀ ಹದಿನೈದು ವರ್ಷ ಕೆಲ್ಸ ಮಾಡಿದ್ದು ಆದ್ರೆ ಒಂದು ದಿನಾನು ನಿಮ್ತುಂದೆ ಸಪ್ಪೆ ಮುಖ ಮಾಡ್ಕೊಂಡಿದ್ದು ನೋಡೇ ಇಲ್ಲ. ನಮ್ಮಲ್ಲಿ ಯಾರದೇ ಏನೇ ಪ್ರಾಬ್ಲಮ್ ಇದ್ರೂ ವೆಂಕೊಬ್ ರಾವೇ ಫಸ್ಟ್ ಮಾತಾಡಿಸ್ತಾ ಇದ್ರು. ಅವರ ಜೊತೆ ಮಾತಾಡಿದ್ಮೇಲೆ ಎಂತ ದೊಡ್ಡ ಸಮಸ್ಯೆ ಇದ್ರೂ ತುಂಬಾ ಹಗುರವಾಗಿ ಕಾಣೊದು. ಅವರು ಯಾವಾಗ್ಲು ಹೇಳೋರು, "kabhi kabhi bheje se nahin, gurde se socho" ಅಂತ.

# 63. EXT.DAY.SHIVA’S HOUSE

## Shiva calling

**Shiva is seen holding the crayon box from the first scene when his phone rings….**

**Cop:**ಹೆಲೊ! Police station ಇಂದ call ಮಾಡ್ತೀರೋದ್ರಿ ….ವೆಂಕೊಬ್ ರಾವ್ ಅವರು ಕಾಣೆಯಾಗಿದಾರೆ ಅಂತ ರಿಪೊರ್ಟ್ ಫೈಲ್ ಮಾಡಿದ್ರಲ್ಲ ಅದರ್ ಸಲುವಾಗಿ call ಮಾಡ್ತಿರೋದು. Tumkur-Bangalore ಹೈವೇ ಹತ್ತಿರ ನೀವು ಕೊಟ್ಟಿರೋ ಡಿಸ್ಕ್ರಿಪ್ಶನ್ ಮ್ಯಾಚ್ ಆಗಿ ಒಂದು ಬಾಡಿ ಸಿಕ್ಕಿದೆ, ಸಂತ. ಜಾನ್ಸ್ ಹಾಸ್ಪಿಟಲ್‌ಗೆ ತಲ್ಪಿಸಿದೀವಿ, ಬಂದು ಐಡೆಂಟಿಫ್ಳೈ ಮಾಡಿ ಬಾಡಿನಾ.

# 64. INT/EXT.DAY.Mortuary.

## Mortuary scene

Shiva walks into the hospital, we show his mental turmoil of going into the mortuary, part of him wants to run and check, another part is too scared to find out, eventually musters up courage and walks down the long corridor accompanied by a constable. He pulls out the sheet of cloth covering the body.

**Constable:** ಹೈವೇ ಕ್ರಾಸ್ ಮಾಡಕ್ ಹೋಗ್ತಾರೆ ಕತ್ಲಲ್ಲಿ, ಯಾವುದೋ ದೊಡ್ಡ ಗಾಡಿ ಹೊಡ್ದಿರುತ್ತೆ. ಮುಖ ಎಲ್ಲಾ ಜಜ್ಜ್  ಹೊಗ್ಬಿಟ್ಟಿದೆ.

He looks at the body,

**Constable:** ನಿಮ್ ಕಡೆಯವರೇನ್ರಿ ಅವರು?

Shiva nods saying no.

# Ranga has 2$^{nd}$ thoughts about running away

## 66. INT.DAY.SAHANA's HOUSE
## Sahana calling police station from her house

Another alliance has come to Sahana's house, everybody looks happy. Sahana's mom can be heard saying

ಸಹನಾ (MOM) : ಅಂತು ಇಂತು ಒಂದು ಒಳ್ಳೆ ಸಂಬಂಧ ಸಿಕ್ತು. ನಾನಿನ್ನು ನೆಮ್ಮದಿಯಾಗ್ ಇರಬಹುದು.

ಸಹನ (On call)-: ಸರ್ ನನ್ ಹೆಸರು ಸಹನ ಅಂತಾ, ವೆಂಕೊಬ್ ರಾವ್ ಕಾಣೆಯಾಗಿದಾರೆ ಅಂತ missing person's report file- ಮಾಡಿದ್ವಿ, ಅದರ ಬಗ್ಗೆ ಏನಾದ್ರು ಮಾಹಿತಿ ಸಿಕ್ಕಿದ್ಯಾ ಅಂತ ಕೇಳಕ್ phone ಮಾಡ್ದೆ.

Cop: ಅವರ ಮಗನ್ಗೆ phone ಮಾಡಿದ್ನಲ್ಲ? ST john's ನ್ನಲ್ಲಿ ಒಂದು unclaimed body ಇದೆ, ಬಂದು identify ಮಾಡ್ಬೇಕಂತ?

(CUT)

# 67. INT.DAY.SHIVA'S HOUSE

# POST MORTUARY SCENE IN SHIVA HOUSE

**ಶಿವ:** ನನಿಗೆ ಕೆಲ್ಸದಲ್ಲಿ promotion ಸಿಕ್ದಾಗ ಆಪ್ಶನ್ ಇತ್ತು. ಬೆಂಗಳೂರಲ್ಲಿ ಇರಬಹುದಾಗಿತ್ತು. ಆದ್ರೆ ನಾನೇ ಬಾಂಬೆಗೆ ಓಡೋದೆ. ಎಂತಾ ಸ್ವರ್ಥಿ ಅಲ್ಲ ನಾನು? ಯಾವತ್ತು ಬಾಂಬೆಗೆ ಹೋಗ್ತೀನಿ ಅಂತ ಡಿಸೈಡ್ ಮಾಡಿದ್ನೊ ಅವತ್ತೆ ನಮ್ ತಂದೆನ್ ಕಳಕೊಂಡೆ.

**ಸಹನ:**ಆಗೋಗಿರೋದ್ರ ಬಗ್ಗೆ ಯೋಚಿಸಿ ಏನು ಉಪಯೋಗ. ವೆಂಕೊಬ್ ರಾವ್ ಅವರು ಕಾಣೆಯಾಗಿದ್ದಾರೆ ಅಷ್ಟೆ, ನೀನು ಅವರನ್ನ ಇನ್ನೂ ಕಳೆಕೊಂಡಿಲ್ಲ. ನಾವು ಹುಡುಕೋಣ ಅವರು ಸಿಕ್ತಾರೆ, ನನಿಗೆ confidence ಇದೆ.

**ಶಿವ:**ಇಷ್ಟು ದಿನ ಅವರು ಹೆಂಗಿದ್ದಾರೆ, ಏನ್ಮಾಡ್ತಾ ಇದ್ದಾರೆ, ಖುಷಿಯಾಗಿದ್ದಾರ ಅಂತ ಯಾವುದ್ರು ಬಗ್ಗೆನೂ ಯೊಚಿಸ್ತಾ ಇರಲಿಲ್ಲ. ಆದ್ರೆ sudden ಆಗಿ ಒಂದು ಹೊತ್ತು ಊಟ ಮಾಡಿದ್ರೋ, ಮಲಗಕ್ಕೆ ಜಾಗ ಸಿಕ್ಕಿದ್ಯೊ, ಬದ್ಕಿದ್ದಾರೊ ಸತ್ತಿದ್ದಾರೊ ಅಂತ continuous ಆಗಿ ಯೊಚಿಸಿ ಯೊಚಿಸಿ ಸುಸ್ತಾಗಿದೆ.

ಇವತ್ತು mortuary- ಯಲ್ಲಿ ಆ body-ನೋಡಿ, ಅಣ್ಣಾನೂ....

(sahana reassures shiva)

ಸಹನಾ: ಶಿವ ನನ್ ಮನ್ಸ್ ಹೇಳ್ತಾ ಇದೆ ವೆಂಕೋಬ್ ಸರ್ ಗೆ ಏನು ಆಗಿಲ್ಲಾ. Its only a matter of time ಅವ್ರು ಖಂಡಿತವಾಗ್ಲು ಸಿಗ್ತಾರೆ.

(And both of them breaksdown completely)

# 68. INT.NIGHT.KUMAR’S HOUSE

## Ranga warns Manja while leaving

Shot of Ranga looking blankly at the ceiling. Slow track down on his face. Ravi Prakash’s words echoing (Optional). He looks at the clock, its 7:30 PM. He gets up and goes to Kumar.

ರಂಗ:ಇವಾಗ್ಲೆ ಹೊರಡೋಣ, ರೆಡಿ ಆಗು.

Cut to Ranga who’s ready to leave with Kumar, Ranga takes Manja aside.

ರಂಗ:ಮನೇಲ್ಲಿ ಯಾರೂ ಏನೂ ಕಿತಾಪತಿ ಮಾಡ್ದಂಗೆ ನೋಡ್ಕೊ. ನಾನು ವಾಪಸ್ ಬರೋದು ಸ್ವಲ್ಪ ಲೇಟ್ ಆಗ್ಬಹುದು. ಏನು ಗೂಬೆ ಕೆಲಸ ಮಾಡ್ಬೇಡಾ.

ಮಂಜ:ಪ್ರಕಾಶಣ್ಣನ್ ಮೀಟ್ ಮಾಡಕ್ ಹೋಗ್ತಾ ಇದೀರಾ?

ರಂಗ:ಬಂದ್ಮೇಲ್ ಎಲ್ಲಾ ಹೇಳ್ತೀನಿ.

# 69. INT/EXT.NIGHT.LOCAL BAR

## Bar scene

A car comes to a sudden halt, Ranga is driving, and Kumar is next to him.

**ಕುಮಾರ್:** ಸಾರ್, ಏನಾಯ್ತು?

ರಂಗ:ಕುಡಿತ್ಯಾ?

**ಕುಮಾರ್:** ಮನೇಲ್ಲಿ...ಹೆಂಡ್ತಿ ಬೈತಾಳೆ...

ರಂಗ:ಕುಡಿತ್ಯಾ ಅಂತ ಕೇಳಿದ್ದು.

Cut to Kumar gulping down his drink and placing the glass on the table, they're in a shady bar.

**ಕುಮಾರ್:**ಸ್ವಲ್ಪ ಧೈರ್ಯ ಬಂತು.

ರಂಗ:ಧೈರ್ಯ? ಏನಿಕ್ಕೆ?

**ಕುಮಾರ್:** ಚೆ ಚೆ! ಏನುಕ್ಕೂ ಇಲ್ಲ ಸಾರ್...ಇನ್ನೊಂದು half bottle ತಗೊಂಡ್ಬಾರೊ ಇಲ್ಲಿ!

ರಂಗ: Full bottle-ಏ ಹೇಳು, ನನ್ನ ಕುಡ್ಸಕ್ ಪ್ರಯತ್ನ ಪಡ್ಬೇಡಾ, ರಾತ್ರಿ ಎಲ್ಲಾ ಕುಡಿದ್ರು ಚುಚ್ಚಬೇಕಾದ್ರೆ ಕೈ ನಡಗಲ್ಲ.

**ಕುಮಾರ್:**(keeps quite, after a while) ಒಂದು ಮಾತು ಕೇಳ್ಲ ಸಾರ್?

(Before Ranga says yes)

ನೀವು ಏನ್ ಮಾಡ್ಕೊಂಡಿದೀರ?

ರಂಗ:ಆ? ನಿನಿಗ್ಯಾಕೆ?

**ಕುಮಾರ್:**ಕುಡಿಬೇಕಾದ್ರೆ ಒಂದು ಸ್ವಲ್ಪ ಕಷ್ಟ-ಸುಖ ಮಾತಾಡ್ಕೊಂಡ್ರೆ ಚನ್ನಗಿರುತ್ತಲ್ವಾ, ಅದಿಕ್ಕೆ ಕೇಳ್ದೆ

ರಂಗ:ಕುಡಿಯಕ್ ಉಪ್ಪಿನ್ಕಾಯಿ ಇದ್ರೆ ಸಾಕು. ಮಾತು ಬೇಡಾ.

Kumar silently drinks

**ಕುಮಾರ್:** ಸಾರ್...ಅದು...ಗಾಡೀಲ್ಲಿ...ಬಾಡಿ...ನೀವು?

(Makes gestures of stabbing)

Ranga silently drinks and stares at Kumar.

**ಕುಮಾರ್:**ಯಾರ್ ಸಾರ್ ಅದು? ಎಲ್ಲಿ ತಗೊಂಡ್ ಹೋಗ್ತಾ ಇದ್ರಿ ಬಾಡಿನಾ?

**ರಂಗ:**ಸಿಟಿಲಿ ಎಷ್ಟೊಂದು ಜನ ಕಾಣೆಯಾಗ್ತಾರೆ, ಕೆಲವರು ಸಿಕ್ತಾರೆ, ಇನ್ನು ಕೆಲವರು ಸಿಗೋದೇ ಇಲ್ಲ ಅದೇ ನನ್ನ ಕೆಲಸ.

**ಕುಮಾರ್:**ಸಾರ್, ಇದೆಲ್ಲಾ ಮಾಡ್ಬೇಕಾದ್ರೆ ನಿಮಿಗೆ ಹೆದರಿಕೆ ಆಗಲ್ವ.

**ರಂಗ:** Huh! ಕೆಟ್ಟ ಕೆಲಸ ಮಾಡ್ಕ್ಕೆನ್ ಭಯ? ಒಳ್ಳೆದು ಮಾಡ್ಬಬೇಕಾದ್ರೆನೆ ಕೈ ನಡಗೋದು.

**ಕುಮಾರ್:**ಏನ್ಸಾರ್ ಹಂಗಂತೀರಾ? ನೀಮ್ ಕೆಲಸ ಏನಂತ ಹೇಳಿದ್ದಕ್ಕೆ ಹೆದರಿಕೆ ಆಗ್ತಾ ಇದೆ ನನಿಗೆ.

**ರಂಗ:**ಒಂದು ಹೊತ್ತು ಊಟಕ್ಕೋಸ್ಕರಾ ತಲೆ ಹೊಡ್ದಿದ್ರೆ ನಿನಗೂ ಭಯ ಆಗ್ತಿರಲಿಲ್ಲ

**ಕುಮಾರ್:** Family ಏನಾದ್ರೂ?

Ranga downs another glass.

**ರಂಗ:**ಹೊರಡೋಣ?

# <u>70. INT.NIGHT.KUMAR'S HOUSE</u>

## <u>Manja calls up Reshma while Ranga's at the bar</u>

Scene opens with Manja taking out phone from rice jar. He carefully assembles it. He says a silent prayer and switches it on. To his delight the phone switches on. He remembers the number and dials it. After a few rings she picks the call.

<u>**ರೆಷ್ಮ:**</u> Hello? Hello?

<u>**ಮಂಜ:**</u>ಏ ರೆಷ್ಮ:, ನಾನು ಕಣೆ.

<u>**ರೆಷ್ಮ:**</u>ನಾನು ಅಂದ್ರೆ ಯಾರು?

<u>**ಮಂಜ:**</u>ನಾನು ಮಂಜ ಕಣೆ.

<u>**ರೆಷ್ಮ:**</u>ಮಂಜ! (Her tone changes) ಲೈನಲ್ಲಿದೀನಿ, music ನಿಂತ್ಮೇಲೆ ಫೋನ್ಮಾಡ್ತೀನಿ.

<u>**ಮಂಜ:**</u>ಮಿಸ್ ಮಾಡ್ದೆ ಮಾಡು, ಕಾಯ್ತಾ ಇರತಿನಿ.

# 71. EXT.NIGHT.OUTSIDE BAR

# Cigarette Shop Scene

ರಂಗ: ಒಂದು king  ಕೊಡಿ

ಕುಮಾರ್: ಎರಡು.

Ranga looks at him.

ಕುಮಾರ್:ಪರ್ವಗಿಲ್ಲ ಅಲ್ವಾ?

ರಂಗ: ದುಡ್ಡು ನೀನು ಕೊಡ್ತಾ ಇರೋದು, ಒಂದು ಹೊಡೀತ್ಯೋ pack ಹೊಡಿತ್ಯೋ ನಿನಿಗ್ಬಿಟ್ಟಿದು. (Optional) ನಾನು ನಿನ್ನ ಹೆಂಡ್ತಿ ಅಲ್ಲ.

Shopkeeper Babu gives the cigarettes and keeps staring at Ranga.

ರಂಗ:ಏಯ್! ಏನ್ ಗುರಾಯಿಸ್ತಾ ಇದ್ಯಾ?!

Shopkeeper Babu is still staring.

ಬಾಬು:ಸಾರ್ ನಿಮ್ ಫೋಟೊ ತೋರಿಸ್ಕೊಂಡು ಯಾರೋ ಒಬ್ರು ಬಂದಿದ್ರು.

ರಂಗ:ಹೆಂಗಿದ್ದ ನೋಡಕ್ಕೆ?

ಬಾಬು: ಕಪ್ಪಿಗೆ, ದಪ್ಪ ಮೀಸೆ, ಕಡಕ್ಕಾಗಿದ್ರು ನೋಡಕ್ಕೆ. ಹಿಂಗೆ ಹೋದ್ರು ಸಾರ್ (Points in a direction)

ಕುಮಾರ್:ನಿಮ್ಮನ್ನ ಕರ್ಕೊಂಡ್ ಹೋಗಕ್ಕೆ ಬಂದಿರಬೇಕು, ಬನ್ನಿ ಸಾರ್ ಹುಡ್ಕೋಣಾ.

Ranga starts walking in that direction, turns to Kumar.

ರಂಗ:ಬಂದಿರೋದು ಕರ್ಕೊಂಡ್  ಹೋಗಕ್ಕಲ್ಲ, ಕಳ್ಸಕ್ಕೆ. ಬದುಕಕ್ ಆಸೆ ಇದ್ರೆ, silent ಆಗಿ ನನ್ನ ಹಿಂದೆ ಬಾ.

(Follow sequence)

# 72. EXT.NIGHT.KUMAR's CAR

## Ranga and Kumar return home from bar

(Cut to car, Kumar is driving)

**ಕುಮಾರ್:** ಯಾರ್ ಸಾರ್ ಅದು?

**ರಂಗ(To himself):**ನಮ್ದೆಲ್ಲಾ ನಾಯಿ ಜೀವನಾನೆ, ಎಷ್ಟೇ ನೀಯತ್ತಾಗಿ ಕೆಲ್ಸ ಮಾಡಿದ್ರು, ಹುಚ್ಚಿಡ್ಡಿದೆ ಅಂತ ಯಾರಾದ್ರು ಹೇಳಿದ್ರೆ ಸಾಕು, ಸಾಯಿಸಕ್  ಹಿಂಜರಿಯಲ್ಲ, ಬೋಳಿ ಮಕ್ಕಳು.

**ಕುಮಾರ್:** ಸಾಯಿಸಕ್ಕಾ? ಏನ್ಸಾರ್ ಹೇಳ್ತಾ ಇದೀರಾ? Road ಅಲ್ಲಿ accident ಆಗಿದೆ, ಏನೋ ಸಹಾಯ ಮಾಡೋಣಾ ಅಂತ ಬಂದು, ನಿಮ್ ಜೊತೆ  ಸಿಕಾಕ್ಕೊಂಡಿದೀನಿ ಸಾರ್. ಆ ಗಾಡೀಲ್ಲಿ ಇದ್ದಿದ್ ಹೆಣ, ನೀವು ಮಾಡೊ ಕೆಲ್ಸ, ಇವಾಗ್ ನಿಮ್ಮನ್ ಹುಡುಕ್ಕೊಂಡು ಬಂದಿರೋ ವ್ಯಕ್ತಿ, ಅದ್ಯಾವುದೂ ನನಿಗ್ಬೇಡಾ. ನನಿಗೇನಾದ್ರು ಪರ್ವಾಗಿಲ್ಲಾ, ಆದ್ರೆ ದಯವಿಟ್ಟು ನನ್ಹೆಂಡ್ತಿ-ಮಗುಗೆ ಮಾತ್ರ ಏನು ಆಗ್ದೆ ಇರೋ ಹಂಗ್ನೋಡ್ಕೊಳಿ.

# 73. INT.NIGHT.DANCE BAR.
# Reshma calls back Manja+ Ranga return from bar

Reshma is trying to call Manja, Manja answers.

ರೇಷ್ಮಾ:ಹೆಲ್ಲೊ! ಮಂಜ? ಸಾರಿ ಕಣೊ ತುಂಬಾ ಹೊತ್ತು ಕಾದ್ಯಾ?

ಮಂಜ:ಚೆ! ನಿನಿಗೊಸ್ಕರ ಬಿಡೆ, ಎಷ್ಟು ದಿನ ಬೇಕಾದ್ರೂ ಕಾಯ್ತೀನಿ.

ರೇಷ್ಮಾ: ಊಟಾ ಆಯ್ತಾ?

ಮಂಜ:ಇನ್ನು ಇಲ್ಲ ಕಣೆ...ಹೆಂಗೆ ಕಚ್ಕೊಂಡಿದೀನಂದ್ರೆ...

ರೇಷ್ಮಾ: ಏನಾಯ್ತು? ಎಲ್ಲಿದ್ಯಾ?

Ravi Prakash Reddy is revealed.

ಮಂಜ:ಅಯ್ಯೋ...!

By now Ranga has entered the house.

ಮಂಜ:ಏ! ಆಮೇಲ್ಮಾಡ್ತೀನಿರೆ!

Manja cuts the call and puts the phone in his pocket.

# 74. INT.NIGHT.KUMAR’S HOUSE

## Ranga thrashes Manja

Ranga latches Kumar’s room door. Ranga kicks the door open, Manja freezes, Ranga grabs the phone and smashes it on the floor.

ರಂಗ: Tank ಇಂದ ಫೋನ್ ಯಾವಾಗ್ ತೆಗೆದ್ಯೋ?! Beep!

Ranga continuously hits Manja with a mug, completely lost in rage.

ರಂಗ:ಅಣ್ಣ...! ಅಣ್ಣ..!

ರಂಗ:ಹೇಳೊ!

ಮಂಜ:ನಿನ್ನೆ ರಾತ್ರಿ ಅಣ್ಣ...ನಿನ್ನೆ ರಾತ್ರಿ...

ರಂಗ:ಸುಳ್ಳು ಹೇಳಿದ್ರೆ ಸಾಯಿಸ್ಬಿಡ್ತೀನಿ. Correct ಆಗಿಯಾರ್ ಹತ್ತಿರ ಮಾತಾಡ್ದೆ, ಏನೊಂತ ಮಾತಾಡ್ದೆ ಅಂತ ಹೇಳು!

ಮಂಜ:ನಿನ್ನೆ ಇಂದ on ಮಾಡಕ್ try ಮಾಡ್ತಾ ಇದೀನಿನಣ್ಣ, ಇವತ್ತು ರಾತ್ರಿನೇ switch on ಆಗಿದ್ದು, ಹೊಡಿಬೇಡಿ ಅಣ್ಣ... ಹೊಡಿಬೇಡಿ.

ರಂಗ:ಎಷ್ಟು ಘಂಟೆಗ್ on ಮಾಡಿದ್ದು? ಯಾರ್ ಹತ್ತಿರ ಮಾತಾಡಿ ಏನಂತ ಹೇಳ್ದೆ? Correct ಆಗಿ ಹೇಳು!

ಮಂಜ:ನನ್ನ dove ಜೊತೆ ಮಾತಾಡಿ ಎರಡು ದಿನ ಆಯ್ತು...ಹೊಡಿಬೇಡಿ ಅಣ್ಣ.

ರಂಗ:ಏನಂತ ಹೇಳ್ದ್ಯೋ ಆ ಬೇವರ್ಸಿಗೆ?

ಮಂಜ:ಏನಂದಿಲ್ಲಾ ಅಣ್ಣ... ಮಾತಾಡಕ್ಕೆ chance-ಏ ಸಿಕ್ಕಿಲ್ಲ. Hello ಅಂದ ಅಷ್ಟೆ. ಮಾತಾಡೋಷ್ಟ್ರಲ್ಲಿ ನೀವು ಬಂದ್ಬಿಟ್ರಿ.

Ranga breaks down, voice starts breaking.

ರಂಗ:ನಿಜ ಹೇಳೊ! ನಿಜ ಹೇಳೊ! ಇಲ್ಲಿ ನಿಮ್ಗಳ್ ಜೀವ ಉಳಿಸಕ್ಕೆ ಸಾಯ್ತಾ ಇದೀನಿ!

Throws away the mug he was hitting him with. Kumar’s reaction.

ರಂಗ:ನನಿಗ್ಯಾಕ್  ಬೇಕು ಈ ಕರ್ಮ! ಏನಾದ್ರು ಮಾಡ್ಕೊಂಡ್ ಸಾಯ್ರಿ!

Ranga walks out.

# 75.INT/EXT.NIGHT.SAHANA’S CAR

## Love story

Shiva and Sahana at home, board with Bangalore map is set up. Light music (from radio) can be heard from the background. Shiva enters from the kitchen.

ಸಹನ:ಶಿವ, JP Nagarದು ಏನನಿಸತ್ತೆ?

ಶಿವ:ಇಲ್ಲ, ಅವರೆ sure ಇರಲಿಲ್ಲ, ಬೇರೆ photos ತೋರಿಸಿದ್ಮೇಲೆ ಅವರೆ confuse ಆಗ್ಬಿಟ್ರು. Confirm ಅಂತ ಹೇಳಕ್ಕಾಗಲ್ಲ.

ಸಹನ:ಹಾಗಾದ್ರೆ, orange pin ಹಾಕ್ತೀನಿ.

Sahana puts an orange pin on JP Nagar.

ಶಿವ:ಮಣಿ sir ಹೇಳಿದ್ರಲ್ಲಿ, ಆ ಹೂವು ಮಾರೋರು ನೋಡಿರೋದು confirm ಅಂತ ತೊಗೊಬಹುದು.

ಸಹನ: Correct, correct, ಹಾಗಾದ್ರೆ ಶೇಶಾದ್ರಿಪುರಂಮ green

ಶಿವ: Hotel waiter ಹೇಳಿದ್ದು definite confirm.

Shiva comes and places the green pin. Both of them stand and look at the board.

ಶಿವ:ಸಹನ, ಒಂದು notice ಮಾಡು, ಬರೀ ಕಾಣೆಯಾಗಿದ್ ದಿನ ಸಿಕ್ಕಿರೋ information ಮಾತ್ರ, ಎಲ್ಲಾ ಅಣ್ಣನ್ನ ಪಕ್ಕ ನೋಡಿರೋವ್ರು. ಇನ್ನು ಯಾವುದೂ sure ಇಲ್ಲ. ಎಲ್ಲಾ confusing ಆಗಿದೆ.

ಸಹನ: ಸಿಕ್ಕಿರೋ information ಎಲ್ಲಾ, city ಒಳಗೇ ಇದೆ. ಈ hotel ಒಂದೆ highway/bus stop ಹತ್ರ ಇರೋದು. ಅಲ್ಲಿಗ್ ಹೋಗಿಲ್ದೆ ಹೋದ್ರೆ ಸಾಕು. Let’s hope for the best. Oh shit! Its late,ನಾನು ಹೋರಡ್ತೀನಿ, ನಾಳೆ ಬೆಳಿಗ್ಗೆ ಬೇಗ್ ಸಿಗೋಣಾ

ಶಿವ:ನಿನಿಗೂ ಸೇರಿಸಿ ಅಡಿಗೆ ಮಾಡಿದೀನಿ. You have to eat.

ಸಹನ:ನಿನ್ನ ಅಡಿಗೆ, ನಿನ್ನ sketching ಅಷ್ಟೇ ಚೆನ್ನಾಗಿದ್ರೆ, I’ll stay.

ಶಿವ: Oh definitely, Maggie ಮಾಡೊದ್ ಏನ್ ಕಷ್ಟ.

Exterior shot of the house. Cut to the inside, they finished eating.

Old song from Pallavi Anupallavi plays on Radio City. Sahana gets excited and tunes up the volume.

<u>ಸಹನ:</u> Oh I love this song.ಆ ಕಾಲದ್ ರೋಮ್ಯಾನ್ಸ್ ಬೇರೆನೇ ಅಲ್ಲಾ? ಎಷ್ಟು ಖುಷಿಯಾಗುತ್ತೆ, ಈ ತರಾ ಹಾಡು ಕೇಳ್ತಾ ಇದ್ರೆ ನಿಮ್ಮ ತಂದೇನೇ ಜ್ಞಾಪಕಕ್ ಬರತಾರೆ.

Shiva looks at her, surprised.

<u>ಸಹನ:</u>ನಾನು ಒಬ್ಬಳೆ ಅಲ್ಲ, ನಮ್ಮfacility ನಲ್ಲಿಎಲ್ಲಾ female staff gu ನಿಮ್ಮ ತಂದೆ ಅಂದ್ರೆ ಒಂದು ಹಳೇ ಕಾಲದ್ film hero feeling.

<u>ಶಿವ:</u>ಹ!ಹ! ಹೀರೊ? ನಮ್ತಂದೆ?

<u>ಸಹನ:</u> ನಿಮ್ತಂದೆ ಅದೇ ಕಥೆನ ಹೇಳೀ ಹೇಳೀ ನಿನಗೆ ಬೋರ್ ಆಗಿರಬಹುದು, ಆದ್ರೆ ನಮಿಗ್ ಎಷ್ಟೇ ಸಲಿ ಕೇಳಿದ್ರು ಇನ್ನೊಂದ್ಸಲಿ ಕೇಳ್ಬೇಕು ಅಂತ ಅನ್ಸುತಾ ಇತ್ತು. My God! ಒಳ್ಳೆ ಸಣ್ಣ ಮಕ್ಕಳ ತರಾ ಕೂತ್ಕೊಂಡು ಅದೇ ಕಥೆ ಎಷ್ಟು ಸರಿ ಕೇಳಿದೀವಿ ಗೊತ್ತ? ಒಂದು ಹಳೇ film ನೋಡ್ದಂಗೆ ಆಗೋದು.

<u>ಶಿವ:</u>ಏನು ಕಥೆ? ಏನು ಮಾತಾಡ್ತಾ ಇದ್ದೀಯಾ?

<u>ಸಹನ:</u>  Seriously?! ನಿಮ್ ತಂದೆ ತಾಯಿ ಲವ್ ಮ್ಯಾರೇಜ್ ಅಂತ ಗೊತ್ತು ತಾನೆ?

<u>ಶಿವ:</u>ಹೂ ಗೊತ್ತು...

<u>ಸಹನ:</u>ಹೆಂಗ್ ಮೀಟ್ ಆದ್ರು, love ಹೆಂಗಾಯ್ತು ಅಂತ ಗೊತ್ತಿಲ್ವಾ?

Shiva looks blankly at her.

<u>ಸಹನ:</u>ಶಿವ! What are you saying?ನೀನು ಯಾವತ್ತೂ ನಾನು ಹೆಂಗಾದೆ ಅಂತ ಯೋಚಿಸಿಲ್ವಾ?

Shiva looks at her, he's slightly disgusted, and she immediately realizes what she has said.

<u>ಸಹನ:</u>ಅಯ್ಯೋ of course! ನೀನು, ನಾನು, ಪ್ರತಿ ಒಂದು ಜೀವಾನೂ ಹಂಗೇ ಆಗೋದು, ಅದರ ಬಗ್ಗೆ ನಾನು ಮಾತಾಡ್ತಾ ಇಲ್ಲ. ನಾವು ಹುಟ್ಟಿದ್ಮೇಲೆ ನಮ್ ಕಥೆ ಶುರುವಾಗೋದು ಅನ್ಕೋತೀವಿ, ಆದ್ರೆ ಇನ್ಯಾವುದೋ ಕಥೆ ಮಧ್ಯದಲ್ಲಿ ನಮ್ಮ ಕಥೆ ಶುರುವಾಗೋದು ಅಂತ ಯಾವತ್ತೂ ಯೋಚ್ಸಲ್ಲ.

ಸರಿ, ಅದುಬಿಡು, ನಿನ್ನ ಕಥೆ ಹಿಂದೆ ಇರೋ ಕಥೆ ನಾನು ಹೇಳ್ತಿನಿ...ಬಟ್ ಇವಾಗ್ಲೇ ಹೇಳ್ತಾ ಇದೀನಿ, ನಿಮ್ತುಂದೆ ಅಷ್ಟು ಚೆನ್ನಾಗಿ ಹೇಳಕ್ ಬರಲ್ಲ.

## 75A.INT.DAY.OLDAGEHOME

# RAO's NARRATION

**ರಾವ್:**ಒಂದು ನೋಟದಲ್ಲೇ ಜೀವನ ಪೂರ್ತಿ ಕಷ್ಟ-ಸುಖ ಹಂಚ್ಕೊತೀವಿ ಅಂತ decide ಮಾಡ್ಕೋತಾ ಇದ್ದ ಕಾಲಾ...1968, Jnana Bharathi...Final year B.Sc ಓದ್ತಾ ಇರಬೇಕಾದ್ರೆ, canteenನಲ್ಲಿ first ನೋಡಿದ್ದು.ಎಷ್ಟು ಮುದ್ದಾಗಿದ್ಳು...ತುಂಬಾನೇ ನಾಚ್ಕೆ, ತಲೆ ಎತ್ತಿ ಯಾರನ್ನೂ ನೋಡ್ತಾ ಇರಲಿಲ್ಲ. ಅಲ್ಲಿಲ್ಲಿ ಚಿಕ್ಕದಾಗ್ ನಗೊಳು. ಆ ನಗೂ... ಆಹಾಹಾ... ಅದ್ರುಷ್ಟು ಖುಷಿಇನ್ನೇನು ಇಲ್ಲ. ತಲೆ ಎತ್ತಿ ನನ್ನ ನೋಡ್ತಾಳೋ ಇಲ್ವೋ ಅಂತ ಕಾದು ಕಾದು ಒಂದು semester ಕಳೆದು ಹೊಯ್ತು. ಕೊನೇಗೆ ಒಂದು ದಿನ ಹೆಂಗಾದ್ರು ಮಾಡಿ ಅವಳ್ನ ಮಾತಾಡ್ಸಿ ಹೆಸರಾದ್ರು ತಿಲ್ಕೊಳೋಣಾ ಅಂತ ಹೋದೆ...ಹತ್ತಿರ ಹೋಗ್ತಿದ್ದಂಗೆ ತಲೆ ಎತ್ತಿದ್ಳು, ನೋಡಿದ್ಳು, ಅವತ್ತು ಆಗಿದ್ ಭಯ , ಜೀವನದಲ್ಲಿ ಮರಿಯಕ್ಕೆ ಆಗಲ್ಲ.

**ಶಿವ:**ಏಯ್! ಸುಮ್ನೆ ನನ್ ಕಾಲೆಳಿತಾ ಇದ್ಯಾ. ಯಾವುದೋ film story ಹೇಳ್ತಾ ಇದ್ಯಾ.

**ಸಹನ:**ನಿನ್ಮೇಲಾಣೆ ನಾನ್ ನಿಜ ಹೇಳ್ತಾ ಇದೀನಿ.

**ಶಿವ:**ನನ್ ಮೇಲಾಣೆ?

**ಸಹನ:**Just listen to the story no!

**ಶಿವ:**ಸರಿ, ಆಮೇಲೆ?

**ರಾವ್:**ಆಮೇಲೇನು? ಮನೆಗ್ ಓಡಿಬಂದ್ಬಿಟ್ಟೆ...ವಾಪಸ್ canteen-ಗೆ ಹೋದೆ, ಬಟ್ ಅವಳಲ್ಲಿರ್ಲಿಲ್ಲ, collegeನ್ ಪ್ರತಿಯೊಂದು ಮೂಲೆ ಮೂಲೆ ಹುಡುಕ್ದೆ, ಆದ್ರೆ, ಎಲ್ಲೂ ಕಾಣಿಸ್ಲಿಲ್ಲ. ಆ ಮುದ್ದು ಮುಖ ಬರೀ ನನ್ನ ಕಲ್ಪನೆ ಅಂತ ಅನ್ಕೊಂಡಿದ್ದೆ. ಅವಾಗ್ ಗೊತ್ತಾಯ್ತು ಕಾಲೇಜಿನಲ್ಲಿ ನಾನ್ಹೋಗ್ದೇ ಇದ್ದಿದ್ ಒಂದೇ ಜಾಗ ಇತ್ತು.

**ಶಿವ:** Ladies hostel?

**ಸಹನ:**ಅವರ (generation) ಗು ನಿಮ್ (generation) ಗು ಅದೇ ವ್ಯತ್ಯಾಸಾ!

**ಶಿವ:**ನೀನ್ಯಾವ್ (generation) ಅನ್ಕೊಂಡಿದಿಯಾ? ವಯಸ್ಸಾಗಿರೋವರ್ ಜೊತೆ ಇದ್ದು ಇದ್ದು, ನಿನಿಗೂ ವಯಸ್ಸಾಗಿಬಿಟ್ಟಿದೆ.

**ಸಹನ:**ಕಥೆ ಹೇಳ್ಬ ಬೇಡ್ವಾ?

**ಶಿವ:**ಆಯ್ತು...ಎಲ್ಲಿ?

Cut back to Sahana narrating the story.

**ರಾವ್:**Library. ಅದು ಎಲ್ಲಿತ್ತು ಅಂತಾನೇ ಗೊತ್ತಿರ್ಲಿಲ್ಲ. Exam ಹತ್ತಿರ ಬಂತು ಅಂತ ಲೈಬ್ರರಿನೇ ಮನೇ ಮಾಡ್ಕೊಂಡಿದ್ದವರಲ್ಲಿ ಅವಳೂ ಒಬ್ಬಳಾಗಿದ್ಲು.ನಾನೂ ದಿನಾ ಲೈಬ್ರರಿಗ್ ಹೋಗಕ್ ಶುರು ಮಾಡ್ದೆ. ಪುಸ್ತಕ ಓದ್ತಾ ಇರೋ ಹಂಗೆ acting ಮಾಡಿ, ದಿನ ಪೂರ್ತಿ ಅವಳ್ನನ್ನೇ ನೋಡ್ತಾ ಇದ್ದೆ. ಒಂದು ದಿನ ಕೈಯಲ್ಲಿದ್ದಿದ್ ಪುಸ್ತಕ ಓದಕ್ ಶುರು ಮಾಡ್ದೆ. Great expectations by Charles Dickens.

Shiva has his hand on his forehead.

**ಸಹನ:**ಏನಾಯ್ತು?

**ಶಿವ:**Love storyಲೂ ಪುಸ್ತಕ ಇಟ್ಕೊಂಡ್ ಕೂತಿದ್ರಾ? ಇಡೀ ಪ್ರಪಂಚಾನಾ ಒಂದು book ಅಲ್ಲೇ ನೋಡ್ಬಹುದು ಅಂತ್‌ಹೇಳಿ ಚಿಕ್ಕ ವಯಸ್ಸಲ್ಲೇ ಕಾಗೆ ಹಾರಿಸ್ಬಿಟ್ರು. ನಾನು ಎಷ್ಟೋಂದ್...

**ರಾವ್:**...ಪುಸ್ತಕಗಳು ಕವಿತೆಗಳು ಓದ್ಬೇಕಾದ್ರೆ ನನಿಗೊಂದ್ ಪ್ರಶ್ನೆ ಕಾಡ್ತಾ ಇತ್ತು. ಹೆಂಗೆ ಪದಗಳನ್ನ ಜೋಡ್ಸಿ ಅಂಥ ಅದ್ಭುತವಾದ ಪ್ರಪಂಚಾನಾ ಕಣ್ಣು ಮುಂದೆ ಕಟ್ಟಿಡ್ತಾ ರ ಅಂತ.

(Pause) ಓದ್ತಾ ಇದ್ದಿದ್ ಪುಸ್ತಕ ಕೆಳಗಿಟ್ಟೆ, ಮುಂದೇನೇ ಕೂತಿದ್ಲು. ಅವಳ ಕಣ್ಣಲ್ಲಿ ಆ ಪ್ರಶ್ನೆಗೆ ಉತ್ತರ ಸಿಗ್ತು.

Cut to Shiva looking at Sahana, both are looking at each other, Sahana smiles.

**ಶಿವ:**ಅಣ್ಣ ಏನು ಮಾತಾಡ್ಲಿಲ್ವ?

**ರಾವ್:**ಅವಳೂ ಮಾತಾಡ್ಲಿಲ್ಲ, ನಾನ್ ಮಾತಾಡ್ತೀನಿ ಅಂತ ಎಷ್ಟು ಹೊತ್ತು ಕಾಯ್ತಾಳೆ ಪಾಪಾ? ಎದ್‌ಹೋದ್ಲು. ಅವಳಿಗೊಂದ್ letter ಬರಿಯಕ್ decide ಮಾಡ್ದೆ. ಅವಳು ಅವಾಗಿದ್ದಿದ್ದು ಅವಳ ದೊಡ್ಡಮ್ಮನ್ಮನೆಲ್ಲಿ. ಆ letter ಕೊಡ್ಲೇಬೇಕಂತ ತೀರ್ಮಾನ ಮಾಡಿ, cycle ಎತ್ಕೊಂಡ್ ಅವಳ ಮನೇಗ್ಹೊರಟೆ. ಅವಳಿಗ್ ಕಾಣಿಸೋತರಾ postbox ಒಳಗಡೆ letter ಹಾಕ್ದೆ. ಅವಳ ದೊಡ್ಡಮ್ಮ ಆಚೆ ಹೋಗಿದ್ ತಕ್ಷಣಾ ಓಡ್ಕೊಂಡ್ ಬಂದು ಖುಷಿಯಿಂದ letter open ಮಾಡಿದ್ಲು. ಆ ಖುಷಿ ಪಟ್ಟಂತ ಮಾಯಾ ಆಗ್‌ಹೋಯ್ತು.

**ಸುಶೀಲ್:**ಯಾಕ್ ವೆಂಕಿ? ಹೆಸರು ತಪ್ಪಾಗ ಬರಿದ್ಬಿಟ್ಯಾ?

Cut to Sahana narrating.

**ಸಹನ:**Letter ಕೊಡೊ tension ಅಲ್ಲಿ ಮಳೇ ಬರ್ತಾ ಇತ್ತು ಅಂತ ಮರತೋಗಿದ್ದೆ. ನೆಂದ್ಹೋಗಿರೋ letter ಅಲ್ಲಿ ಪದಗಳೇ ಇರ್ಲಿಲ್ಲ. ಬರೀ ink‌ಏ ಉಳ್ದಿತ್ತು.

**Listener (group):** ಓ... ಅಯ್ಯೋ ರಾಮಾ! ಆಮೇಲೇನಾಯ್ತು?

**ರಾವ್:**ಅವಳ ಮನೆ ಮುಂದೆ cycle ತುಳಿಯೋದ್ಬಿಟ್ರೆ ನನಿಗ್ ಬೇರೇನು ಕೆಲ್ಸ ಇರ್ಲಿಲ್ಲ. ನಾನ್ ಅವಳನ್ನ ನೋಡೋದು, ಅವಳು ನನ್ನನ್ನೋಡೋದು, ಅವಳ ದೊಡ್ಡಮ್ಮನೂ ನೋಡ್ತಿದ್ರು ಅಂತ ನನಿಗ್ ಗೊತ್ತಿರಲಿಲ್ಲ. ಧಿಡೀರಂತ ಒಂದು ದಿನ ನೋಡಕ್ಕ್ಯಾರು ಇರಲಿಲ್ಲ. ಹಗಲು ರಾತ್ರಿ ಕಾದೆ. ಕೊನೇಗೆ ಧೈರ್ಯ ಮಾಡಿ, ಸೀಧಾ ಹೋಗಿ ಅವರ ಮನೆ ಬಾಗಿಲು ತಟ್ದೆ. ಆದ್ರೆ...

**ಸಹನ:**ಆದ್ರೆ?

**ರಾವ್:**ಆದ್ರೆ... ಮನೆ ಬೀಗಾ ಹಾಕಿತ್ತು. College re-open ಆಯ್ತು, but ಅವಳ್ದೇನು ಸುಳಿವಿರಲಿಲ್ಲ. ಏನಾಗಿರಬಹುದೇನೋ ಅಂತ ಯೋಚ್ಸಿ ಯೋಚ್ಸಿ ತಲೆ ಕೆಟ್ಹೋಗಿತ್ತು. library ನಲ್ಲಿ ನಾನೋದೋ ಕಾದಂಬರಿಗಳ ಮಧ್ಯ ಒಂದು Physics text book ಇತ್ತು. ಆ textbook ಒಳಗಡೆ ಪದಗಳೇ ಅಳಿಸೊಗಿರೊ ನನ್ನ ಪತ್ರದಲ್ಲಿ ಹೊಸ ಪದಗಳ್ನ್ ನೊಡ್ದೆ.

**Listener:**Letter ಅಲ್ಲೇನಿತ್ತು ಹೇಳಿ.

**ರಾವ್:** **"ಹತ್ತುದಿನಕ್ಕೆ ಮೂಡಿಗೆರೆಗ್ ಹೋಗ್ತಾ ಇದೀನಿ. ಅಪ್ಪಂಗೆ ಮೈ ಹುಷಾರಿಲ್ಲ ಅಂತ ಆಸ್ಪತ್ರೆಗೆ ಸೇರ್ಸಿದಾರೆ-ನಿಮ್ಮ ಪುಷ್ಪಾ."**

ಆ "ನಿಮ್ಮ" ಅನ್ನೊ ಸಣ್ಣ ಪದಾನ ಎಷ್ಟು ಸಲ ಓದಿದೀನಿ ಅಂತ ನನಿಗೇ ಲೆಕ್ಕ ಇಲ್ಲ. ಅವಳನ್ನ ನೋಡ್ಲೇಬೇಕಂತ ಅವಳೂರಿಗ್ ಹೊರಟೆ. ಅಲ್ಲಿಗ್ ಹೋದ್ಮೇಲ್ ನಿಜ ಗೊತ್ತಾಯ್ತು, ಅವರಪ್ಪಂಗೇನು ಆಗಿರಲಿಲ್ಲ. ಅವಳಿಗ್ ಬಲವಂತವಾಗ್ ಮದುವೆ ಮಾಡಿಸ್ತಾ ಇದ್ರು. ನನ್ನ ಕೈಯಲ್ಲಿನ್ನೇನು ಇಲ್ಲ ಅಂತ ವಾಪಸ್ bus ಹತ್ತಿದೆ.

**ಶಿವ:** Guarantee ವಾಪಸ್ ಮನೇಗ್ಬಂದಿರತಾರೆ, ಅಮ್ಮಾನೆ ಮದುವೆ ನಿಲ್ಸಿ...

Sahana gestures him to stop and smiles.

**ಸಹನ:**ಕೇಳು.

**ರಾವ್:**ಅವಳಿಂದ ದೂರ ಹೋದ್ರೆ ಅದಕ್ಕಿಂತ ದೊಡ್ಡ ತಪ್ಪಿಲ್ಲಾ ಅನ್ನಿಸ್ತು. Bus ಇಂದ ಇಳ್ಕೊಂಡು ನೇರವಾಗಿ ಅವಳ ಮನೆಗ್ಹೋದೆ. ಸರಿಯಾಗ್ ಒದೆ ತಿಂದೆ, ನಾನೂ ಒಂದು-ಎರಡು ಕೊಟ್ಟೆ...ಹಂಗು

ಹಿಂಗು ಹೋಗಿ ಅವಳ ಮುಂದೆ ನಿಂತ್ಕೊಂಡೆ.ಮೊದಲ್ನೇ ಸಲ ಮಾತಾಡ್ಬೇಕಂತ ನಾಟಕದಲ್ಲಿ rehearsal ಮಾಡ್ದಂಗೆ ಎರಡುವರೆ ವರ್ಷದಿಂದ practice ಮಾಡ್ತಿದ್ದೆ, ಆದ್ರೆ ಕನಸು-ಮನಸಲ್ಲೂ "ನನ್ನನ್ನ್ಮದುವೆ ಆಗ್ತಿಯಾ?" ಅಂತ ಕೇಳ್ತೀನಿ ಅಂತ ಅನ್ಕೊಂಡೇ ಇರಲಿಲ್ಲ.

**ಶಿವ:**ಆಮೇಲೆ?

## 75B.INT.NIGHT.SHIVA'S HOUSE

**SAHANA finishing the Lovestory at Shiva's place**

**ಸಹನ:**ಒಬ್ರನೊಬ್ರು ಇಷ್ಟ ಪಟ್ಮೇಲ್ ಇನ್ನೇನು? ಬೇರೆ ಏನು ಬೇಡಾ ಅಂತ ದೇವಸ್ಥಾನದಲ್ಲಿ ಮದುವೆ ಆದ್ರು. ಎರಡುವರೆ ವರ್ಷ ಮಾತೇ ಇಲ್ದೆ ಕಣ್ಣಲ್ಲೇ ಎಲ್ಲಾ ಮಾತಾಡಿ ಮದುವೆ ಆದ್ರಲ್ಲ…ಎಂತ romantic love story ಅಲ್ವಾ?

**ಶಿವ:**ಅಣ್ಣನ್ ಜೀವನ ಸಾಧಾರಣವಾಗಿತ್ತು ಅನ್ಕೋ assumption ಅಲ್ಲಿದ್ದೆ. ಆದ್ರೆ in comparision ನನ್ನ life- ಏ boring ಅನ್ಸುತ್ತೆ. ಅಣ್ಣನ್ನ ಹುಡ್ಕೋ ಪ್ರಯತ್ನದಲ್ಲಿ ನಾನೆಷ್ಟು ಕಳೆದುಹೋಗಿದೀನಂತ ಗೊತ್ತಾಗಿದೆ. (Long pause) ಯಾವಾಗ್ಲೋ ಕಳೆದು ಹೋಗಿರೋವ್ರು ಸಿಕ್ಕಿದಾರೆ ಅನ್ನಿಸ್ತಾ ಇದೆ. ಎಷ್ಟು ವಿಚಿತ್ರ ಅಲ್ವ? (Pause) ಅವರನ್ನಇನ್ನೊಂದ್ಸಲಿ ನೋಡಿದ್ರೆ ಸಾಕು ನನಿಗೆ.

Sahana's comforting reaction.

**ಶಿವ:**Anyways…another cup of tea?

**ಸಹನ:**I wouldn't mind, ಇಲ್ಲಾ ಅಂದ್ರೆ ಗಾಡಿ ಓಡ್ಸೋವಾಗಾ ಮಲ್ಕೊಂಬಿಡ್ತೀನಿ.

Shiva smiles. Cut to kitchen, mood shots of both Ranga and Shiva's kitchen, shown one after the other. Shiva walks out to see Sahana asleep, he sets aside the tea cups, covers her with a blanket and switches off the light.

# 76.INT/EXT.NIGHT.KUMAR’S HOUSE
# Ranga-Rao 2 dogs scene

**Scene description: Ranga unlatches the door, goes in to steal money from Kumar’s wallet and is about to tip toe out of the room where Venkob Rao is sleeping, Rao notices him, the room is partially lit from of a source of light outside the house. Ranga’s is in silhouette one leg outside the door and the other inside.**

ರಾವ್ : ಹೋಗ್ತಾ ಇದ್ಯೋ ಬರ್ತಾ ಇದ್ಯೋ? ನಾನು ನೋಡ್ತಾ ಇದೀನಿ, ಎರಡು – ಮೂರು ದಿನದಿಂದ ಏನೋ ನಿನ್ನ ಕಾಡ್ತಾ ಇದೆ...

ಇವತ್ತು ಬೆಳಗ್ಗೆ ‘ಮಯೂರಾ’ ಓದ್ಬೇಕಾದ್ರೆ, ಒಂದು ಒಳ್ಳೆವಿಷ್ಯ ಓದ್ದೆ, ನಮ್ಮೆಲರಲ್ಲೂ ಎರಡು ತರಾ ನಾಯಿರುತ್ತಂತೆ, ಒಂದು ಕಪ್ಪು ನಾಯಿ, ಒಂದು ಬಿಳಿ ನಾಯಿ. ಕೋಪ, ದ್ವೇಷ, ಸುಳ್ಳು, ಭಯ, ಅಹಂ, ದುರಾಸೆ, ಸ್ವಾರ್ಥ, ಇವೆಲ್ಲಾ ಕಪ್ಪು ನಾಯಿ ಗುಣಗಳಂತೆ. ಪ್ರೀತಿ, ಅನುಕಂಪ, ಶಾಂತಿ, ಧೈರ್ಯ, ನಂಬಿಕೆ, ಸತ್ಯ, ನಿಸ್ವಾರ್ಥ ಇವೆಲ್ಲ ಬಿಳಿನಾಯಿ ಗುಣಗಳಂತೆ, ಇವೆರಡು ನಾಯಿಗಳು ನಿರಂತರವಾಗಿ ನಮ್ಮೊಳಗೆ ಕಚ್ಚಾಡ್ತಾ ಇರುತ್ತೆ, ಯಾವ ನಾಯಿ ಗೆಲ್ಲುತ್ತೆ ನೀವೆ ಯೋಚ್ಸಿ ಅಂತ ಹೇಳಿ ತಲೆ ಕೆಡಿಸ್ಬಿಟ್ಟಿದ್ದಾರೆ. ಬೆಳಗ್ಗೆ ಇಂದ ಯೋಚಿಸ್ದೆ.. ಉತ್ತರ ಏನ್ ಗೊತ್ತಾ? ಯಾವ ನಾಯಿಗ್ ಜಾಸ್ತಿ ಬಿಸ್ಕೆಟ್ ತಿನ್ನಿಸ್ತೀಯೋ, ಅದೇ ನಾಯಿ ಗೆಲ್ಲೋದು.. ಫ್ರೀ ಇದ್ದಾಗ ಓದು ಸರಿ ನಾ ಮಲ್ಕೋಂತಿನಿ, ನೀನು ಮಲ್ಕೋ ಶಿವ.. ಬಾಗಿಲೆಲ್ಲಾ ಕರೆಕ್ಟ್ ಆಗಿ ಬೋಲ್ಟ್ ಹಾಕಿದ್ಯ ತಾನೆ?

**Shiva is reading father’s literary books, close it, he picks up a book and walks, he notices the door, latches all 3 bolts as his dad always asked him to and goes inside.**

# 77. INT.DAY.SHIVA'S HOUSE

## Morning after Love story

Sahana wakes up, little startled that she slept over at Shiva's house. She picks up the phone, her mom has repeatedly called her. She sees 15 missed calls. She reacts to it. She looks around for Shiva, finds him passed out, she looks at him and smiles after seeing the book he's holding. She puts the same blanket on him and leaves.

# 78. INT.DAY.KUMAR’S HOUSE

## Ranga decides to stay

Morning shot of Kumar’s house. Knocking heard from Kumar’s room. Starts slowly and then picks up.

**ಕುಮಾರ್(From inside):**Sir…? Sir…? ತೇಗೀರಿ sir… Ranga sir ಸ್ವಲ್ಪ bathroom ಗೆ ಹೋಗ್ಬೇಕು.

**ಕುಮಾರ್:** ರೀ ಸ್ವಾಮಿ...ತಾತಾ...Max ತೇಗೀರಿ, Urgent ಆಗಿದೆ... Max ತಾತಾ.

Cut to inside the room.

**ಕುಮಾರ್(To Laxmi):**ಆ ಉಪ್ಪಿಟ್ಟು ಮಾಡ್ ಮಾಡ್ತಾಕ್ತಿಯಾ! ಬೆಳಿಗ್ಗೆ ನನಿಗ್ಸಂಕಟ.

**ಲಕ್ಷ್ಮಿ:**ಹೋಗಿ ಇನ್ನೊಂದು ಸ್ವಲ್ಪ ಕುಡೀರಿ ಅವನ ಜೊತೆ.

Ranga opens the door.

**ರಂಗ:**ನಮ್ಮನ್ನ ಹುಡುಕ್ಕೊಂಡ್ ಇಲ್ಲಿಗ್ಬರಕ್ಕೆ ಅವನಿಗೆ ಜಾಸ್ತಿ time ಆಗಲ್ಲ, ಇಲ್ಲಿರೋದ್ safe ಅಲ್ಲ, ಬೇರೆ ಯಾವುದಾದ್ರು ಜಾಗಕ್ ಹೋಗ್ಬಹುದಾ?

**ಕುಮಾರ್:**ನನ್ನ guest house-ಗೆ ಹೋಗಬಹುದು sir.

**ರಂಗ:**ಎಲ್ಲಾರು ಹೊರಡಕ್ ವ್ಯವಸ್ಥೆ ಮಾಡ್ಕೊಳಿ.

# 79. INT/EXT.DAY.ROAD

# Ravi Prakash- Santosh split screen

Phone rings, Santosh is in the police station, he picks up the call.

**ರವಿಪ್ರಕಾಶ್:**ಆ ನಾಯಿ ಸಿಕ್ಕಿದ್ನಾ?

**ಸಂತೋಷ್:**ಇಲ್ಲಾ, ಹುಡುಕ್ತಾ ಇದೀನಿ, ಸಿಗ್ತಾನೆ.

**ರವಿಪ್ರಕಾಶ್:**ಸಂತೊಷ್...ನಾವ್ ಅನ್ಕೊಂಡಿದ್ದ plan ಪ್ರಕಾರಾ ಈ matter ಗು ನಮ್ಗು ಯಾವ ಸಂಬಂಧಾನೂ ಇರಬಾರ್ದಾಗಿತ್ತು, ಯಾರ್ಯಾರ್ ನೋಡ್ಬಾರ್ದಾಗಿತ್ತೋ ಅವರೇ ತಿರುಗ್ನೋಡ್ತಾ ಇದಾರೆ. ಇದನ್ನ ಇವಾಗ್ಲೆ ಹೂತಾಕ್ದೆ ಹೋದ್ರೆ ನೋಡ್ತಾ ಇರೋವ್ರು ಬೆರಳ್ ತೋರ್ಸಕ್ ಶುರು ಮಾಡ್ತಾರೆ. ನನ್ನ ತನಕ ಬಂದ್ರೆ ನಿನಿಗೂ ಬಂದಂಗೆ. ಆ ನಾಯಿನ್ ಹುಡುಕ್ಬೇಕಾದ್ರೆ ಇದನ್ನ ಜ್ಞಾಪಕ ಇಟ್ಕೊ.

He hangs up.

**ಸಂತೊಷ್:**ರೀ ತಿಮ್ಮಪ್ಪ! ಬನ್ರಿ ಇಲ್ಲಿ!

# 80. EXT.DAY.ACCIDENT ROAD

## SI investigates accident spot

SI Thimmappa is back at the accident spot, shots of SI at the station, impound where vehicle is kept, analyzing the vehicle and surrounding area of the accident spot and speaking to a couple of people. Passing shots of police jeep. SI discovering Rao's ID where Kumar's vehicle was parked. He recognizes Rao's face from the ID. He calls the number from the ID.

**ತಿಮ್ಮಪ್ಪ:** Hello, Tumkur police station ಇಂದ ಮಾತಾಡ್ತಾ ಇರೋದು. ನಿಮ್ಮಲ್ಲಿ ವೆಂಕೊಬ್ ರಾವ್ ಅಂತ patient ಇದಾರಾ?

**Staff:**ಹೌದು ಸಾರ್! ಹೌದು, ಅವರು ಕಾಣೆಯಾಗಿದಾರೆ.

**ತಿಮ್ಮಪ್ಪ:**ಕಾಣೆಯಾಗಿದಾರಾ?

**Staff:**ಅವರ ಮಗನ್ ಜೊತೆ ಹೊರಗಡೆ ಹೊದಾಗ ತಪ್ಪಿಸ್ಕೊಂಡ್ಬಿಟ್ಟಿದಾರೆ.

**ತಿಮ್ಮಪ್ಪ:** ಅವರು ಮಗಳ್ಲಿರೋದು?

**Staff:**ಮಗಳಿಲ್ಲ ಸಾರ್...ಒಬ್ನೇ ಮಗ.

**ತಿಮ್ಮಪ್ಪ:**ಹೌದಾ? Sure ಆ..?

**Staff:**100% ಸಾರ್. ಯಾಕ್ಸಾರ್? ನಿಮಿಗ್ ಸಿಕ್ಕಿದಾರಾ?

**ತಿಮ್ಮಪ್ಪ:**ಇಲ್ಲ... Investigation ನಡಿತಾ ಇದೆ, ನಾನ್ ವಾಪಸ phone ಮಾಡ್ತೀನಿ.

# 81. EXT.DAY.SAHANA's CAR

# Sahana gets call from old age home

Sahana is at home, her mother is yelling at her continuously, her phone rings, she picks it up.

**ಮಣಿ:**ವೆಂಕೊಬ್ ರಾವ್ ಬಗ್ಗೆ information ಇದೆ ಅಂತ ತುಮಕೂರ್ police station ಇಂದ ಫ಼ೋನ್ಬಂದಿತ್ತಮ್ಮ.

**ಸಹನ:**ಏನಂತ ಸಾರ್?

**ಮಣಿ:** ಅದೆ ಮಾ, ಮತ್ತೆ ಇನ್ನೊಂದ್ police station ಇಂದ phone. ಜಾಸ್ತಿ ಏನು ಹೇಳಿಲ್ಲ, investigation ನಡಿತಾ ಇದೆ ವಾಪಸ್ phone ಮಾಡ್ತೀವಿ ಅಂತ ಹೇಳಿದ್ರು.

ಸಹನ: ಆಯ್ತು sir, ನಾನು checkಮಾಡ್ತೀನಿ.

# 82. INT.DAY.SAHANA'S HOUSE

## Sahana at her place before leaving to Tumkur

Sahana is packing

<u>**ಸುಧಾ:**</u> ಆಗಿರೋದನ್ನ ಇಟ್ಕೊಂಡೇ ಜನ ಇಷ್ಟು ಮಾತಾಡ್ತಾ ಇದಾರೆ, ಆ ಹುಡುಗನ್ ಜೊತೆ ಹಗಲು ರಾತ್ರಿ ಓಡಾಡ್ತಾ ಇದ್ಯಾ. ನಿನ್ನೆ ರಾತ್ರಿ ಅವನ ಮನೇಲ್ಲಿದ್ದೆ ಅಂತ ಜನರಿಗ್ ಗೊತ್ತಾದ್ರೆ ಇನ್ನೇನೇನ್ ಮಾತಾಡ್ಕೊಳ್ತಾರೆ. ಅಲ್ಲ ಕಣೆ, ಅವರ ತಂದೆ ಕಾಣೆಯಾಗಿರೋದು ನೀನ್ಯಾಕ್ ಹೋಗ್ಬೇಕು.

Sahana hugs her mom, picks up her bag…

<u>**ಸಹನ:**</u>ನಾನು ವಾಪಸ್ ಬರೋದು ಯಾವಾಗಂತ ಗೊತ್ತಿಲ್ಲ. ಏನೆ ಇದ್ರು phone ಮಾಡ್ತೀನಿ. Bye ma.

And she walks away.

<u>**ಸುಧ:**</u>ಹೀಗಾದ್ರೆ, ಜೀವನ ಪೂರ್ತಿ ಒಬ್ಬಳೇ ಇರತೀಯಾ! ಏನಾದ್ರು ಮಾಡ್ಕೊ.

# 83. INT.DAY.TUMKUR POLICE STATION

## SI Thimmappa tells Santosh

Santosh is holding Rao's ID card.

**ತಿಮ್ಮಪ್ಪ:** Accident spot ಅಲ್ಲಿ ಹುಡುಕ್ಬೇಕಾದ್ರೆ ಈ ID card ಸಿಕ್ತು, ಈ ತಾತನ್‌ಗು, ನೀವು ಹುಡುಕ್ತಾ ಇರೋ ವ್ಯಕ್ತಿಗೂ ಏನ್ ಸಂಬಂದ ಅಂತ ನನಿಗ್ಗೊತ್ತಿಲ್ಲ. ಆ ಫೋಟೊಲ್ಲಿ ಇರೋವ್ರು ಎಲ್ಲಿದಾರೆ ಅಂತ ನನಿಗೊತ್ತು.

Cut to: Santosh and SI are going toward Kumar's house in jeep.

# 84. INT.DAY.KUMAR’S HOUSE

# Manja updates his location to Reshma

<u>ಮಂಜ:</u>ಸಾರಿ ಕಣೆ, ನಿನ್ನೆ ಫೋನಲ್ಲಿ ಮಾತಾಡಕ್ಕೇ ಆಗ್ಲಿಲ್ಲ. ಆ ರಂಗ, ಸರಿಯಾಗ್ ಹೊಡ್ದು, ಫೋನ್ ಕಿತ್ಕೊಂಬಿಟ್ಟ , ನಿನ್ನ ಜೊತೆ ಮಾತಾಡಿದ್ರೆ ಅವನಿಗೇನೋ ಉರಿ.

<u>ರೇಷ್ಮ:</u>ಎಲ್ಲಿದ್ಯೋ? ಏನಾಗ್ತಾ ಇದೆ? Correct ಆಗಿ ಹೇಳು ನನಿಗೆ.

(Optional Ravi Prakash reveal)

<u>ಮಂಜ:</u>ಏನೇನೋ ಆಗಿದೆ ಕಣೆ. ತಲೆ ಕೆಟ್ಹೋಗಿದೆ.

<u>ರೇಷ್ಮ:</u>ಸರಿ ಎಲ್ಲಿದ್ಯ ಹೇಳು?

<u>ಮಂಜ:</u> Danger ಇದೆ ಅಂತ, ಯಾವುದೋ ಒಂದು ___ guest house ಗೆ ಕರ್ಕೊಂಡ್ಬಂದಿದಾನೆ, ಇಲ್ಲಿ ಅವುಸ್ಕೊಂಡಿದೀವಿ. ನನ್ನ ತಲೆ ತಿನ್ನಕ್ಬಂದ...ಫೋನಲ್ಲಿ ಮಾತಾಡೋದ್ ನೋಡಿದ್ರೆ ಮತ್ತೆ ಹೊಡಿತಾನೆ. ನಾನು ಆಮೇಲೆ ಮಾಡ್ತೀನಿ.

## 85. EXT.DAY.ROAD

## Shiva Sahana Tumkur journey insert

Car passing shots of car on the road.

Shiva notices board to Bombay/Pune while going to Tumkur.

ಶಿವ:ಅಣ್ಣ ನನ್ನನ್ ಹುಡ್ಕೊಂಡು ಎಲ್ಲಾದ್ರು, Bombay ಕಡೆ ಹೋಗಿರಬಹುದಾ?

ಸಹನ: It's unlikely but predict ಮಾಡೋದ್ ಕಷ್ಟ... Let's hope that's not the case, ಸಧ್ಯಕ್ಕೆ ಅಲ್ಲಿ police station ಗೆ ಹೋಗಿ check ಮಾಡೋಣಾ, ಆಮೇಲ್ನೋಡೋಣಾ.

ಶಿವ:ಏನಾಗ್ತಾ ಇದೆ ಅಂತಾನೇ ಗೊತ್ತಾಗ್ತಾ ಇಲ್ಲ. ಥು!

# 86. EXT.DAY.ROAD.

## Santosh gets guesthouse location

Santosh is in the jeep with SI Thimmappa. He gets a call.

**ಸಂತೋಷ್:**ಹಾ! ಸರಿ!

He hangs up.

**ಸಂತೋಷ್:**ಇಲ್ಲಿ _____ guesthouse ಎಲ್ಲಿ ಬರುತ್ತೆ.

**ತಿಮ್ಮಪ್ಪ:**ಹಿಂದೆನೇ ಹೊಯ್ತು ಸಾರ್.

**ಸಂತೋಷ್:**ಸರಿ ಗಾಡಿ ತಿರುಗಿಸ್ಕೊಳಿ.

# 87. EXT.DAY.Brick factory

# Ranga showdown

SI Thimmappa and Santosh ambush Ranga and just as SI arrests Ranga, Santosh takes SI Thimmappa's pistol from his holster and shoots him and then shoots Ranga with his pistol mortally wounding him. Santosh places SI's pistol in Ranga's hand and walks. Ranga, still alive, shoots Santosh.

# 88. EXT.DAY.KUMAR'S HOUSE

## Ranga flashback and farewell

ಮಂಜ: Danger ಇದೆ ಅಂತ, ಯಾವುದೋ ಒಂದು ___ guesthouse ಗೆ ಕರ್ಕೊಂಡ್ಬಂದಿದಾನೆ, ಇಲ್ಲಿ ಅವುಸ್ಕೊಂಡಿದೀವಿ. ನನ್ನ ತಲೆ ತಿನ್ನಕ್ ಬಂದ...ಫೋನಲ್ಲಿ ಮಾತಾಡೋದ್ನೋಡಿದ್ರೆ ಮತ್ತೆ ಹೊಡಿತಾನೆ. ನಾನು ಆಮೇಲೆ ಮಾಡ್ತೀನಿ.

Manja hangs up, gives the phone to Ranga.

Cut to, Ranga is bidding farewell…

ರಂಗ:ನೀವು ನಮ್ಮ ಬಗ್ಗೆ ಎಷ್ಟುಕಮ್ಮಿಮಾತಾಡ್ತೀರೋ ನಿಮಿಗಷ್ಟೇ ಒಳ್ಳೇದು. ನಮ್ಮಕಡೆಯಿಂದ ನಿಮಿಗ್ಯಾವ ತೊಂದ್ರೇನೂ ಬರದೇ ಇರೋ ಹಂಗ್ ನೋಡ್ಕೊಳೊದು ನನ್ನ ಜವಾಬ್ದಾರಿ...(to Manja) ಬಾರೊ. (To Kumar) ನಾವು ಬರ್ತೀವಿ.

Ranga takes a couple of steps and Kumar says…

ಕುಮಾರ್:ಸಾರ್: ಇವ್ರು? (Pointing to Rao)

ರಂಗ:ನಮಿಗೂ ಗೊತ್ತಿಲ್ಲ ನಮ್ಮ್ ದಾರಿಗ್ ಹೆಂಗ್ಬಂದು ಸೇರಕೊಂಡ್ರು ಅಂತ. ನೋಡಿ, ಆದ್ರೆ ನೀವೇ ನೋಡ್ಕೊಳಿ, ಇಲ್ದೆ ಇದ್ರೆ ನಿಮ್ಮಿಷ್ಟ... ಬರತೀನಿ.

Ranga walks, stops at the door, turns to Rao.

ರಂಗ:ಹೋಗ್ ಬರ್ತಿನಿ.

ರಾವ್:ಬರಬೇಕಾದ್ರೆ ಅರ್ಧ liter ಹಾಲು ತೊಗೊಂಡ್ಬಾ ಪಾ.

ರಂಗ:ಅರ್ಧ liter ಅಲ್ಲ, ಒಂದು liter-ಏ ತರ್ತೀನಿ..

Ranga smiles for the first time, everyone smiles.

# 89.EXT.MAGIC HOUR.BRICK FACTORY

# Ranga monologue

Manja rushes to a dying Ranga.

**ಮಂಜ:**ಬನ್ನಿ ಅಣ್ಣ doctor ಹತ್ರ ಹೋಗೋಣಾ.

**ರಂಗ:**ನೀನು ಹೋಗಿ token ತೊಗೊಂಡಿರು, ನಾನ್ಬರ್ತೀನಿ.

**ಮಂಜ:**ಆಯ್ತಣ್ಣ...

**ರಂಗ:**ಲೇ ಪೆದ್ದ...ಬಾರೋ ಇಲ್ಲಿ. ನಾನೆಲ್ಲೂ ಹೋಗ್ತಾ ಇಲ್ವೋ. ಇದೆ last stop. ನಾನು ಹೇಳೋದನ್ನ ಸರಿಯಾಗ್ ಕೇಳಿಸ್ಕೊ. ಆ ಮನೆಯವರಿಗೆ ಏನು ಆಗ್ದೆ ಇರೋ ಹಂಗೆ ನೋಡ್ಕೊ.

**ಮಂಜ (sobbing):**ಅಣ್ಣ...ಆ ತರಾ ಏನು ಹೇಳ್ಬೇಡಿ ಅಣ್ಣ. ನೀವು ಇಲ್ದೆ ಏನ್ಮಾಡ್ಲಿ ನಾನು?

**ರಂಗ:**ಏಯ್! ಅಳೋದ್ನಿಲ್ಸೊ! ನೋಡು...ನಮ್ಮಿಬ್ರುದು ಒಂದೇ ಕಥೆ. ಹುಟ್ಟಕಿಂತ ಮುಂಚೇನೇ ಕಳೆದೋಗಿರೊರು. ನಾವು ಎಲ್ಲಿಂದ ಬಂದ್ವಿ ಅಂತಾನೂ ಗೊತ್ತಿಲ್ಲ, ಎಲ್ಲಿಗ್ ಹೋಗ್ಬೇಕು ಅಂತ ನಾನಂತು ಅರ್ಥ ಮಾಡ್ಕೊಳ್ಳಿಲ್ಲ... (Pause) ನೀನಾದ್ರು ಅರ್ಥ ಮಾಡ್ಕೊ.

**ಮಂಜ:**ಅಣ್ಣ ನಾನ್ ಓಡೋಗ್ doctor ಕರ್ಕೊಂಡ್ ಬರ್ತೀನಣ್ಣ...

**ರಂಗ:**ಏ...ಬೇಡ್ವೋ... ಇದು correct ಆಗಿದೆ. ಒಳ್ಳೇದು ಮಾಡೋದ್ರಿಂದ ಎಲ್ಲಿ ನನ್ನ ಜೀವನ ಕಳ್ಕೊಂತೀನೊ ಅಂತ ಇಷ್ಟು ದೂರಾ ಬಂದೆ, ಆದ್ರೆ ಹೋಗೋಕಿಂತ ಮುಂಚೆ ಒಂದು ಒಳ್ಳೆ ಕೆಲಸ ಮಾಡಿ, ಇಷ್ಟು ದಿನ ಅನುಭವಿಸ್ದೇ ಇರೊ ನೆಮ್ಮದಿ, ಕಾಣಿಸ್ತಾ ಇದೆ. (He points into randomness)

Manja stupidly turns, he turns back to see Ranga dead. He breaks down completely.

# 90.INT/EXT.DAY/NIGHT.POLICESTATION

## Shiva and Sahana at Tumkur police station

Shiva and Sahana arrive at Tumkur police station. Shiva walks into the police station and enquires with a cop.

**ಶಿವ:**ಸಾರ್, ನಾವು ಬೆಂಗಳೂರಿಂದ ಬಂದಿದಿವಿ, ನಮ್ಮ ತಂದೆ ವೆಂಕೊಬ್ ರಾವ್ ಕಾಣೆಯಾಗಿದಾರೆ, ನಿಮ್ಮ police station ಇಂದ ಅವರ ಬಗ್ಗೆ information ಇದೆ ಅಂತ ಫೋನ್ಬಂದಿತ್ತು.

**Cop:**ವೆಂಕೊಬ್ ರಾವ್ check ಮಾಡ್ತೀನಿ ಸಾರ್... ಒಂದು ನಿಮಿಷ.

The cop goes inside and returns after a few minutes.

**Cop:**ಇಲ್ಲಿಂದ ನಾವ್ಯಾರು ಫೋನ್ಮಾಡಿಲ್ವಲ್ಲ. Control room ನಲ್ಲೂ check ಮಾಡಿದ್ವಿ, ಅಲ್ಲಿಂದಾನು ಏನು information ಬಂದಿಲ್ಲಾ.

**ಸಹನ:** Please ಇನ್ನೊಂದ್ಸಲಿ check ಮಾಡಿ ಸಾರ್.

**Cop:**ಇಲ್ಲಾಮಾ station ಇಂದ ಏನೇ ಫೋನ್ಬಂದ್ರು, ನಮ್ಮಲ್ಲಿ record ಇರುತ್ತೆ, ನಿಮಿಗ್ಯಾರೊ wrong information ಕೊಟ್ಟಿರಬೇಕು. ಬಟ್ 100% ಇಲ್ಲಿಂದ ಅಂತು ಫೋನ್ಬಂದಿಲ್ಲ. ಬೇಕಾದ್ರೆ...ನಮ್ಮ S.I ವಾಪಸ್ ಬರತಾರೆ, ಅವರ ಜೊತೇನೂ ಮಾತಾಡಿ.

**ಶಿವ:**ಸರಿ, ನಾವು ಕಾಯ್ತೀವಿ.

Time lapse to suggest that Shiva and Sahana have waited for a while.

**Cop:** S.I busy ಇರಬೇಕು, phone answer ಮಾಡ್ತಾ ಇಲ್ಲಾ, ಅವರು ಬಂದ್ಮೇಲ್ ನಾನ್ವೇಕಾದ್ರೆ ಫೋನ್ಮಾಡಸ್ತೀನಿ.

Shiva gets up and leaves, cut to, he's in the car.

**ಸಹನ:**ನಾನಿಲ್ಲಿ ಒಂದು ಎರಡು ಕಡೆ poster ಅಂಟಿಸ್ಬಿಟ್ಟ ಬರ್ತೀನಿ.

**ಶಿವ:** It's a waste of time, this is another dead end, ಸುಮ್ನೆ Bangaloreನಲ್ಲಿರೋ leads check ಮಾಡೋಣಾ.

Sahana doesn't listen, she goes up and puts a couple of posters.

# <u>91. EXT.NIGHT.ROAD.</u>

# <u>Shiva Sahana returning from Tumkur</u>

Shiva and Sahana are returning in the car, feeling quite dejected.

**<u>ಶಿವ:</u>**ಅವರಿಗ್ ಒಂದು ವೇಳೆ ಏನಾದ್ರು ಆಗಿದ್ರು, ನೋವು ಅನುಭವಿಸ್ದೆ ಹೋಗಿದ್ರೆ ಸಾಕು...

**<u>ಸಹನ:</u>**ಶಿವ...ಯಾಕ್ ಆ ತರಾ ಮಾತಾಡ್ತಾ ಇದ್ಯಾ? Let's not give up hope.

**<u>ಶಿವ:</u>**ಶಿವ: ಇನ್ನೇನು hope-u ಐವತ್ತು ಕಡೆಯಿಂದ ಬಂದಿದೆ phone. I'm sorry…

(Optional) Shiva's car goes past Manja on the road.

## 92.INT.NIGHT.BUS.

Manja boards a bus and leaves

## 93.INT.NIGHT.SHIVA'S HOUSE

Shiva visit's his father's room and collapses

## 94.INT/EXT.DAY/NIGHT.MULTIPLE LOCATIONS

Kumar reads about Ranga, SI and Santosh's death

## 95.INT.NIGHT.RAVI's ADDA

Manja kills Ravi Prakash and Reshma

## 96.INT/EXT.DAY/NIGHT.MULTIPLE LOCATIONS

Flashforward song-2months time pass by

## 96A.INT.DAY.SHIVA'S OFFICE

Shiva decides not to go to NY and tells the same to Jaswinder

## 97.EXT.DAY.(?-ROAD).

Kumar sees a part of Rao's missing person

Poster and calls up Shiva

**98. INT.DAY.SAHANA’S HOUSE (TO BE shown in 2 months montage)**

**Shiva goes to Sahana’s house but Sudha asks him to stay away**

**99. INT.DAY.KUMAR’S HOUSE**

**Shiva picks up Rao and has an emotional reunion**

**100. INT.DAY.SHIVA’S HOUSE**

**Rao narrates his love story**

**101. INT/EXT.DAY.SAHANA’S HOUSE**

**Shiva knocks on Sahana’s door**